ಬೆಂಗಳೂರು: ‘ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಕಾಯಕಲ್ಪ ನೀಡುವ ಮೂಲಕ ಪುಸ್ತಕೋದ್ಯಮ ಮತ್ತು ಪುಸ್ತಕ ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕು’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ನಿಡಸಾಲೆ ಪುಟ್ಟಸ್ವಾಮಯ್ಯ–75ರ ಸಂಭ್ರಮ ಸಮಿತಿ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನಿಡಸಾಲೆ ಪುಟ್ಟಸ್ವಾಮಯ್ಯ ಅವರನ್ನು ಅಭಿನಂದಿಸಿ, ‘ಅಮೃತ ಕಥಾನಕ’ ಅಭಿನಂದನಾ ಗ್ರಂಥ ಬಿಡುಗಡೆ ಮಾಡಿದರು.

ಇದೇ ವೇಳೆ ಮಾತನಾಡಿದ ಅವರು, ‘ಇಲಾಖೆಯು ಏಕಗವಾಕ್ಷಿ ಯೋಜನೆಯಡಿ ಆಯ್ಕೆಯಾದ 2020ರ ಪುಸ್ತಕಗಳ ಖರೀದಿ ಪ್ರಕ್ರಿಯೆಯನ್ನು ಈವರೆಗೂ ಪೂರ್ಣಗೊಳಿಸಿಲ್ಲ. ಒಂದಷ್ಟು ಪುಸ್ತಕಗಳಿಗೆ ಮಾತ್ರ ಹಣ ಸಂದಾಯವಾಗಿದೆ. ಸರ್ಕಾರ ಅಗತ್ಯ ಅನುದಾನ ನೀಡದಿರುವುದೇ ಇದಕ್ಕೆ ಮುಖ್ಯ ಕಾರಣ. 2021ರ ಪುಸ್ತಕಗಳು ಆಯ್ಕೆಯಾದರೂ ಸರ್ಕಾರವು ಈವರೆಗೂ ಪಟ್ಟಿಯನ್ನು ಪ್ರಕಟಿಸಿಲ್ಲ. ಬಜೆಟ್‌ನಲ್ಲಿ ಇಲಾಖೆಗೆ ಅನುದಾನವನ್ನೂ ನೀಡುತ್ತಿಲ್ಲ. ಹೀಗಾದರೆ ಪುಸ್ತಕ ಸಂಸ್ಕೃತಿ ಬೆಳೆಸುವುದು ಹೇಗೆ’ ಎಂದು ಪ್ರಶ್ನಿಸಿದರು.

ಕಾರ್ಯಕ್ರಮದಲ್ಲಿ ನಿಡಸಾಲೆ ಪುಟ್ಟಸ್ವಾಮಯ್ಯ ಹಾಗೂ ಸುಶೀಲಾ ದಂಪತಿಯನ್ನು ಅಭಿನಂದಿಸಲಾಯಿತು. ಮಲ್ಲೇಪುರಂ ಜಿ. ವೆಂಕಟೇಶ, ಎಚ್‌.ಎಲ್‌. ಪುಷ್ಪ, ಬರಗೂರು ರಾಮಚಂದ್ರಪ್ಪ, ಹಂ.ಪ. ನಾಗರಾಜಯ್ಯ, ದೊಡ್ಡರಂಗೇಗೌಡ, ವೂಡೇ ಪಿ. ಕೃಷ್ಣ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

‘ಪುಸ್ತಕಗಳಿಗೆ ಸಂಬಂಧಿಸಿದಂತೆ ಪುಸ್ತಕೋದ್ಯಮ ಮತ್ತು ಪುಸ್ತಕ ಸಂಸ್ಕೃತಿಗಳೆಂಬ ಎರಡು ಧಾರೆಗಳಿವೆ. ಇವೆರಡನ್ನು ಉಳಿಸುವ ಕೆಲಸವನ್ನು ಗ್ರಂಥಾಲಯ ಇಲಾಖೆ ಮಾಡಬೇಕಿತ್ತು.

> **ಏಕಗವಾಕ್ಷಿ ಯೋಜನೆಯಡಿ ಪುಸ್ತಕಗಳ ಖರೀದಿ ಸಮರ್ಪಕವಾಗಿ ನಡೆಯದಿದ್ದರಿಂದ ಪ್ರಕಾಶಕರು ಹಾಗೂ ಲೇಖಕರು ಸಂಕಷ್ಟಕ್ಕೆ ಸಿಲುಕಿದ್ದಾರೆ**
> **ಬರಗೂರು ರಾಮಚಂದ್ರಪ್ಪ,** ಸಾಹಿತಿ

ಆದರೆ, ಇಲಾಖೆಯೇ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಯಾವ ಸಚಿವರಿಗೂ ಈ ಇಲಾಖೆ ಬೇಡವಾಗಿದೆ. ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನೂ ಯಾರು ಕೇಳುತ್ತಿರಲಿಲ್ಲ. ಇತ್ತೀಚಿಗೆ ಪ್ರಚಾರವಾದರೂ ಸಿಗುತ್ತದೆ ಎಂಬ ಕಾರಣಕ್ಕೆ ಪಡೆಯುತ್ತಿದ್ದಾರೆ. ಸಚಿವರು ಸಮರ್ಥರಾಗಿದ್ದರೆ ಯಾವುದೇ ಇಲಾಖೆ ನೀಡಿದರೂ ಉತ್ತಮವಾಗಿ ಕೆಲಸ ಮಾಡಬಹುದು’ ಎಂದರು.

ಬರಗೂರು ಅವರ ಮಾತುಗಳಿಗೆ ಸಮ್ಮತಿ ಸೂಚಿಸಿದ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿಯ ಅಧ್ಯಕ್ಷರೂ ಆಗಿರುವ ಸಾಹಿತಿ ಕರೀಗೌಡ ಬೀಚನಹಳ್ಳಿ, ‘ಆಯ್ಕೆಯಾದ ಪುಸ್ತಕಗಳ ಖರೀದಿಗೆ ಸಂಬಂಧಿಸಿದಂತೆ ಎಷ್ಟೇ ಪ್ರಯತ್ನಿಸಿದರೂ ಸರ್ಕಾರ ಸ್ಪಂದಿಸುತ್ತಿಲ್ಲ. ಏಕಗವಾಕ್ಷಿ ಯೋಜನೆಯಡಿ ಪುಸ್ತಕಗಳ ಖರೀದಿಗೆ ಅಗತ್ಯ ಅನುದಾನ ಒದಗಿಸದಿದ್ದರಿಂದ ಇಲಾಖೆಗೆ ಹಂಚಿಕೆಯಾದ ಅನುದಾನದಲ್ಲಿಯೇ ಕ್ರಿಯಾ ಯೋಜನೆ ರೂಪಿಸಲಾಗುತ್ತಿದೆ. ಪ್ರಕಾಶಕರು ಹಾಗೂ ಲೇಖಕರ ಸಮಸ್ಯೆಯನ್ನು ಸರ್ಕಾರ ಆಲಿಸಬೇಕು’ ಎಂದು ಹೇಳಿದರು.

ಸಾಹಿತಿಗಳಾದ ಹಂ.ಪ. ನಾಗರಾಜಯ್ಯ, ದೊಡ್ಡರಂಗೇಗೌಡ, ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್‌. ಎಲ್‌. ಪುಷ್ಪ ಹಾಗೂ ಅಭಿನಂದನಾ ಸಮಿತಿ ಪ್ರಧಾನ ಕಾರ್ಯದರ್ಶಿ ಆರ್‌. ದೊಡ್ಡೇಗೌಡ ಅವರು ನಿಡಸಾಲೆ ಪುಟ್ಟಸ್ವಾಮಯ್ಯ ಅವರ ಜತೆಗಿನ ಒಡನಾಟ ಸ್ಮರಿಸಿಕೊಂಡು, ಅವರ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು.

‘ಕ್ಯಾನ್ಸರ್: ಘೋಷಿತ ಕಾಯಿಲೆಯಾಗಿ ಗುರುತಿಸಿ’

ಬೆಂಗಳೂರು: ‘ಕ್ಯಾನ್ಸರ್ ರೋಗವನ್ನು ಘೋಷಿತ ಕಾಯಿಲೆಯೆಂದು ಗುರುತಿಸಿ, ರಾಷ್ಟ್ರೀಯ ನೀತಿ ಜಾರಿಗೆ ತರಬೇಕು’ ಎಂದು ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಕರ್ನಾಟಕ ಶಾಖೆ, ರಾಜ್ಯ ಆಂಕಾಲಜಿ ಅಸೋಸಿಯೇಷನ್ ಹಾಗೂ ಅಪೋಲೊ ಆಸ್ಪತ್ರೆ ಆಗ್ರಹಿಸಿವೆ.

ಜಂಟಿಯಾಗಿ ನಗರದಲ್ಲಿ ಈಚೆಗೆ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಐಎಂಎ ಬೆಂಗಳೂರು ಶಾಖೆ ಅಧ್ಯಕ್ಷ ಡಾ.ಎಸ್. ವಿಜಯಾನಂದ್, ‘ಕ್ಯಾನ್ಸರ್ ಪ್ರಕರಣಗಳು ಹೆಚ್ಚುತ್ತಿವೆ. ಇದನ್ನು ಘೋಷಿತ ಕಾಯಿಲೆಯಡಿ ತಂದು, ಸಮಗ್ರ ಆರೋಗ್ಯ ಮಾಹಿತಿ ವೇದಿಕೆ ಪೋರ್ಟಲ್‌ನಲ್ಲಿ ವರದಿ ಮಾಡಬೇಕು. ಇದರಿಂದ ಯಾವ ಭಾಗದಲ್ಲಿ ಯಾವ ರೀತಿಯ ಕ್ಯಾನ್ಸರ್ ಪ್ರಕರಣಗಳು ಹೆಚ್ಚು ವರದಿಯಾಗುತ್ತಿವೆ ಎಂದು ತಿಳಿಯಲು ಸಾಧ್ಯ. ವಯೋಮಾನವಾರು ವಿಂಗಡಿಸಲು, ಸಂಶೋಧನೆಗೆ ಹಾಗೂ ಚಿಕಿತ್ಸೆ ನೀಡಲೂ ಅನುಕೂಲವಾಗಲಿದೆ. ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ’ ಎಂದು ತಿಳಿಸಿದರು.

‘ದಲಿತರಿಗೆ ಸಿಎಂ ಸ್ಥಾನ ಯಾವಾಗ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಮುಖ್ಯಮಂತ್ರಿಯಾಗುವ ಅವಕಾಶವನ್ನು ಒಕ್ಕಲಿಗರಿಗೆ, ಲಿಂಗಾಯತರಿಗೆ ಎಷ್ಟು ಬಾರಿ ನೀಡಬೇಕು? ದಲಿತರು ಈ ಸ್ಥಾನ ಪಡೆಯುವುದು ಯಾವಾಗ’ ಎಂದು ಕರ್ನಾಟಕ ನವ ಜಾಗೃತಿ ವೇದಿಕೆಯ ಅಧ್ಯಕ್ಷರೂ ಆಗಿರುವ ದಲಿತ ಮುಖಂಡ ಅನಂತರಾಯಪ್ಪ ಪ್ರಶ್ನಿಸಿದರು.

ಅಂಬೇಡ್ಕರ್ ಭವನದಲ್ಲಿ ನಡೆದ ‘ಸಂವಿಧಾನದ ಮೇಲೆ ದಾಳಿ’ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘12 ಬಾರಿ ಲಿಂಗಾಯತ, ಎಂಟು ಬಾರಿ ಒಕ್ಕಲಿಗ ಸಮುದಾಯವರು ಮುಖ್ಯಮಂತ್ರಿ ಆಗಿದ್ದಾರೆ. ಆದರೆ, ರಾಜ್ಯದಲ್ಲಿ ಶೇ 25ರಷ್ಟು ಜನಸಂಖ್ಯೆ ಇರುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ಒಮ್ಮೆಯೂ ಈ ಅವಕಾಶ ಸಿಕ್ಕಿಲ್ಲ’ ಎಂದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹುದ್ದೆ ತ್ಯಜಿಸುವ ಸಂದರ್ಭ, ಅನಿವಾರ್ಯತೆ ಉಂಟಾದರೆ, ಸಂವಿಧಾನ ವಿರೋಧಿಗಳನ್ನು ಹಿಮ್ಮೆಟ್ಟಿಸುವ ಧೈರ್ಯ, ಸಾಮರ್ಥ್ಯ, ಚಾಣಾಕ್ಷತನ ಇರುವಂಥ ದಲಿತರೊಬ್ಬರಿಗೆ ಆ ಸ್ಥಾನವನ್ನು ನೀಡಬೇಕು. ಸಂವಿಧಾನವನ್ನು ರಕ್ಷಿಸುವವರ ಕಡೆಗೆ ಗಮನಹರಿಸದೆ ಅಧಿಕಾರ ಹಿಡಿಯಲು, ಅಧಿಕಾರ ಕೈಗೆ ಬರುತ್ತಿದ್ದಂತೆ ಅದನ್ನು ಭದ್ರಪಡಿಸಿಕೊಳ್ಳಲು, ತಮ್ಮ ಆಸ್ತಿಪಾಸ್ತಿ ರಕ್ಷಿಸಲು ರಾಜಕೀಯ ಮಾಡುವವರನ್ನು ದೂರ ಇಡಬೇಕು’ ಎಂದೂ ಅವರು ಹೇಳಿದರು.

ವೇದಿಕೆಯ ಉಪಾಧ್ಯಕ್ಷ ಬಿ.ಜಿ. ಲೋಕೇಶ್, ಮುಖಂಡರಾದ ಚಂದ್ರಶೇಖರ್, ಸಾಹಿತಿ ರಾಜಶೇಖರ ಮುಂತಾದವರು ಕಾರ್ಯಕ್ರಮದಲ್ಲಿದ್ದರು.



ರಾಜ್ಯಮಟ್ಟದ ಪ್ರತಿಭಾ ಕಾರಂಜಿ ವಿಜೇತರು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಇಲ್ಲಿನ ಮುರುಘರಾಜೇಂದ್ರ ಬೃಹನ್ಮಠದ ಅನುಭವ ಮಂಟಪದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ವತಿಯಿಂದ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಶನಿವಾರ ಸಮಾರೋಪಗೊಂಡಿತು.

ವಿವಿಧ ವಿಭಾಗಗಳಲ್ಲಿ ವಿಜೇತರಾದ ಬೆಂಗಳೂರಿನ ಸ್ಪರ್ಧಿಗಳ ವಿವರ ಇಂತಿದೆ.

- **ತೆಲುಗು ಭಾಷಣ:** ದಿನೇಶ್ ಕಾರ್ತಿಕ್, ಸರ್ಕಾರಿ ತೆಲುಗು ಪ್ರೌಢಶಾಲೆ, ಶಿವಾಜಿನಗರ, ಬೆಂಗಳೂರು ಉತ್ತರ–ತೃತೀಯ.
- **ತಮಿಳು ಭಾಷಣ:** ವಿ.ಆಕಾಶ್, ಗಾಂಧಿ ವಿದ್ಯಾಶಾಲೆ, ಶ್ರೀರಾಂಪುರ, ಬೆಂಗಳೂರು ನಗರ– ದ್ವಿತೀಯ.
- **ಧಾರ್ಮಿಕ ಪಠಣ ಸಂಸ್ಕೃತ:** ಗೌತಮಿ, ಗಾರ್ಡನ್ ಸಿಟಿ ಪ್ರೌಢಶಾಲೆ, ಬೆಂಗಳೂರು ಉತ್ತರ– ದ್ವಿತೀಯ.
- **ಭರತ ನಾಟ್ಯ:** ವಿ.ಬಿ.ಶ್ರುತಿ, ಕ್ರೈಸ್ಟ್ ಕಿಂಗ್ ಪಬ್ಲಿಕ್ ಶಾಲೆ, ಬೆಂಗಳೂರು– ತೃತೀಯ.
- **ರಂಗೋಲಿ:** ಸಿ.ಭುವನ್, ಕೈರಳಿ ನಿಲಯಂ ಪ್ರೌಢಶಾಲೆ, ಬೆಂಗಳೂರು ದಕ್ಷಿಣ–ದ್ವಿತೀಯ.

ಸಮಗ್ರ ಕೃಷಿ ವಿಶ್ವವಿದ್ಯಾಲಯ ಪ್ರಸ್ತಾವ ಕೈಬಿಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯದಲ್ಲಿ ಸಮಗ್ರ ಕೃಷಿ ವಿಶ್ವವಿದ್ಯಾಲಯ ಪ್ರಾರಂಭಿಸುವುದರಿಂದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಘನತೆಗೆ ಧಕ್ಕೆಯಾಗಲಿದೆ. ರಾಜ್ಯ ಸರ್ಕಾರ ಈ ಪ್ರಸ್ತಾವವನ್ನು ಕೈಬಿಡಬೇಕು ಎಂದು ಡಾ.ಎಂ.ಎಚ್. ಮರೀಗೌಡ ಹಾರ್ಟಿಕಲ್ಚರ್ ಎಜುಕೇಷನ್ ಆ್ಯಂಡ್ ರೀಸರ್ಚ್ ಫೌಂಡೇಶನ್ ಆಗ್ರಹಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಫೌಂಡೇಶನ್ ಅಧ್ಯಕ್ಷ ಕೆ. ನಾರಾಯಣಸ್ವಾಮಿ, ‘ರಾಜ್ಯದಲ್ಲಿ ಈಗಾಗಲೇ ಆರು ಕೃಷಿ ವಿಶ್ವವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿವೆ. ಈ ಆರರಲ್ಲಿ ಶೇಕಡ 55 ರಿಂದ 60ರಷ್ಟು ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯ ಕೊರತೆ ಇದೆ. ಈ ಹುದ್ದೆಗಳ ಭರ್ತಿಗೆ ಪ್ರಸ್ತಾವ ಸಲ್ಲಿಸಿದರೆ ಸರ್ಕಾರ ಹಣಕಾಸಿನ ಕೊರತೆ ಸೇರಿದಂತೆ ಇತರೆ ಕಾರಣಗಳನ್ನು ನೀಡುತ್ತಿದೆ. ಇಂತಹ ಸಂದರ್ಭದಲ್ಲಿ ನೂತನ ಸಮಗ್ರ ಕೃಷಿ ವಿಶ್ವವಿದ್ಯಾಲಯದ ಸ್ಥಾಪಿಸುವ ಅವಶ್ಯಕತೆ ಇದೆಯೇ’ ಎಂದು ಪ್ರಶ್ನಿಸಿದರು.

‘ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಚಾಮರಾಜನಗರ ಜಿಲ್ಲೆಯಲ್ಲಿರುವ ಕೃಷಿ ಕಾಲೇಜಿನಲ್ಲಿ ಕಾಯಂ ಪ್ರಾಂಶುಪಾಲರು ಹಾಗೂ ಸಿಬ್ಬಂದಿ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ನೂತನ ಸಮಗ್ರ ಕೃಷಿ ವಿಶ್ವವಿದ್ಯಾಲಯಕ್ಕೆ ಮೂಲಸೌಕರ್ಯ ಸೇರಿದಂತೆ ಸಿಬ್ಬಂದಿ ನೇಮಕಾತಿ ಸಾಧ್ಯವೇ?’ ಎಂದು ಹೇಳಿದರು.

‘ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ ರಾಷ್ಟ್ರ ಮಟ್ಟದಲ್ಲಿ ಉತ್ತಮ ಹೆಸರಿದೆ. 2013ರಲ್ಲಿ ಸರ್ದಾರ್ ವಲ್ಲಭ ಬಾಯಿ ಪಟೇಲ್ ಉತ್ತಮ ಕೃಷಿ ವಿಶ್ವವಿದ್ಯಾಲಯ ಪ್ರಶಸ್ತಿ ಪಡೆದುಕೊಂಡಿದೆ. ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಸಂಸ್ಥೆಗಳಿಂದ ಧನಸಹಾಯ ಪಡೆದುಕೊಂಡು ಸಂಶೋಧನೆಗಳನ್ನು ಮಾಡುತ್ತಿದೆ. ನೂತನ ವಿಶ್ವವಿದ್ಯಾಲಯ ಸ್ಥಾಪಿಸಿದರೆ ಈ ಎಲ್ಲ ಅನುದಾನಗಳಿಂದ ವಂಚಿತವಾಗುವ ಸಾಧ್ಯತೆ ಇದೆ’ ಎಂದರು.

ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಮಾತನಾಡಿ, ‘ಮಂಡ್ಯ ಜಿಲ್ಲೆಯಲ್ಲಿ ಕಬ್ಬು ಹೆಚ್ಚಾಗಿ ಬೆಳೆಯಲಾಗುತ್ತದೆ. ಇಲ್ಲಿನ ಪ್ರತಿಯೊಂದು ಗ್ರಾಮ ಪಂಚಾಯಿತಿಗಳಲ್ಲಿ ಬೆಲ್ಲದ ಉತ್ಪಾದನಾ ಘಟಕಗಳನ್ನು ಸ್ಥಾಪಿಸಬೇಕು. ಇದರಿಂದ ಕಬ್ಬು ಬೆಳೆಯುವ ರೈತರಿಗೆ ಸಕಾಲದಲ್ಲಿ ಹಣ ಪಾವತಿ ಹಾಗೂ ಸ್ಥಳೀಯ ಯುವಕರಿಗೆ ಉದ್ಯೋಗಗಳು ಸಿಗಲಿವೆ. ನಾಗಮಂಗಲದಲ್ಲಿ ಹೊಸ ತೋಟಗಾರಿಕಾ ಕಾಲೇಜು ಪ್ರಾರಂಭಿಸಿ, ಒಣ ಬೇಸಾಯ ತೋಟಗಾರಿಕೆ ತಂತ್ರಜ್ಞಾನವನ್ನು ಇಲ್ಲಿನ ರೈತರಿಗೆ ದೊರೆಯುವಂತೆ ಮಾಡಬೇಕು’ ಎಂದು ಸಲಹೆ ನೀಡಿದರು.



ನಮ್ಮ ಮೆಟ್ರೊ: ಜನದಟ್ಟಣೆ ಹೊರತಾದ ಅವಧಿಗೆ ಮತ್ತು ರಜಾದಿನಗಳಲ್ಲಿ ಶೇ 10ರಷ್ಟು ರಿಯಾಯಿತಿ

ಪ್ರಯಾಣ ದರ ಶೇ 47ರಷ್ಟು ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸ್ ದರ ಹೆಚ್ಚಳದಿಂದ ಬಸವಳಿದಿದ್ದ ಪ್ರಯಾಣಿಕರಿಗೆ 'ನಮ್ಮ ಮೆಟ್ರೊ' ಕೂಡ ದರ ಏರಿಸಿ ಬರೆ ಎಳೆದಿದೆ. ಟಿಕೆಟ್ ದರವನ್ನು ಶೇ 47ರಷ್ಟು (ರಿಯಾಯಿತಿ ಹೊರತುಪಡಿಸಿ) ಹೆಚ್ಚಳ ಮಾಡಿದೆ. ಸ್ಮಾರ್ಟ್‌ಕಾರ್ಡ್‌ದಾರರಿಗೆ ಜನದಟ್ಟಣೆ ಅವಧಿ ಹೊರತುಪಡಿಸಿ ಉಳಿದ ಅವಧಿಗಳಿಗೆ ಮತ್ತು ರಜಾದಿನಗಳಲ್ಲಿ ಶೇ 10ರಷ್ಟು ರಿಯಾಯಿತಿ ನೀಡುತ್ತಿದೆ.

ಪ್ರಯಾಣ ದರವನ್ನು ನಿಲ್ದಾಣದಿಂದ ನಿಲ್ದಾಣಕ್ಕೆ ನಿಗದಿ ಮಾಡುವ ಬದಲು ಕಿಲೋಮೀಟರ್ ಆಧಾರದಲ್ಲಿ ನಿಗದಿ ಮಾಡಲಾಗಿದೆ. ಜೊತೆಗೆ ಆರಂಭಿಕ ನಿಲ್ದಾಣಗಳಿಗೆ ದರ ಹೆಚ್ಚಳ ಮಾಡಿಲ್ಲ. ಆನಂತರ ಪ್ರತಿ 2 ಕಿ.ಮೀ.ಗೆ ₹10ರಂತೆ ಹೆಚ್ಚಳ ಮಾಡಿದೆ. ಇದು ಮೊದಲ 10 ಕಿ.ಮೀ.ವರೆಗೆ ಸಂಚರಿಸುವವರಿಗೆ ಅನ್ವಯವಾಗುತ್ತದೆ. 10 ಕಿ.ಮೀ.ಗಿಂತ ಹೆಚ್ಚು ದೂರ ಸಂಚರಿಸುವವರಿಗೆ ಟಿಕೆಟ್ ದರದ ಏರಿಕೆಯ ವೇಗ ಸ್ವಲ್ಪ ಕಡಿಮೆಯಾಗಲಿದೆ. 10 ಕಿ.ಮೀ. ನಂತರದ ಪ್ರತಿ 5 ಕಿ.ಮೀ.ಗೆ ₹10 ಹೆಚ್ಚಳವಾಗಲಿದೆ.

ಈ ಹಿಂದೆ ಎರಡನೇ ನಿಲ್ದಾಣಕ್ಕೆ ₹15 ಆನಂತರ ₹2 ಅಥವಾ ₹3 ಹೆಚ್ಚಳವಾಗುತ್ತಿತ್ತು. ಆದರೆ ಪರಿಷ್ಕೃತ ದರದಲ್ಲಿ ಭಾರಿ ಏರಿಕೆಯಾಗಿದೆ. ಈಗ ಎಲ್ಲ ಏರಿಕೆಯೂ ₹10ಕ್ಕಿಂತ ಕಡಿಮೆ ಇಲ್ಲ. ಪ್ರತಿ ನಿಲ್ದಾಣಗಳ ನಡುವಿನ ಅಂತರ ಬೇರೆ ಬೇರೆ ಆಗಿರುವುದರಿಂದ ದರವೂ ಬೇರೆ ಬೇರೆಯಾಗಲಿದೆ. ಹಿಂದೆ ಮೊದಲ ನಿಲ್ದಾಣಕ್ಕೆ ₹10, ಎರಡನೇ ನಿಲ್ದಾಣಕ್ಕೆ ₹15 ಇತ್ತು. ಈಗ ಹೊರಟಲ್ಲಿಂದ ಸಿಗುವ ಎರಡು ಸ್ಟೇಷನ್‌ಗಳು 2 ಕಿ.ಮೀ. ಒಳಗೆ ಇದ್ದರೆ ಮೊದಲ ಸ್ಟೇಷನ್‌ಗೂ ₹10, ಎರಡನೇ ಸ್ಟೇಷನ್‌ಗೂ ಅಷ್ಟೇ ಇರಲಿದೆ.

ರಿಯಾಯಿತಿ: ಮೆಟ್ರೊ ಸ್ಮಾರ್ಟ್‌ಕಾರ್ಡ್ ಹೊಂದಿರುವವರಿಗೆ ಶೇ 5 ರಿಯಾಯಿತಿ ಈಗಾಗಲೇ ಇದೆ. ಜನದಟ್ಟಣೆ ಕಡಿಮೆ ಇರುವ (ನಾನ್ ಪೀಕ್ ಅವರ್) ಅವಧಿಯಲ್ಲಿ ಪ್ರಯಾಣಿಸಿದರೆ ಹೆಚ್ಚುವರಿಯಾಗಿ ಶೇ 5 ರಿಯಾಯಿತಿ ದೊರೆಯಲಿದೆ.

ವಾರದ ದಿನಗಳಲ್ಲಿ ಬೆಳಿಗ್ಗೆ 8ರಿಂದ ಮಧ್ಯಾಹ್ನ 12ರವರೆಗೆ ಹಾಗೂ ಸಂಜೆ 4ರಿಂದ ರಾತ್ರಿ 9ರವರೆಗೆ ಜನದಟ್ಟಣೆ ಅವಧಿ ಎಂದು ಗುರುತಿಸಲಾಗಿದೆ. ಉಳಿದ ಅವಧಿಯಲ್ಲಿ ಪ್ರಯಾಣಿಸಿದರೆ ಮಾತ್ರ ಹೆಚ್ಚುವರಿ ರಿಯಾಯಿತಿ ದೊರೆಯಲಿದೆ. ಎಲ್ಲ ಭಾನುವಾರ ಮತ್ತು ರಾಷ್ಟ್ರೀಯ ರಜಾದಿನಗಳಲ್ಲಿ (ಜನವರಿ 26, ಆಗಸ್ಟ್ 15, ಅಕ್ಟೋಬರ್ 2) ದಿನಪೂರ್ತಿ ಶೇ 10ರಷ್ಟು ರಿಯಾಯಿತಿ ದೊರೆಯಲಿದೆ.

ಪ್ರಯಾಣಕ್ಕೆ ಬಳಸುವ ಸ್ಮಾರ್ಟ್‌ಕಾರ್ಡ್‌ನಲ್ಲಿ ಹಿಂದೆ ಕನಿಷ್ಠ ₹50 ಇದ್ದರೆ ಸಾಕಿತ್ತು. ಈಗ ₹90 ಇರಬೇಕು. ಪ್ರವಾಸಿ ಕಾರ್ಡ್ (ಪಾಸ್) ಗೆ ಒಂದು ದಿನಕ್ಕೆ ₹300, ಮೂರು ದಿನಕ್ಕೆ ₹600 ಹಾಗೂ ಐದು ದಿನಕ್ಕೆ ₹800 ನಿಗದಿಪಡಿಸಿದ್ದಾರೆ. ಕ್ಯೂಆರ್ ಕೋಡ್ ಬಳಸಿ ಟಿಕೆಟ್ ಪಡೆಯುವವರ ಸಂಖ್ಯೆ ಅಧಿಕವಿದ್ದು, ಪರಿಷ್ಕೃತ ದರದಲ್ಲಿ ಯಾವುದೇ ರಿಯಾಯಿತಿ ನೀಡಿಲ್ಲ.





ಶೇ 100 ಹೆಚ್ಚಳ

ಕಿಲೋ ಮೀಟರ್ ಆಧಾರದಲ್ಲಿ ಹೆಚ್ಚಳ ಮಾಡಿರುವುದು ಕೆಲವು ನಿಲ್ದಾಣಗಳಿಗೆ ಶೇ 100ರಷ್ಟು ಹೆಚ್ಚಳ ಮಾಡಿದಂತಾಗಿದೆ. ಮಂತ್ರಿಮಾಲ್ ಸಂಪಿಗೆರಸ್ತೆಯಿಂದ ಮಹಾತ್ಮಗಾಂಧಿ ರಸ್ತೆಗೆ ಹಿಂದೆ ₹20 ಇತ್ತು. ಈಗ ಪರಿಷ್ಕೃತದರದ ಪ್ರಕಾರ ₹40 ನೀಡಬೇಕು. ಇದು ಶೇ 100 ಹೆಚ್ಚಳವಾಗಿದೆ. ಮೆಜೆಸ್ಟಿಕ್‌ನಿಂದ ದೀಪಾಂಜಲಿ ನಗರಕ್ಕೆ ಹಳೇ ದರ ₹22 ಇದ್ದಿದ್ದು ₹40ಕ್ಕೆ (ಶೇ 90) ಏರಿಕೆಯಾಗಿದೆ. ಇದೇ ರೀತಿ ಹಲವು ನಿಲ್ದಾಣಗಳಿಗೆ ಶೇ 50ರಿಂದ ಶೇ 100ರವರೆಗೆ ಹೆಚ್ಚಳವಾಗಿದೆ.

ಮೊದಲ 2 ಕಿ.ಮೀ.ಗೆ ಯಾವುದೇ ದರ ಹೆಚ್ಚಳ ಮಾಡದ 'ನಮ್ಮ ಮೆಟ್ರೊ' ಗರಿಷ್ಠ ದರವನ್ನು ಶೇ 50ರಷ್ಟು ಹೆಚ್ಚಿಸಿದೆ. ಹಿಂದೆ ಗರಿಷ್ಠ ದರ ₹60 ಇತ್ತು. ಅದನ್ನು ₹90ಕ್ಕೆ ಏರಿಸಿದೆ. 25 ಕಿ.ಮೀ.ಗಿಂತ ಅಧಿಕ ದೂರ ಎಷ್ಟೇ ಪ್ರಯಾಣಿಸಿದರೂ ₹90 ಇರಲಿದೆ. ಸದ್ಯ ನೇರಳೆ ಮಾರ್ಗವು 43.49 ಕಿ.ಮೀ. ಹಾಗೂ ಹಸಿರು ಮಾರ್ಗವು 33.5. ಕಿ.ಮೀ. ಉದ್ದವಿದೆ.

ಸುದ್ದಿ 2 ನಿಮಿಷ

ಗಗನಯಾನ: ನಿರ್ವಾತದಲ್ಲಿ ಎಂಜಿನ್ ಪರೀಕ್ಷೆ ಯಶಸ್ವಿ

ಬೆಂಗಳೂರು: 'ಗಗನಯಾನ' ಯೋಜನೆಯಲ್ಲಿ ಬಳಕೆಯಾಗಲಿರುವ ರಾಕೆಟ್‌ನ ಕ್ರಯೋಜೆನಿಕ್ ಎಂಜಿನ್ ಅನ್ನು ಸಂಪೂರ್ಣ ನಿರ್ವಾತದಲ್ಲಿ ಚಾಲೂ ಮಾಡುವ ಪರೀಕ್ಷೆಯನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಯಶಸ್ವಿಯಾಗಿ ನಡೆಸಿದೆ.

ತಮಿಳುನಾಡಿನ ಮಹೇಂದ್ರಗಿರಿಯಲ್ಲಿ ಇರುವ ಇಸ್ರೊ ಪ್ರೊಪಲ್ಷನ್ ಸಂಕೀರ್ಣದಲ್ಲಿ ಎಂಜಿನ್‌ನ ಪರೀಕ್ಷೆಯನ್ನು ಶುಕ್ರವಾರ ನಡೆಸಲಾಗಿದೆ. ಗಗನಯಾನ ರಾಕೆಟ್‌ನ ಎಲ್‌ವಿಎಂ3 ಹಂತದಲ್ಲಿ ಬಳಕೆಯಾಗಲಿರುವ 'ಸಿಇ20' ಕ್ರಯೋಜೆನಿಕ್ ಎಂಜಿನ್ ಅನ್ನು ಚಾಲೂ ಮಾಡುವ (ಇಗ್ನಿಷನ್) ಪರೀಕ್ಷೆ ಇದಾಗಿದೆ.

ಈ ಮೊದಲು ಸಾಮಾನ್ಯ ವಾತಾವರಣದಲ್ಲಿ ಈ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲಾಗಿತ್ತು. ಬಾಹ್ಯಾಕಾಶದಲ್ಲಿ ಇರುವ ನಿರ್ವಾತ ಮತ್ತು ಶೂನ್ಯ ಗುರುತ್ವ ಸ್ಥಿತಿಯಲ್ಲಿ ಸಿಇ20 ಎಂಜಿನ್ ಅನ್ನು ಚಾಲೂ ಮಾಡಬೇಕಿದೆ. ಆ ಸಾಮರ್ಥ್ಯವನ್ನು ಪರೀಕ್ಷಿಸುವ ಸಲುವಾಗಿ ನಿರ್ವಾತದ ಸ್ಥಿತಿಯಲ್ಲಿ ಇಗ್ನಿಷನ್ ಪರೀಕ್ಷೆ ನಡೆಸಲಾಗಿದೆ ಎಂದು ಇಸ್ರೊ ತಿಳಿಸಿದೆ. ನಿಗದಿಯಂತೆ ಎಂಜಿನ್ ಕರಾರುವಾಕ್ಕಾಗಿ ಕಾರ್ಯ ನಿರ್ವಹಿಸಿತು. ಗಗನಯಾನದ ಸಂದರ್ಭದಲ್ಲಿ ಬಾಹ್ಯಾಕಾಶದಲ್ಲಿ ಎಂಜಿನ್ ಅನ್ನು ಮತ್ತೆ ಮತ್ತೆ ಚಾಲೂ ಮಾಡ ಬೇಕಾಗುತ್ತದೆ. ಸಂಪೂರ್ಣ ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಈ ಎಂಜಿನ್ ಅಂತಹ ಸ್ಥಿತಿಯಲ್ಲಿ ಕರಾರುವಾಕ್ಕಾಗಿ ಕಾರ್ಯನಿರ್ವಹಿಸುವುದು ಅತ್ಯವಶ್ಯಕ ಎಂದು ಇಸ್ರೊ ಹೇಳಿದೆ.

ಯುಪಿಎಸ್‌ಸಿ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ನಾಗರಿಕ ಸೇವಾ ಪರೀಕ್ಷೆಯ ಪೂರ್ವಭಾವಿ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) ಫೆ.18ರವರೆಗೆ ವಿಸ್ತರಿಸಿದೆ.

ನಾಗರಿಕ ಸೇವೆ ಮತ್ತು ಅರಣ್ಯ ಸೇವಾ ಪರೀಕ್ಷೆಗಳಿಗೆ ಆಕಾಂಕ್ಷಿಗಳು ಫೆ.18ರವರೆಗೆ ನೋಂದಾಯಿಸಿಕೊಳ್ಳಬಹುದು ಎಂದು ಆಯೋಗವು ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಫೆ.19ರಿಂದ 25ರವರೆಗೆ ತಿದ್ದುಪಡಿಗೆ ಅವಕಾಶ ನೀಡಲಾಗುತ್ತದೆ ಎಂದು ಆಯೋಗ ತಿಳಿಸಿದೆ. ಪೂರ್ವಭಾವಿ ಪರೀಕ್ಷೆಯು ಮೇ 25ರಂದು ನಿಗದಿಯಾಗಿದೆ.

ಸುಮಾರು 979 ಖಾಲಿ ಹುದ್ದೆಗಳನ್ನು ಈ ಪರೀಕ್ಷೆ ಮೂಲಕ ಭರ್ತಿ ಮಾಡಿಕೊಳ್ಳುವ ನಿರೀಕ್ಷೆ ಇದೆ. ಇದರಲ್ಲಿ 38 ಹುದ್ದೆಗಳು ಅಂಗವಿಕಲರಿಗೆ ಮೀಸಲಿವೆ ಎಂದು ಮೂಲಗಳು ತಿಳಿಸಿವೆ.

'ಭಾರತ ರಂಗಮಹೋತ್ಸವ' ನಾಟಕೋತ್ಸವದ ಸಮಾರೋಪ

ಗ್ರಾಮೀಣ ರಂಗಭೂಮಿಗೆ ಪ್ರೋತ್ಸಾಹ ಅಗತ್ಯ: ಪ್ರಸನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಂಗಭೂಮಿ ಚಟುವಟಿಕೆಗಳು ನಗರಕ್ಕೆ ಸೀಮಿತವಾಗದೇ ಗ್ರಾಮೀಣ ಪ್ರದೇಶದಲ್ಲಿ ಯೂ ನಡೆಯಬೇಕು. ಅದಕ್ಕೆ ಬೇಕಾದ ಪ್ರೋತ್ಸಾಹಗಳನ್ನು ಸರ್ಕಾರ ನೀಡಬೇಕು ಎಂದು ರಂಗಕರ್ಮಿ ಪ್ರಸನ್ನ ತಿಳಿಸಿದರು.

ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯ, ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಷ್ಟ್ರೀಯ ನಾಟಕ ಶಾಲೆ ಹಾಗೂ ಕರ್ನಾಟಕ ನಾಟಕ ಅಕಾಡೆಮಿ ಜಂಟಿಯಾಗಿ ಹಮ್ಮಿಕೊಂಡಿದ್ದ 'ಭಾರತ ರಂಗ ಮಹೋತ್ಸವ' ಅಂತರ ರಾಷ್ಟ್ರೀಯ ನಾಟಕೋತ್ಸವದ ಸಮಾರೋಪದಲ್ಲಿ ಶನಿವಾರ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶದಲ್ಲಿ ರಂಗಭೂಮಿ ಬಗ್ಗೆ ತರಬೇತಿ ನೀಡಬೇಕು. ಜೊತೆಗೆ ಗ್ರಾಮೀಣ ಕಲೆಗಳನ್ನು ಗುರುತಿಸಿ ಪ್ರೋತ್ಸಾಹಿಸಬೇಕು. ರಂಗಭೂಮಿ ಬೆಳೆಸುವ ಕಾರ್ಯ ಆಂದೋಲನದಂತೆ ನಡೆಯಬೇಕು ಎಂದು ಆಶಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಧರಣೀದೇವಿ ಮಾಲಗತ್ತಿ ಮಾತನಾಡಿ, 'ನಾಟಕವು ಜನಪ್ರಿಯ ಮಾಧ್ಯಮ ಎಂಬುದನ್ನು ಈ ಉತ್ಸವ ಮತ್ತೊಮ್ಮೆ ಸಾಬೀತುಪಡಿಸಿದೆ. ಟಿ.ವಿ., ಚಲನಚಿತ್ರಗಳನ್ನು ಮೀರಿ ಜನರು ಇಲ್ಲಿ ಭಾಗವಹಿಸಿದ್ದಾರೆ' ಎಂದು ಶ್ಲಾಘಿಸಿದರು.

ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಮಾತನಾಡಿ, 'ಪ್ರತಿವರ್ಷ ಫೆಬ್ರುವರಿ ಮೊದಲ ಶನಿವಾರದಿಂದ ಎರಡನೇ ಶನಿವಾರದವರೆಗೆ ಭಾರತ ರಂಗ ಮಹೋತ್ಸವ ನಡೆಸಲಾಗುವುದು. ಬೆಂಗಳೂರಿನಲ್ಲಿ ಕಡ್ಲೆಕಾಯಿ ಪರಿಷೆ ಇದ್ದಂಗೆ ನಾಟಕ ಪರಿಷೆ ನಡೆಸಲು ಪ್ರತಿ ವರ್ಷ ಸರ್ಕಾರವು ₹1 ಕೋಟಿ ಮೀಸಲಿಡಬೇಕು' ಎಂದು ಆಗ್ರಹಿಸಿದರು.

ಸಮಾರಂಭದಲ್ಲಿ ರಂಗಕರ್ಮಿ ಪ್ರಸನ್ನ, ರಂಗ ವಿಮರ್ಶಕಿ ವಿಜಯಮ್ಮ ಹಾಗೂ ಸಂತಕವಿ ಕನಕದಾಸ, ತತ್ವಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ.ತ ಚಿಕ್ಕಣ್ಣ ಅವರನ್ನು ಸನ್ಮಾನಿಸಲಾಯಿತು. ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ರವೀಂದ್ರನಾಥ್ ಸಿರಿವರ, ರಾಷ್ಟ್ರೀಯ ನಾಟಕ ಶಾಲೆಯ ನಿರ್ದೇಶಕಿ ವೀಣಾಶರ್ಮ ಬೂಸನೂರಮಠ, ರಂಗಕರ್ಮಿ ಸಿ.ಕೆ ಗುಂಡಣ್ಣ, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ರಿಜಿಸ್ಟ್ರಾರ್ ನಿರ್ಮಲಾ ಮಠಪತಿ, ಸಾಹಿತಿ ಗೊ.ರು.ಚನ್ನಬಸಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಕೆ.ಧರಣೀದೇವಿ ಮಾಲಗತ್ತಿ ಮತ್ತು ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ಎ.ಎಸ್ ಚಂದ್ರಶೇಖರ್ ಉಪಸ್ಥಿತರಿದ್ದರು
ಪ್ರಜಾವಾಣಿ ಚಿತ್ರ

'ಸಮ ಸಮಾಜ ನಿರ್ಮಾಣಕ್ಕೆ ನಾಲ್ವಡಿ ಮುನ್ನುಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದುಳಿದವರಿಗೆ ಮೀಸಲಾತಿ ಬೇಡ ಎಂಬ ದಿವಾನ್ ವಿಶ್ವೇಶ್ವರಯ್ಯನವರ ಮಾತನ್ನು ಲೆಕ್ಕಿಸದೇ ಪ್ರಜಾಪ್ರತಿನಿಧಿ ಕಾಯ್ದೆಯಡಿ ತಳವರ್ಗದವರಿಗೆ ಮೀಸಲಾತಿ ಕಲ್ಪಿಸಿ, ಎಲ್ಲರಿಗೂ ಪ್ರಾತಿನಿಧ್ಯ ನೀಡುವಂತಹ ಐತಿಹಾಸಿಕ ನಿರ್ಧಾರವನ್ನು ಕೈಗೊಂಡವರು ನಾಲ್ವಡಿ ಕೃಷ್ಣರಾಜ ಒಡೆಯರ್' ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಬಣ್ಣಿಸಿದರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪರಿಷತ್ತು ಪ್ರಕಟಿಸಿರುವ ನಿವೃತ್ತ ಇತಿಹಾಸ ಪ್ರಾಧ್ಯಾಪಕ ಎಸ್. ಚಂದ್ರಶೇಖರ್ ಅವರ 'ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಆಧುನಿಕ ಮೈಸೂರು' ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ನಾಲ್ವಡಿ ಕೃಷ್ಣರಾಜ ಒಡೆಯರ್ ಜನಪರ, ಅಭಿವೃದ್ಧಿಪರ ಆಡಳಿತ ನೀಡಿದವರು. ಸಂವಿಧಾನ ಬರುವ ಮೊದಲೇ, ಸಮ ಸಮಾಜ ನಿರ್ಮಾಣದ ಗುರಿ ಮುಟ್ಟಲು ಅಗತ್ಯ ನಿರ್ಧಾರಗಳನ್ನು ಕೈಗೊಂಡಿದ್ದರು. ಶೂದ್ರರಿಗೆ ಶಿಕ್ಷಣ ನೀಡುವುದಕ್ಕಾಗಿ ಪಂಚಮ ಶಾಲೆಗಳನ್ನು ತೆರೆದಿದ್ದರು' ಎಂದು ವಿಶ್ಲೇಷಿಸಿದರು.

ಸಾಹಿತಿ ಪ್ರೊ. ಕೆ.ವೈ.ನಾರಾಯಣ ಸ್ವಾಮಿ ಅವರು ಕೃತಿಯನ್ನು ಪರಿಚಯಿಸಿದರು. ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ. ಪ್ರಕಾಶಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೃತಿಯ ಲೇಖಕ ಪ್ರೊ. ಚಂದ್ರಶೇಖರ್, ಸರ್ಕಾರಿ ಕಲಾ ಕಾಲೇಜಿನ ಪ್ರಾಚಾರ್ಯ ಪಿ.ಟಿ. ಶ್ರೀನಿವಾಸನಾಯಕ್, ಬಿಬಿಎಂಪಿ ನಿವೃತ್ತ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಚ. ನಾಗರಾಜ ಉಪಸ್ಥಿತರಿದ್ದರು.

6 ಕಲಾ ಸಾಧಕರಿಗೆ 'ಗೌರವ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿಯ 2022-2023 ಮತ್ತು 2023-24ನೇ ಸಾಲಿನ 'ಗೌರವ ಪ್ರಶಸ್ತಿ'ಗೆ ಆರು ಕಲಾ ಸಾಧಕರು ಆಯ್ಕೆಯಾಗಿದ್ದು, ಅಕಾಡೆಮಿ ಅಧ್ಯಕ್ಷ ಪ.ಸ.ಕುಮಾರ್ ಅವರು ಪುರಸ್ಕೃತರ ಪಟ್ಟಿಯನ್ನು ಪ್ರಕಟಿಸಿದ್ದಾರೆ.

2022-23ನೇ ಸಾಲಿನ ಗೌರವ ಪ್ರಶಸ್ತಿಗೆ ಕಮಲ್ ಅಹಮದ್ (ಗದಗ), ನಿರ್ಮಲಾ ಕುಮಾರಿ (ತುಮಕೂರು), ಬಿ.ಪಿ. ಕಾರ್ತಿಕ್ (ಬೆಂಗಳೂರು); 2023-24ನೇ ಸಾಲಿನ ಗೌರವ ಪ್ರಶಸ್ತಿಗೆ ನಿಜಲಿಂಗಪ್ಪ ಹಾಲ್ವಿ (ಯಾದಗಿರಿ), ವಿಠಲ ರೆಡ್ಡಿ ಚುಳಕಿ (ಹುಬ್ಬಳ್ಳಿ) ಮತ್ತು ಬಾಬೂರಾವ್ ಎಚ್. (ಕಲಬುರಗಿ) ಅವರು ಭಾಜನರಾಗಿದ್ದಾರೆ. ಪ್ರಶಸ್ತಿಯು ತಲಾ ₹ 50 ಸಾವಿರ ನಗದು ಒಳಗೊಂಡಿದೆ.

51 ಹಾಗೂ 52ನೇ ವಾರ್ಷಿಕ ಕಲಾ ಬಹುಮಾನ ಪ್ರಕಟಿಸಲಾಗಿದ್ದು, 20 ಕಲಾವಿದರು ಆಯ್ಕೆಯಾಗಿದ್ದಾರೆ. 2021-2022 ಹಾಗೂ 2022-23ನೇ ಸಾಲಿನ 'ವರ್ಣಶ್ರೀ ಪ್ರಶಸ್ತಿ'ಗೆ ತಲಾ ಹತ್ತು ಕಲಾ ಸಾಧಕರು ಆಯ್ಕೆಯಾಗಿದ್ದಾರೆ. ಕಲಾ ಬಹುಮಾನ ಹಾಗೂ 'ವರ್ಣಶ್ರೀ ಪ್ರಶಸ್ತಿ' ತಲಾ ₹ 25 ಸಾವಿರ ನಗದು ಒಳಗೊಂಡಿದೆ.

'ವರ್ಣಶ್ರೀ ಪ್ರಶಸ್ತಿ' ಪುರಸ್ಕೃತರು: 2021-22ನೇ ಸಾಲಿಗೆ ವೀಣಾ ಶ್ರೀನಿವಾಸನ್ (ಮಂಗಳೂರು), ಪರಮೇಶ ಜೋಳದ (ಬಾಗಲಕೋಟೆ), ಪಿ.ಎ.ಬಿ. ಈಶ್ವರ (ರಾಯಚೂರು), ಕುಡಲಯ್ಯ ಹಿರೇಮಠ (ಪುಣೆ), ಅಶೋಕ ಕಲ್ಲಶೆಟ್ಟಿ (ತುಮಕೂರು), ನಂದಬಸಪ್ಪ ವಾಡೆ (ವಿಜಯಪುರ), ಕೆ.ಜಿ. ಲಿಂಗದೇವರು (ರಾಮನಗರ), ಬಿ. ಮಹೇಶ (ಮಡಿಕೇರಿ), ಶಕುಂತಲಾ ವರ್ಣೇಕರ (ಹುಬ್ಬಳ್ಳಿ) ಮತ್ತು ಜಿ. ಮಂಜುನಾಥ (ಬಳ್ಳಾರಿ) ಪ್ರಶಸ್ತಿಗೆ ಭಾಜನರಾಗಿದ್ದಾರೆ.

2022-23ನೇ ಸಾಲಿಗೆ ಪ್ರಕಾಶ್ ನಾಯಕ್ (ಶಿರಸಿ), ಬಸವರಾಜ ಸಿ. ಕುಶ್ನಿ (ಗದಗ), ಜಗದೀಶ್ ಕಾಂಬ್ಳೆ (ಕಲಬುರಗಿ), ಟಿ. ಜಯದೇವಣ್ಣ (ಹಾಸನ), ಶೈಲ ದೊತ್ರೆ (ಬಾಗಲಕೋಟೆ), ಸಿ. ಮಹದೇವ ಸ್ವಾಮಿ (ಚಾಮರಾಜನಗರ), ಮೀನಾಕ್ಷಿ ಸದಲಗಿ (ಬೆಳಗಾವಿ), ಕೆ.ಎಂ. ರವೀಶ್ (ತುಮಕೂರು), ಎಫ್.ವಿ. ಚಿಕ್ಕಮಠ (ಧಾರವಾಡ) ಮತ್ತು ಸಯ್ಯದ್ ಆಸೀಫ್ ಅಲಿ (ಮಂಗಳೂರು) ಆಯ್ಕೆಯಾಗಿದ್ದಾರೆ ಎಂದು ಅಕಾಡೆಮಿ ರಿಜಿಸ್ಟ್ರಾರ್ ಬಿ. ನೀಲಮ್ಮ ತಿಳಿಸಿದ್ದಾರೆ.

ನಿಜಲಿಂಗಪ್ಪ ಹಾಲ್ವಿ | ಕಮಲ್ ಅಹಮದ್ | ನಿರ್ಮಲಾ ಕುಮಾರಿ | ಬಾಬೂರಾವ್ ಎಚ್. | ಬಿ.ಪಿ.ಕಾರ್ತಿಕ್ | ವಿಠಲ ರೆಡ್ಡಿ ಚುಳಕಿ

51-52ನೇ ವಾರ್ಷಿಕ ಕಲಾ ಬಹುಮಾನಕ್ಕೆ ಆಯ್ಕೆಯಾದವರು

ಕಲಾವಿದರು	ಕಲಾಕೃತಿಯ ವಿವರ	ಮಾಧ್ಯಮ
ಶಿವಪ್ರಸಾದ (ಕಲಬುರಗಿ)	ವರ್ಲ್ಡ್ ಯು ಲವ್	ಪೆನ್ಸಿಲ್ ಆನ್ ಪೇಪರ್
ಭಾನು ಪ್ರಕಾಶ್ ಬಿ.ಎಲ್ (ಬೆಂಗಳೂರು)	ಟ್ರಾವೆಲ್ಸ್ ಆ್ಯಂಡ್ ರೆಫ್ಲೆಕ್ಷನ್ ಸೀರಿಸ್-1	ಚಾರ್‌ಕೋಲ್ ಆ್ಯಂಡ್ ಹ್ಯಾಂಡ್ ಮೇಡ್ ಪೇಪರ್
ರಾಜೇಂದ್ರ ಕೇದಿಗೆ (ಮಂಗಳೂರು)	ದಿ ಅನ್‌ಡಿಫೈನ್ಡ್	ಡಿಜಿಟಲ್ ಪ್ರಿಂಟ್
ರೋಷ್ ರವೀಂದ್ರನ್ (ಬೆಂಗಳೂರು)	ಫೆಸೆಟ್ಸ್ ಸೆಟಲ್ಡ್	ಅಕ್ರಿಲಿಕ್ ಆನ್ ಕ್ಯಾನ್ವಾಸ್
ವರ್ಣಂ ನಾರಾಯಣ (ಹೊಸಕೋಟೆ)	ವಿಲೇಜ್/ಸಿಟಿ	ಅಕ್ರಿಲಿಕ್ ಆನ್ ಕ್ಯಾನ್ವಾಸ್
ಅಮೋಘರಾಜ್ ಡಿ. ಬಾಲಿ (ತುಮಕೂರು)	ರೀಸೈಕಲ್	ಪ್ರಿಂಟ್ ಮೇಕಿಂಗ್ ಗ್ರಾಫಿಕ್
ಗಿರೀಶ ಬಿ. ಕುಲಕರ್ಣಿ (ಕಲಬುರಗಿ)	ಮರಳಿ ಗೂಡಿಗೆ	ಮಿಶ್ರ ಮಾಧ್ಯಮ ಫ್ರೇಮ್ ಬೋರ್ಡ್
ನಾಗರಾಜು ಪಿ. (ಚಾಮರಾಜನಗರ)	ಜೀವನದ ಪ್ರಯಾಣದ ನಡುವೆ ಭಾವೋದ್ರೇಕ	ಅಕ್ರಿಲಿಕ್
ಹಣಮಂತ ಮಲ್ಕಾಪುರೆ (ಬೀದರ್)	ಫಸ್ಟ್ ಜನರೇಷನ್	ಆಯಿಲ್ ಆ್ಯಂಡ್ ಅಕ್ರಿಲಿಕ್
ಕೃಷ್ಣಾಚಾರಿ (ಹಾಸನ)	ಜೀವನಕ್ಕಾಗಿ	ಮಿಶ್ರ ಮಾಧ್ಯಮ
ರೆಹಮಾನ್ ಪಟೇಲ್ (ಕಲಬುರಗಿ)	ಮದ್ಯಮಾದಿರಾಗ	ಜಲ ವರ್ಣ
ಪ್ರಶಾಂತ ಕೆ. (ದಕ್ಷಿಣ ಕನ್ನಡ)	ಸಂಸ್ಕೃತಿ ಚಲನೆ	ಜಲ ವರ್ಣ
ಎಸ್. ಅರುಳ್ ದೇವನ್ (ಬೆಂಗಳೂರು)	ಅನ್ನೋನ್ ಮೆಟಮಾರ್ಫೋಸಿಸ್-1	ಚಾರ್‌ಕೋಲ್
ಬಿನೆಲ್ ಮರಿಯಾ (ಉಡುಪಿ)	ಆನ್ ಹೋಮ್	ಎಚ್ಚಿಂಗ್
ಗೌತಮಿ ಎಂ. (ಬೆಂಗಳೂರು)	ಬಿನೆತ್ ದಿ ಸರ್ಫೇಸ್	ಎಚ್ಚಿಂಗ್
ರಮೇಶ್ ಚವ್ಹಾಣ (ವಿಜಯಪುರ)	ಯುನೈಟೆಡ್-2	ಡಿಜಿಟಲ್ ಪ್ರಿಂಟ್
ಸಂತೋಷ ಪತ್ತಾರ (ಕೊಪ್ಪಳ)	ಚಂಚಲೆ	ಪೇಪರ್, ಪೆನ್ನು
ಚೈತ್ರಾ ಎನ್. (ಮೈಸೂರು)	ಅನ್‌ಟೈಟಲ್ಡ್	ಅಕ್ರಿಲಿಕ್
ಶಿವರಾಮು (ಮೈಸೂರು)	ಆಸರೆ	ಟೆರ್ರಕೋಟ
ದಯಾನಂದ ಎನ್. (ಮೈಸೂರು)	ಕಣಜ	ಕಬ್ಬಿಣ ಮತ್ತು ಗೋಣಿಚೀಲ

FARNAZ

ನಗರದಲ್ಲಿ ಇಂದು

ಪುರಂದರ, ತ್ಯಾಗರಾಜರ ಆರಾಧನೋತ್ಸವಕ್ಕೆ ಚಾಲನೆ: ಮಧುಸೂಧನಾನಂದ ಪುರಿ ಸ್ವಾಮೀಜಿ, ಆಯೋಜನೆ: ಶ್ರೀ ಗುರುಗುಹ ಸಂಗೀತ ಮಹಾವಿದ್ಯಾಲಯ, ಸ್ಥಳ: ಓಂಕಾರ ಆಶ್ರಮ, ಕೆಂಗೇರಿ, ಉತ್ತರಹಳ್ಳಿ ಮುಖ್ಯರಸ್ತೆ, ಬೆಳಿಗ್ಗೆ 7.30ರಿಂದ

ಅಂಗಾಂಗ ದಾನ: ಮಾತನಾಡುವವರು: ಡಾ. ಸುರೇಶ್ ರಾಘವಯ್ಯ, ಅಧ್ಯಕ್ಷತೆ: ಕೆ. ಕೃಷ್ಣಮೂರ್ತಿ, ಆಯೋಜನೆ: ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317ಎ, ಸ್ಥಳ: ಎಫ್‌ಕೆಸಿಸಿಐ ಸಭಾಂಗಣ, ಕೆಂಪೇಗೌಡ ರಸ್ತೆ, ಬೆಳಿಗ್ಗೆ 8

ಕುಮಾರವ್ಯಾಸ ಜಯಂತಿ, ವಚನ ಸುಧೆ ಅಲ್ಬಂನ ಪೋಸ್ಟರ್ ಬಿಡುಗಡೆ, ಅಭಿನಂದನಾ ಸಮಾರಂಭದ ಉದ್ಘಾಟನೆ: ಎಲ್. ಹನುಮಂತಯ್ಯ, ಪೋಸ್ಟರ್ ಬಿಡುಗಡೆ: ಸಂತೋಷ್ ಹಾನಗಲ್, ಅಭಿನಂದನೆ: ಕೆ.ಜಿ. ಲಕ್ಷ್ಮೀನಾರಾಯಣಪ್ಪ, ಅತಿಥಿಗಳು: ಬಿ.ಎಸ್. ಜಯಪ್ರಕಾಶ್ ನಾರಾಯಣ, ಶ್ರ.ದೇ. ಪಾರ್ಶ್ವನಾಥ್, ವೀರಕಪುತ್ರ ಶ್ರೀನಿವಾಸ್, ಖಾಸೀಮ್ ಮಲ್ಲಿಗೆಮಡುವು, ಆಯೋಜನೆ: ವಿಶ್ವಮಾನವ ಸಂಗೀತ ಯಾನ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 11.30ರಿಂದ

'ಸನಾತನ ಧರ್ಮ ಮತ್ತು ವರ್ತಮಾನ' ವಿಚಾರಸಂಕಿರಣದ ಉದ್ಘಾಟನೆ: ಸ್ವಾಮಿ ನಿತ್ಯಸ್ಥಾನಂದಜಿ ಮಹಾರಾಜ್, ಅತಿಥಿ: ಎನ್.ಎಂ. ಶಾಂತಿನಾಥ, ಎಸ್. ಕೆ. ಗೋಪಾಲಕೃಷ್ಣ, 'ಸನಾತನ ಧರ್ಮದ ಮೂಲ ಲಕ್ಷಣಗಳು': ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ, 'ಸನಾತನ ಧರ್ಮ ಮತ್ತು ಮಹಿಳೆ': ವಿ.ಬಿ. ಆರತಿ, 'ಸನಾತನ ಧರ್ಮ ಮತ್ತು ಸಮಾಜ ವ್ಯವಸ್ಥೆ': ಕೃಷ್ಣರಾಜ ಕುತ್ಪಾಡಿ, 'ಸನಾತನ ಧರ್ಮದ ಅಭಿವ್ಯಕ್ತಿ ರಾಮಾಯಣ': ದಿವಾಕರ ಹೆಗಡೆ, ಆಯೋಜನೆ: ಸದಾತನ, ಸ್ಥಳ: ಪ್ರೊ.ಜಿ.ವಿ. ಶತಮಾನೋತ್ಸವ ಸಭಾಂಗಣ, ಜಯರಾಮ ಸೇವಾ ಮಂಡಳಿ, ಎಂಟನೇ ಬ್ಲಾಕ್, ಜಯನಗರ, ಬೆಳಿಗ್ಗೆ 10ರಿಂದ

60ನೇ ನಾದಜ್ಯೋತಿ ಸಂಗೀತ ಸಂಭ್ರಮ-2025: ಬೆಳಿಗ್ಗೆ 11ಕ್ಕೆ ಪಂಚರತ್ನ ಕೀರ್ತನ ಗೋಷ್ಠಿ ಗಾಯನ, ಮಧ್ಯಾಹ್ನ 1ಕ್ಕೆ ಮಹಾಮಂಗಳಾರತಿ, ಮಹಾಪ್ರಸಾದ, ಸಂಜೆ 6.15ಕ್ಕೆ ಪ್ರಶಸ್ತಿ ಪ್ರದಾನ: ಅತಿಥಿಗಳು: ಬಿ.ಕೆ. ಶಿವರಾಂ, ಎಂ.ಕೆ. ಕೃಷ್ಣ, ಪ್ರಶಸ್ತಿ ಸ್ವೀಕರಿಸುವವರು: ಎಸ್. ಶೇಷಗಿರಿರಾವ್, ಟಿ.ಎಸ್. ಸತ್ಯವತಿ, ಎಂ.ಬಿ. ಹರಿಹರನ್, ಎಸ್. ಅಶೋಕ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್‌ಪಾರ್ಕ್, ಮಲ್ಲೇಶ್ವರ

ಪ್ರೊ.ಎಲ್.ಎಸ್. ಶೇಷಗಿರಿರಾವ್ ಜನ್ಮ ಶತಮಾನೋತ್ಸವ ಸಮಾರಂಭ, ಎಲ್.ಎಸ್. ಎಸ್. ಸಾಹಿತ್ಯ ಕುರಿತು ವಿಚಾರಸಂಕಿರಣ, ಎಲ್. ಎಸ್. ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ, ವಿ. ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ ಪ್ರದಾನ: ಎಚ್.ಎಸ್. ರಾಘವೇಂದ್ರರಾವ್, ಉಪಸ್ಥಿತಿ: ಆರ್. ಲಕ್ಷ್ಮೀನಾರಾಯಣ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಪ್ರಶಸ್ತಿ ಪುರಸ್ಕೃತರು: ಎಸ್.ಆರ್. ವಿಜಯಶಂಕರ್, ಬಾಬು ಕೃಷ್ಣಮೂರ್ತಿ, ಆಯೋಜನೆ: ಬಿ.ಎಂ.ಶ್ರೀ ಪ್ರತಿಷ್ಠಾನ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್. ಆರ್. ಕಾಲೊನಿ, ಬೆಳಿಗ್ಗೆ 10.30

ಕವಿಗೋಷ್ಠಿ, ಕೆ.ಎಸ್.ಎನ್. ಗೀತಗಾಯನ, ಪ್ರಶಸ್ತಿ ಪ್ರದಾನ: ಎಂ. ಪ್ರಕಾಶಮೂರ್ತಿ, ಅಧ್ಯಕ್ಷತೆ: ವಿ. ರೇಣುಕಾಪ್ರಸನ್ನ, ವಿ. ಮಲ್ಲಿಕಾರ್ಜುನಯ್ಯ, ಪ್ರಶಸ್ತಿ ಸ್ವೀಕರಿಸುವವರು: ಸಿದ್ಧಲಿಂಗಯ್ಯ ಬನ್ನಂಗಾಡಿ, ಪ್ರೇಮಕುಮಾರ್ ಹರಿಯಬ್ಬೆ, ಶಂಕರ್ ಕಡೇಮನೆ, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಗವಿಗಂಗಾಧರೇಶ್ವರ ಬ್ರಹ್ಮರಥೋತ್ಸವ: ಬೆಳಿಗ್ಗೆ 10.30ಕ್ಕೆ ಅಭಿಷೇಕ ಮತ್ತು ಉತ್ಸವ, ಸಂಜೆ 6.30ಕ್ಕೆ ನಾಗ ಮಹೋತ್ಸವ, ಆಯೋಜನೆ ಮತ್ತು ಸ್ಥಳ: ಗವಿಗಂಗಾಧರೇಶ್ವರ ದೇವಸ್ಥಾನ, ಗವಿಪುರ, ಗುಟ್ಟಹಳ್ಳಿ, ಹನುಮಂತನಗರ

ನೆನಪಿನ ಅಂಗಳದಲ್ಲಿ ವಿ.ಎನ್. ಸುಬ್ಬರಾವ್: ಭಾಗವಹಿಸುವವರು: ಎ. ಸೂರ್ಯಪ್ರಕಾಶ್, ರಮೇಶ್ ಕುಮಾರ್, ಆಯೇಷಾ ಖಾನುಂ, ಆಯೋಜನೆ ಮತ್ತು ಸ್ಥಳ: ಪುರವಂಕರ ಸಭಾಂಗಣ, ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ ಎರಡನೇ ಹಂತ, ಬೆಳಿಗ್ಗೆ 11

ಹಿಂದೂಸ್ತಾನಿ ಸಂಗೀತೋತ್ಸವ, ಸೇವಾ ಕಾಯಕ ಪುರಸ್ಕಾರ ಪ್ರದಾನ: ಉದ್ಘಾಟನೆ: ಶರತ್ ಡಿ. ಹೆಗ್ಡೆ, ಅಧ್ಯಕ್ಷತೆ: ಸತೀಶ್ ಹಂಪಿಹೊಳಿ, ಅತಿಥಿಗಳು: ಡಾ. ಕಿರಣ ಅಭಿಜಿತ್ ಕುಲಕರ್ಣಿ, ವೆಂಕಟರಮಣ ಎಂ., ಪ್ರಶಸ್ತಿ ಸ್ವೀಕರಿಸುವವರು: ಎಂ.ಆರ್. ವೆಂಕಟೇಶ್, ಆಯೋಜನೆ: ಗುರು ಸಮರ್ಥ ಸಂಗೀತ ವಿದ್ಯಾಲಯ ಟ್ರಸ್ಟ್, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3.30ರಿಂದ (ಸಭಾ ಕಾರ್ಯಕ್ರಮ ಸಂಜೆ 6)

ನಾಟಕಗಳ ಪ್ರದರ್ಶನ: ಸಂಜೆ 4.30ಕ್ಕೆ 'ಮರಣ ಮೃದಂಗ', ಸಂಜೆ 7.30ಕ್ಕೆ 'ನಾಯಿ ಕಳೆದಿದೆ' ನಾಟಕಗಳ ಪ್ರದರ್ಶನ: ನಿರ್ದೇಶನ: ರಾಜೇಂದ್ರ ಕಾರಂತ್, ಆಯೋಜನೆ: ನಮ್ಮ ನಟನೆ, ಸ್ಥಳ: ಡಾ.ಸಿ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಚಿತ್ರಾವಳಿ

ಶಿವಮೊಗ್ಗದ ಕರ್ನಾಟಕ ಸಂಘದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಹೆಗ್ಗೋಡಿನ ರಂಗಕರ್ಮಿ ಕೆ.ವಿ.ಅಕ್ಷರ ಅವರಿಗೆ 'ನವಿಲು ಗರಿ' ಪ್ರಶಸ್ತಿ ಪ್ರದಾನ ಮಾಡಲಾಯಿತು
– ಪ್ರಜಾವಾಣಿ ಚಿತ್ರ

ಏಪ್ರಿಲ್ 2 ರಿಂದ 6ರವರೆಗೆ ಮದುರೈ ನಗರದಲ್ಲಿ ನಡೆಯಲಿರುವ ಸಿಪಿಐನ 24ನೇ ಮಹಾ ಅಧಿವೇಶನದಲ್ಲಿ ಅಂಗೀಕರಿಸಬೇಕಾದ ರಾಜಕೀಯ ನಿರ್ಣಯಗಳ ಕನ್ನಡ ಆವೃತ್ತಿಯನ್ನು ಪಕ್ಷದ ರಾಜ್ಯ ಕಾರ್ಯದರ್ಶಿ ಪ್ರಕಾಶ್ ಕೆ.ಮತ್ತು ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಎಂ.ಪಿ.ಮುನಿವೆಂಕಟಪ್ಪ ಅವರು ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಿದರು

ಹಲವು ವ್ಯಕ್ತಿಗಳ ಮೊಬೈಲ್ ಕರೆಗಳ ವಿವರಗಳನ್ನು ಅಕ್ರಮವಾಗಿ ಸಂಗ್ರಹಿಸಿದ ಆರೋಪ

ಐಶ್ವರ್ಯಾ ವಿರುದ್ಧ ಹೊಸ ಎಫ್ಐಆರ್

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಸಾರ್ವಜನಿಕರಿಗೆ ಹಣ ಹಾಗೂ ಚಿನ್ನ ವಂಚಿಸಿದ ಆರೋಪ ಎದುರಿಸುತ್ತಿರುವ ಐಶ್ವರ್ಯಾ ಗೌಡ ವಿರುದ್ಧ ಮತ್ತೊಂದು ಎಫ್ಐಆರ್ ದಾಖಲಾಗಿದೆ.

ಐಶ್ವರ್ಯಾ ಗೌಡ

ಹಲವು ವ್ಯಕ್ತಿಗಳ ಮೊಬೈಲ್ ಕರೆಗಳ ವಿವರಗಳನ್ನು (ಸಿಡಿಆರ್) ಅಕ್ರಮವಾಗಿ ಪಡೆದಿದ್ದಾರೆಂದು ಆರೋಪಿಸಿ, ಪ್ರಕರಣದ ತನಿಖಾಧಿಕಾರಿ ಎಸಿಪಿ ಭರತ್ ರೆಡ್ಡಿ ಅವರು ನೀಡಿರುವ ದೂರಿನ ಮೇರೆಗೆ ಬ್ಯಾಟರಾಯನಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಂಚನೆ ಪ್ರಕರಣ ದಾಖಲಾದ ಬಳಿಕ ಐಶ್ವರ್ಯಾ ಗೌಡ ಅವರ 5 ಹಾಗೂ ಅವರ ಪತಿಯ 2 ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆದಿದ್ದ ಪೊಲೀಸರು, ಅವುಗಳಲ್ಲಿದ್ದ ದತ್ತಾಂಶ ಸಂಗ್ರಹಿಸಲು ನ್ಯಾಯಾಲಯದ ಅನುಮತಿ ಪಡೆದು ಪಶ್ಚಿಮ ವಿಭಾಗದ ಸಿಇಎನ್ ಠಾಣೆಗೆ ರವಾನಿಸಿದ್ದರು.

ಮೊಬೈಲ್ ಫೋನ್‌ಗಳಲ್ಲಿರುವ ದತ್ತಾಂಶವನ್ನು ಸಂಗ್ರಹಿಸಿದಾಗ ಅದರಲ್ಲಿ ಹಲವು ವ್ಯಕ್ತಿಗಳ ಸಿಡಿಆರ್ ಪತ್ತೆಯಾಗಿವೆ. ಫೋನ್ ಕರೆ ದಾಖಲೆಗಳು ಖಾಸಗಿಯಾಗಿದ್ದು, ಸಾಮಾನ್ಯವಾಗಿ ಅಪರಾಧ ಪ್ರಕರಣಗಳ ತನಿಖೆ ನಡೆಸುವಾಗ ತನಿಖಾ ಸಂಸ್ಥೆ ಅಥವಾ ತನಿಖಾಧಿಕಾರಿಗಳು ಮಾತ್ರವೇ ಅಗತ್ಯಕ್ಕೆ ಅನುಸಾರ ಅವುಗಳನ್ನು ಪಡೆದುಕೊಳ್ಳುವ ಅವಕಾಶ ಹೊಂದಿರುತ್ತಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಆದರೆ ಐಶ್ವರ್ಯಾ ಗೌಡ ಅಕ್ರಮವಾಗಿ ಅನೇಕ ವ್ಯಕ್ತಿಗಳ ಸಿಡಿಆರ್ ಪಡೆದು ಕೊಂಡಿದ್ದಾರೆ. ಆದ್ದರಿಂದ ಐಶ್ವರ್ಯಾ ಗೌಡ ಹಾಗೂ ಆಕೆಗೆ ಸಿಡಿಆರ್ ನೀಡಿರುವ ತನಿಖಾ ಸಂಸ್ಥೆಯ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಈ ಸಂಬಂಧ ಐಶ್ವರ್ಯಾಗೌಡ ಅವರಿಗೆ ನೋಟಿಸ್ ಜಾರಿ ಮಾಡಿದ್ದು, ಮಂಗಳವಾರ ವಿಚಾರಣೆಗೆ ಹಾಜರಾಗುವ ಸಾಧ್ಯತೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಚಾಕು ತೋರಿಸಿ ಅಂಗಡಿ ಮಾಲೀಕನಿಗೆ ಬೆದರಿಕೆ

ಬೆಂಗಳೂರು: ಪೆಟ್ಟಿಗೆ ಅಂಗಡಿ ಮಾಲೀಕನಿಗೆ ಚಾಕು ತೋರಿಸಿ, ಬೆದರಿಸಿ ಸಿಗರೇಟ್ ಪ್ಯಾಕೆಟ್ ಪಡೆದಿದ್ದ ಆರೋಪಿ ಗೌತಮ್‌ನನ್ನು ಆಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಜ.4 ರಂದು ಆಡುಗೋಡಿಯ ರಾಜೇಂದ್ರ ನಗರದ 80 ಅಡಿ ರಸ್ತೆಯ ಅಂಗಡಿಗೆ ಬಂದ ಗೌತಮ್, ಒಂದು ಪ್ಯಾಕ್ ಸಿಗರೇಟ್ ಮತ್ತು ಬೆಂಕಿ ಪೊಟ್ಟಣ ಪಡೆದುಕೊಂಡಿದ್ದಾನೆ. ಮಾಲೀಕ ಹಣ ಕೇಳಿದಾಗ, ‘ನಾನು ಯಾರು ಅಂತ ಗೊತ್ತಾ? ನನ್ನ ಬಳಿಯೇ ಹಣ ಕೇಳುತ್ತೀಯಾ? ನಾನು ಕೇಳುವುದನ್ನು ಕೊಡಬೇಕು ಎಂದು ಚಾಕು ತೋರಿಸಿ ಬೆದರಿಕೆ ಹಾಕಿದ್ದಾನೆ’ ಎಂದು ಪೊಲೀಸರು ತಿಳಿಸಿದರು.



ಈ ದೃಶ್ಯದ ವಿಡಿಯೊ ಜಾಲತಾಣದಲ್ಲಿ ಹರಿದಾಡಿತ್ತು. ಇದರ ಬೆನ್ನಲ್ಲೇ ಅಂಗಡಿ ಮಾಲೀಕ ಆಡುಗೋಡಿ ಠಾಣೆಗೆ ದೂರು ನೀಡಿದರು. ಪೊಲೀಸರು ಆರೋಪಿಯನ್ನು ಬಂಧಿಸಿ, 1.5 ಅಡಿ ಉದ್ದದ ಚಾಕು ವಶಪಡಿಸಿಕೊಂಡಿದ್ದಾರೆ.

ದಟ್ಟಣೆ

ಯಲಹಂಕದ ವಾಯುನೆಲೆಯಲ್ಲಿ ಆಯೋಜಿಸಿರುವ ಏರೋ ಇಂಡಿಯಾ–2025 ವೈಮಾನಿಕ ಪ್ರದರ್ಶನದ ತಾಲೀಮು ನಡೆಯುತ್ತಿರುವ ಕಾರಣ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಶನಿವಾರ ಸಂಚಾರ ದಟ್ಟಣೆ ಉಂಟಾಯಿತು ಪ್ರಜಾವಾಣಿ ಚಿತ್ರ

ಪ್ರಧಾನಿ ಕಚೇರಿಗೆ ದೂರು: ದೂರವಾಣಿ 33 ಗಂಟೆಯಲ್ಲಿ ದುರಸ್ತಿ

ಪ್ರಜಾವಾಣಿ ವಾರ್ತೆ

ಶಿರಸಿ: ಸ್ಥಿರ ದೂರವಾಣಿ ದುರಸ್ತಿಗೆ ಸಂಬಂಧಿಸಿದಂತೆ ಆಯುರ್ವೇದ ವೈದ್ಯ ಡಾ.ರವಿಕಿರಣ ಪಟವರ್ಧನ ಅವರು ಪ್ರಧಾನಿ ಕಚೇರಿಗೆ ದೂರು ನೀಡಿದ 33 ಗಂಟೆಯೊಳಗೆ ದುರಸ್ತಿ ಕಾರ್ಯ ನೆರವೇರಿದೆ. ಈ ಮೊದಲು, ದುರಸ್ತಿಗೆ ಬಿಎಸ್ಎನ್ಎಲ್ ನಿರಾಕರಿಸಿತ್ತು.

‘ನನ್ನ ಆಸ್ಪತ್ರೆಯ ಸ್ಥಿರ ದೂರವಾಣಿ ದುರಸ್ತಿಗೆ ಕೋರಿ ಬಿಎಸ್ಎನ್ಎಲ್ ಕಚೇರಿಗೆ ದೂರು ಸಲ್ಲಿಸಿದ್ದೆ. ಆದರೆ, ಅಲ್ಲಿನ ಸಿಬ್ಬಂದಿ ಬೇರೆ ಬೇರೆ ಕಾರಣಗಳನ್ನು ಹೇಳಿ, ದುರಸ್ತಿಗೆ ನಿರಾಕರಿಸಿದ್ದರು. ಈ ಎಲ್ಲಾ ಮಾಹಿತಿಯನ್ನು ಕ್ರೋಢೀಕರಿಸಿ ಪ್ರಧಾನಿ ಕಚೇರಿಗೆ ಇ-ಮೇಲ್ ಮಾಡಿದ್ದೆ. ದುರಸ್ತಿಗೆ ಕೋರಿದ್ದೆ. 33 ಗಂಟೆಯೊಳಗೆ ಸ್ಥಿರ ದೂರವಾಣಿ ದುರಸ್ತಿಗೊಂಡು, ಕಾರ್ಯಾರಂಭ ಮಾಡಿದೆ’ ಎಂದು ಡಾ. ರವಿಕಿರಣ ‘ಪ್ರಜಾವಾಣಿ’ಗೆ ತಿಳಿಸಿದರು.

ಮನೆಗೆ ನುಗ್ಗಿ ₹15 ಸಾವಿರ ಸುಲಿಗೆ ಆರೋಪ

ವಿದೇಶಿ ವಿದ್ಯಾರ್ಥಿಗಳ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ವಿದ್ಯಾರ್ಥಿಗಳ ಮೇಲೆ ದುಷ್ಕರ್ಮಿಗಳು ಹಲ್ಲೆ ನಡೆಸಿ, ₹15 ಸಾವಿರ ಸುಲಿಗೆ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಗೋವಿಂದಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಕುರಿತು ಸಂತ್ರಸ್ತ ವಿದ್ಯಾರ್ಥಿ ಒಸಾಮಾ ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಆರೋಪಿಗಳ ಪತ್ತೆ ಕಾರ್ಯ ನಡೆಸಿದ್ದಾರೆ.

‘ಕೊತ್ತನೂರಿನಲ್ಲಿ ವಾಸವಾಗಿರುವ ಒಸಾಮಾ, ಖಾಸಗಿ ಕಾಲೇಜಿನಲ್ಲಿ ಬಿಸಿಎ ವ್ಯಾಸಂಗ ಮಾಡುತ್ತಿದ್ದು, ಗುರುವಾರ ರಾತ್ರಿ ಗೋವಿಂದಪುರದಲ್ಲಿರುವ ಸ್ನೇಹಿತ ಪೊರ್ಷೆ ಜಾನ್ ನಿವಾಸಕ್ಕೆ ತೆರಳಿದ್ದರು. ಆದರೆ, ಜಾನ್ ಹೊರಗಡೆ ಹೋಗಿದ್ದರಿಂದ ಮನೆಯಲ್ಲಿಯೇ ಇರುವಂತೆ ಸೂಚಿಸಿದ್ದರು. ರಾತ್ರಿ ಒಂದು ಗಂಟೆಗೆ ಮನೆಗೆ ನುಗ್ಗಿದ ದುಷ್ಕರ್ಮಿಗಳು, ಒಸಾಮಾ ಮೇಲೆ ಹಲ್ಲೆ ನಡೆಸಿ, ಡ್ರಗ್ಸ್ ನೀಡುವಂತೆ ಒತ್ತಾಯಿಸಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

‘ಬೆಳಗಿನ ಜಾವ 3.30ಕ್ಕೆ ಮನೆಗೆ ಬಂದ ಸ್ನೇಹಿತರಾದ ಪೊರ್ಷೆ ಜಾನ್ ಹಾಗೂ ರಿಂಗ್ ಬೌಲ್ ಮೇಲೆಯೂ ದುಷ್ಕರ್ಮಿಗಳು ಹಲ್ಲೆ ನಡೆಸಿ, ಮೊಬೈಲ್‌ಗಳನ್ನು ಕಸಿದುಕೊಂಡಿದ್ದಾರೆ. ಬಳಿಕ ಮನೆಯಲ್ಲಿದ್ದ ₹15 ಸಾವಿರ ನಗದು ಕಸಿದುಕೊಂಡು, ಮೊಬೈಲ್ ವಾಪಸ್ ಕೊಟ್ಟು ಪರಾರಿಯಾಗಿದ್ದಾರೆ’ ಎಂದು ಪೊಲೀಸರು ಹೇಳಿದರು.

ದುಷ್ಕರ್ಮಿಗಳು ಹಿಂದಿ ಹಾಗೂ ಇಂಗ್ಲಿಷ್ ಮಾತನಾಡುತ್ತಿದ್ದರು ಎಂದು ದೂರುದಾರರು ತಿಳಿಸಿದ್ದಾರೆ. ಘಟನಾ ಸ್ಥಳದ ಸುತ್ತಮುತ್ತಲ ಪ್ರದೇಶಗಳ ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲನೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ರೌಡಿಗಳ ಮನೆ ಮೇಲೆ ದಾಳಿ

ಬೆಂಗಳೂರು: ನಗರದ ಸುಮಾರು 400 ರೌಡಿಗಳು ಹಾಗೂ ಹಳೆ ಆರೋಪಿಗಳ ಮನೆ ಮೇಲೆ ದಾಳಿ ಮಾಡಿದ ಪೊಲೀಸರು 11 ಮಂದಿ ವಿರುದ್ಧ ಎಫ್ಐಆರ್ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಉತ್ತರ ವಿಭಾಗ ಡಿಸಿಪಿ ಸೈದುಲ್ಲಾ ಅಡಾವತ್ ಅವರ ನೇತೃತ್ವದಲ್ಲಿ ಎಸಿಪಿಗಳು, ಇನ್‌ಸ್ಪೆಕ್ಟರ್‌ಗಳು ಹಾಗೂ ಸಿಬ್ಬಂದಿ ಶುಕ್ರವಾರ ತಡರಾತ್ರಿಯಿಂದ ಬೆಳಗಿನ ಜಾವದವರೆಗೂ ದಾಳಿ ನಡೆಸಿದ್ದಾರೆ.

ವಾರಂಟ್ ಜಾರಿಯಾಗಿದ್ದರೂ ನ್ಯಾಯಾಲಯಕ್ಕೆ ಹಾಜರಾಗದ 15 ಮಂದಿಯನ್ನು ವಶಕ್ಕೆ ಪಡೆದು, ಬಳಿಕ ಅವರನ್ನು ನ್ಯಾಯಾಧೀಶರ ಎದುರು ಹಾಜರುಪಡಿಸಲಾಯಿತು.

ದಾಳಿ ವೇಳೆ ರೌಡಿಗಳ ಮನೆಗಳಲ್ಲಿ ಕೆಲವು ಮಾರಕಾಸ್ತ್ರಗಳು ಪತ್ತೆಯಾಗಿದ್ದು, ಅವುಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ರೌಡಿಗಳು ಮಾಡುತ್ತಿರುವ ಉದ್ಯೋಗ, ಮೊಬೈಲ್ ನಂಬರ್‌ಗಳನ್ನು ನಮೂದಿಸಿಕೊಂಡ ಅಧಿಕಾರಿಗಳು, ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗದಂತೆ ಎಚ್ಚರಿಕೆ ನೀಡಿದರು.

ಸಂಚಾರ ಮಾರ್ಗ ಬದಲು

ಅರಮನೆ ಮೈದಾನದಲ್ಲಿ ವಿವಿಧ ಕಾರ್ಯಕ್ರಮ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಫೆಬ್ರುವರಿ 9ರಂದು ಬೆಳಿಗ್ಗೆ 9 ರಿಂದ ಸಂಜೆ 4ರ ವರೆಗೆ ವಿವಿಧ ಕಾರ್ಯಕ್ರಮಗಳು ನಡೆಯುವ ಕಾರಣ ಸಂಚಾರ ಮಾರ್ಗದಲ್ಲಿ ಬದಲಾವಣೆ ಮಾಡಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ನಗರದ ಒಳಭಾಗದಿಂದ ಕಾರ್ಯಕ್ರಮಕ್ಕೆ ಬರುವ ವಾಹನಗಳು ವಿಂಡ್ಸರ್ ಮ್ಯಾನರ್ ಜಂಕ್ಷನ್–ಬಿಡಿಎ ಅಪ್ ರ‍್ಯಾಂಪ್ –ರಮಣ ಮಹರ್ಷಿ ರಸ್ತೆ, ಪಿ.ಜಿ.ಹಳ್ಳಿ ಬಸ್ ನಿಲ್ದಾಣ–ಕಾವೇರಿ ಜಂಕ್ಷನ್–ಮೇಕ್ರಿ ಸರ್ಕಲ್ ಸರ್ವಿಸ್ ರಸ್ತೆ–ಮೇಕ್ರಿ ಸರ್ಕಲ್ ಬಳಿಯೂ ತಿರುವು ಪಡೆದುಕೊಳ್ಳಬೇಕು.

ಮೇಕ್ರಿ ಸರ್ಕಲ್ ಸರ್ವಿಸ್ ರಸ್ತೆಯಲ್ಲಿ ಸಾಗಿ, ಅರಮನೆ ಮೈದಾನದ ಗೇಟ್ ನಂ 1 ಕೃಷ್ಣ ವಿಹಾರ, ಗೇಟ್ ನಂಬರ್ 4 ಗಾಯತ್ರಿ ವಿಹಾರ್ ಮತ್ತು ಗೇಟ್ ನಂಬರ್ 5 ಕಿಂಗ್ಸ್ ಕೋರ್ಟ್‌ಗಳಲ್ಲಿ ವಾಹನಗಳನ್ನು ನಿಲುಗಡೆ ಮಾಡಿ, ಬಳಿಕ ಕಾರ್ಯಕ್ರಮದ ಸ್ಥಳ ತಲುಪಬೇಕು.

ಬಳ್ಳಾರಿ ರಸ್ತೆ ಹೆಬ್ಬಾಳ ಕಡೆಯಿಂದ ಬರುವ ವಾಹನಗಳು ಮೇಕ್ರಿ ಸರ್ಕಲ್ ಸರ್ವಿಸ್ ರಸ್ತೆಯಲ್ಲಿ ಎಡತಿರುವು ಪಡೆದು, ಜಯಮಹಲ್ ರಸ್ತೆಯಲ್ಲಿ ಬಂದು ಅರಮನೆ ಮೈದಾನದ ಸರ್ಕಸ್ ಗೇಟ್‌ನಲ್ಲಿ ವಾಹನಗಳ ನಿಲುಗಡೆ ಮಾಡಿ, ಕಾರ್ಯಕ್ರಮದ ಸ್ಥಳಕ್ಕೆ ತೆರಳಬಹುದು.

ಅರಮನೆ ಮೈದಾನದ ಸರ್ಕಸ್ ಗೇಟ್‌ನಲ್ಲಿ ನಿಲುಗಡೆ ಮಾಡಿರುವ ವಾಹಗಳು ಸರ್ಕಸ್ ಗೇಟ್ ಜಯಮಹಲ್ ರಸ್ತೆಯಲ್ಲಿ ಬಂದು ಮೇಕ್ರಿ ಸರ್ಕಲ್ ಮೂಲಕ ಸಂಚರಿಸಬಹುದು.

ಯಶವಂತಪುರ ಕಡೆಯಿಂದ ಬರುವ ವಾಹನಗಳು ಸರ್ ಸಿ.ವಿ.ರಾಮನ್ ರಸ್ತೆಯ ಬಿ.ಎಚ್.ಇ.ಎಲ್ ಸರ್ಕಲ್–ಸದಾಶಿವನಗರ ಪಿ.ಎಸ್.ಜಂಕ್ಷನ್–ಮೇಖ್ರಿ ಸರ್ಕಲ್ ಬಳಿ ಬಲ ತಿರುವು ಪಡೆದುಕೊಳ್ಳಬೇಕು. ಮೇಖ್ರಿ ಸರ್ಕಲ್–ಜಯ ಮಹಲ್ ರಸ್ತೆಯಲ್ಲಿ ಸಾಗಿ, ಸರ್ಕಸ್ ಗೇಟ್ ಅರಮನೆ ಮೈದಾನದಲ್ಲಿ ವಾಹನಗಳನ್ನು ನಿಲುಗಡೆ ಮಾಡಿ, ಕಾರ್ಯಕ್ರಮದ ಸ್ಥಳಕ್ಕೆ ಹೋಗಬೇಕು.

ಅರಮನೆ ಮೈದಾನದ ಸರ್ಕಸ್ ಗೇಟ್‌ನಲ್ಲಿ ನಿಲುಗಡೆ ಮಾಡಿರುವ ವಾಹನಗಳು ಸರ್ಕಸ್ ಗೇಟ್ ಜಯಮಹಲ್ ರಸ್ತೆಯಲ್ಲಿ ಹೊರ ಬಂದು ಮೇಖ್ರಿ ಸರ್ಕಲ್ ಮೂಲಕ ಸಂಚರಿಸಬೇಕು.

ವಾಹನ ನಿಲುಗಡೆ ನಿಷೇಧ

ಅರಮನೆ ರಸ್ತೆ, ಎಂ.ವಿ.ಜಯರಾಮ ರಸ್ತೆ, ಜಯಮಹಲ್ ರಸ್ತೆ, ಸರ್ ಸಿ.ವಿ. ರಾಮನ್ ರಸ್ತೆ, ಬಳ್ಳಾರಿ ರಸ್ತೆ, ರಮಣಮಹರ್ಷಿ ರಸ್ತೆ, ನಂದಿದುರ್ಗ ರಸ್ತೆ, ತರಳಬಾಳು ರಸ್ತೆಯಲ್ಲಿ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ.

ಸ್ಪೋರ್ಟ್ಸ್ ಹುಡ್ ಎಫ್‌ಸಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೋಘ ಪ್ರದರ್ಶನ ನೀಡಿದ ಸ್ಪೋರ್ಟ್ಸ್ ಹುಡ್ ಎಫ್‌ಸಿ ತಂಡ 4–3 ಗೋಲುಗಳಿಂದ ಟೈಯರ್ 1ರ 15 ವರ್ಷದೊಳಗಿನವರ ಯೂತ್ ಪ್ರೀಮಿಯರ್ ಲೀಗ್‌ನಲ್ಲಿ ಶನಿವಾರ ರಾಮನ್ ಸ್ಪೋರ್ಟ್ಸ್ ಅಕಾಡೆಮಿ ತಂಡವನ್ನು ಮಣಿಸಿತು.

ಅಶೋಕ ನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಸ್ಪೋರ್ಟ್ಸ್ ಹುಡ್ ಎಫ್‌ಸಿ ತಂಡದ ರೆಹಾನ್ ಥಾಮಸ್ ಪುಲಾಮ್‌ಕಲಾಮ್ (38ನೇ ಮತ್ತು 40+1), ನಿವೀದ್ ಪ್ರಜೇಶ್ (40ನೇ ನಿ.), ಯುವನ್ ಬನ್ಸಾಲ್ 61ನೇ ನಿ.), ಗೋಲುಗಳನ್ನು ಹೊಡೆದರು.

ರಾಮನ್ ತಂಡದ ಅರವ್ ಗೊಯೆಲ್ (20ನೇ ನಿ.) ಮತ್ತು ಸಮರ್ಥ್ ಪಾಟೀಲ್ (27ನೇ ನಿ.) ಮತ್ತು ಸಮರ್ಥ್ ಪಾಟೀಲ್ (27ನೇ ನಿ. ಮತ್ತು 30ನೇ ನಿ.) ಚೆಂಡನ್ನು ಗುರಿ ಸೇರಿಸಿದರು.

ಎರಡನೇ ಪಂದ್ಯದಲ್ಲಿ ಬಿಬಿಎಫ್‌ಎಸ್ ತಂಡ 1–1 ಗೋಲಿನಿಂದ ಬಿವೈಎಫ್‌ಎಲ್ ವಿರುದ್ಧ ಡ್ರಾ ಮಾಡಿಕೊಂಡಿತು. ಬಿಬಿಎಫ್‌ಎಸ್ ತಂಡದ ವಿವಾನ್ ತೆಗ್ಗಿಮಣಿ (32ನೇ ನಿ.) ಮತ್ತು ಬಿವೈಎಫ್‌ಎಲ್ ತಂಡದ ನಾದುರ್ಲ್ಲಾ ಅಕ್ಷತ್ ರೆಡ್ಡಿ 93ನೇ ನಿ.) ಗೋಲು ಬಾರಿಸಿದರು.

ಮೂರನೇ ಪಂದ್ಯದಲ್ಲಿ ರೂಟ್ಸ್ ಎಫ್‌ಎ 10–0 ಗೋಲುಗಳಿಂದ ಕನ್ಸೈಂಟ್ ಎಫ್‌ಎ ವಿರುದ್ಧ ಭರ್ಜರಿ ಗೆಲುವು ಪಡೆಯಿತು.

ನಾಲ್ಕನೆ ಪಂದ್ಯದಲ್ಲಿ ಆಲ್ಕೆಮಿ ಐಎಫ್‌ಇಪಿ ತಂಡ 1–0 ಗೋಲಿನಿಂದ ಪೈಯೋನೀರ್ ಸ್ಪೋರ್ಟ್ಸ್ ತಂಡವನ್ನು ಸೋಲಿಸಿತು. ಆಲ್ಕೆಮಿ ಐಎಫ್‌ಇಪಿ ತಂಡದ ವನೀಶ್ ರಾಂಕಾ (27ನೇ ನಿ.) ಗೋಲು ಹೊಡೆದರು.

ಭಾರತ ಕ್ರಿಕೆಟ್ ತಂಡದ ಸ್ಪಿನ್ನರ್ ಯಜುವೇಂದ್ರ ಚಹಲ್ ಅವರು ಬೆಂಗಳೂರಿನ ಹಾಯ್ ಕಲ್ವಾ ಗ್ರೂಪ್ ಆಫ್ ಸ್ಕೂಲ್ಸ್‌ಗೆ ರಾಯಭಾರಿಯಾಗಿ ನೇಮಕಗೊಂಡರು. ಚಹಲ್ ಅವರನ್ನು ಹಾಯ್ ಕಲ್ವಾ ಗ್ರೂಪ್‌ನ ಸಂಸ್ಥಾಪಕ ಮತ್ತು ನಿರ್ದೇಶಕರಾದ ವಿಕಾಸ್ ಶರ್ಮ ಮತ್ತು ಶಾಲಿನಿ ಶರ್ಮ ಸ್ವಾಗತಿಸಿದರು

ಕೊಲೆ: ಇಬ್ಬರಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಕೋರ್ಟ್ ಸುದ್ದಿ

ಬೆಂಗಳೂರು: ಹಣಕ್ಕಾಗಿ ಮಹಿಳೆಯನ್ನು ಕೊಲೆ ಮಾಡಿದ್ದ ಪ್ರಕರಣದಲ್ಲಿ ಇಬ್ಬರು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿ 71ನೇ ಅಧಿಕ ಸಿಟಿ ಸಿವಿಲ್ ಕೋರ್ಟ್ ನ್ಯಾಯಾಧೀಶ ಬಾಲಚಂದ್ರ ಎನ್.ಭಟ್ ಆದೇಶಿಸಿದ್ದಾರೆ.

ಜ್ಞಾನಜ್ಯೋತಿ ನಗರದ ಮಾಯಣ್ಣ ಕಾಂಪೌಂಡ್‌ನ ವಠಾರದಲ್ಲಿ ವಾಸವಿದ್ದ ಇಂದಿರಮ್ಮ ಮತ್ತು ರಾಜಶೇಖರ್ ಶಿಕ್ಷೆಗೆ ಒಳಗಾದವರು.

ಜ್ಞಾನಭಾರತಿ ಠಾಣೆ ವ್ಯಾಪ್ತಿಯ ಮಾಯಣ್ಣ ಕಾಂಪೌಂಡ್ ವಠಾರದಲ್ಲಿ ರಂಜಿತಾ (26) ತನ್ನ ಕುಟುಂಬದ ಜತೆ ವಾಸವಾಗಿದ್ದರು. ಇದೇ ವಠಾರದಲ್ಲಿದ್ದ ಇಂದಿರಮ್ಮ ಮನೆಗೆ ರಾಜಶೇಖರ್ ಬಂದು ಹೋಗುತ್ತಿದ್ದ. ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಅಪರಾಧಿಗಳು ಆರ್ಥಿಕ ತೊಂದರೆಗೆ ಸಿಲುಕಿದ್ದರು.

2021ರ ಜುಲೈ 10ರ ಬೆಳಿಗ್ಗೆ 9.30ರಲ್ಲಿ ರಂಜಿತಾ ಮನೆಗೆ ಹೋಗಿದ್ದ ಅಪರಾಧಿಗಳು ಹಣ ಕೇಳಿದ್ದಾರೆ. ಹಣ ನೀಡಲು ನಿರಾಕರಿಸಿದಾಗ ಟಿ.ವಿ. ಶಬ್ದ ಹೆಚ್ಚು ಮಾಡಿ ಆಕೆಯ ಕತ್ತು ಹಿಸುಕಿ ಮತ್ತು ಚಾಕುವಿನಿಂದ ಇರಿದು ಕೊಲೆ ಮಾಡಿದ್ದರು. ಬಳಿಕ ಆಕೆಯ ಮೈಮೇಲಿದ್ದ ಚಿನ್ನಾಭರಣ ದೋಚಿ ಪರಾರಿಯಾಗಿದ್ದರು.

ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದ ಪೊಲೀಸರು, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಅಭಿಯೋಜಕಿ ಎಚ್.ಆರ್.ಸತ್ಯವತಿ ವಾದ ಮಂಡಿಸಿದರು.

ಕಡತಗಳನ್ನು ಹೊತ್ತೊಯ್ಯುವಂತಿಲ್ಲ: ಸಕ್ಸೇನಾ

ನವದೆಹಲಿ: ವಿಧಾನಸಭೆ ಚುನಾವಣೆ ಫಲಿತಾಂಶದ ಬೆನ್ನಲ್ಲೇ, ದೆಹಲಿ ಸಚಿವಾಲಯದ ಹೊರಕ್ಕೆ ಯಾವುದೇ ಕಡತಗಳು, ದಾಖಲೆಗಳು ಮತ್ತು ಕಂಪ್ಯೂಟರ್‌ಗಳನ್ನು ಹೊತ್ತೊಯ್ಯುವಂತಿಲ್ಲ ಎಂದು ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರು ಶನಿವಾರ ಆದೇಶ ಹೊರಡಿಸಿದ್ದಾರೆ.

ಕಡತಗಳ ಸುರಕ್ಷತೆ ಹಿತದೃಷ್ಟಿಯಿಂದ ದೆಹಲಿ ಸರ್ಕಾರದ ಸಾಮಾನ್ಯ ಆಡಳಿತ ಇಲಾಖೆಯ (ಜಿಎಡಿ) ಪೂರ್ವಾನುಮತಿ ಇಲ್ಲದೆ ಯಾವುದೇ ಕಡತ, ದಾಖಲೆ, ಕಂಪ್ಯೂಟರ್ ಹಾರ್ಡ್‌ವೇರ್‌ಗಳನ್ನು ತೆಗೆದುಕೊಂಡು ಹೋಗುವಂತಿಲ್ಲ ಅಥವಾ ಅಳಿಸುವಂತಿಲ್ಲ. ಕಡತಗಳ ಸುರಕ್ಷತೆಗೆ ಸಂಬಂಧಿಸಿದಂತೆ ದೆಹಲಿ ಸಚಿವಾಲಯದ ಅಡಿಯಲ್ಲಿ ಕಾರ್ಯ ನಿರ್ವಹಿಸುವ ಇಲಾಖೆಗಳಿಗೆ ಅಗತ್ಯ ಸೂಚನೆ ನೀಡಿರುವುದಾಗಿ ಆದೇಶದಲ್ಲಿ ತಿಳಿಸಿದ್ದಾರೆ.

ಆದೇಶವು ಸಚಿವ ಸಂಪುಟದ ಎಲ್ಲಾ ಇಲಾಖೆಗಳು, ಏಜೆನ್ಸಿಗಳು ಮತ್ತು ಕ್ಯಾಂಪ್ ಕಚೇರಿಗಳಿಗೆ ಅನ್ವಯವಾಗಲಿದೆ.

ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಮನೀಶ್ ಸಿಸೋಡಿಯಾ ಸೇರಿದಂತೆ ಹಲವು ಎಎಪಿ ನಾಯಕರು ಭ್ರಷ್ಟಾಚಾರ ಆರೋಪ ಎದುರಿಸುತ್ತಿದ್ದಾರೆ. ಹೀಗಾಗಿ ಈ ಆದೇಶ ಹೊರಡಿಸಲಾಗಿದೆ ಎಂದು ಹೇಳಲಾಗಿದೆ.

ಮುಂಬೈ ರೇಸ್

‘ಮೇಸಾರ’ ಗೆಲ್ಲುವ ನಿರೀಕ್ಷೆ

ಆರ್.ಎಂ. ಅಂಡ್ ರುಕ್ಮಣಿ ಗೋಕುಲ್‌ದಾಸ್ ಮಿಲಿಯನ್ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮೇಸಾರ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮೈಟಿ ಸ್ಪಾರೊ 5, ಸಬ್‌ಸ್ಟ್ಯಾನ್ಶಿಯಲ್ 3, ಚಾರ್ಡಿಕಲ 2
2ನೇ ರೇಸ್: ಇಟ್ಸ್ ಮೈ ಟೈಮ್ 2, ಕ್ರಿಸ್ಟೊಫಾನಿ 3
3ನೇ ರೇಸ್: ಎನ್‌ಡ್ಯೂರೆನ್ಸ್ 4, ಮಲ್ಟಿವರ್ಸ್ 2, ಅಲೆಕ್ಸಾಂಡ್ರೋಸ್ 5
4ನೇ ರೇಸ್: ಬಷೀರ್ 2, ಆಕ್ಸಲ್‌ರಾಡ್ 5, ಸೆಲೆಸ್ಟಿಯಲ್ 1
5ನೇ ರೇಸ್: ಮೇಸಾರ 5, ಮೊಜೊ 7, ಡಿವೈನ್ ಇಂಟ್ಯೂಷನ್ 3
6ನೇ ರೇಸ್: ಜ್ಯಾಕ್‌ಸನ್ 2, ಸೂಪರ್‌ಸ್ಟಾರ್ 8, ಮೆಷಿಯವೆಲ್ಲಿಯನ್ 3
7ನೇ ರೇಸ್: ಒಟೆಲ್ಲೊ 3, ಅಪ್ಲಾಸ್ 1, ಲೈಟ್ನಿಂಗ್ ಬ್ಲೇಝ್ 12

ಉತ್ತಮ ಬೆಟ್: ಇಟ್ಸ್ ಮೈ ಟೈಮ್

ಜಾಕ್‌ಪಾಟ್	ಟ್ರಿಬಲ್
3,4,5,6,7	4,5,6

ಲೋಕೋತ್ಸವದಲ್ಲಿ ಪ್ರೊ. ಪುರುಷೋತ್ತಮ ಬಿಳಿಮಲೆ ಅಭಿಪ್ರಾಯ

ಚರಿತ್ರೆಗೆ ಜಾನಪದವೇ ಅಮೂಲ್ಯ ಆಕರ

ಪ್ರಜಾವಾಣಿ ವಾರ್ತೆ

ರಾಮನಗರ: ‘ಚರಿತ್ರೆಗೆ ಜಾನಪದಕ್ಕಿಂತ ಅಮೂಲ್ಯ ಆಕರ ಮತ್ತೊಂದಿಲ್ಲ. ಆ ನಿಟ್ಟಿನಲ್ಲಿ ಚರಿತ್ರೆ ಬರೆಯುವ ಕೆಲಸವಾಗಬೇಕಿದೆ. ಈಗ ನಾವು ಓದುತ್ತಿರುವ ಚರಿತ್ರೆ ಜಾನಪದ ಮತ್ತು ಮಹಿಳೆಯರನ್ನು ನಿರ್ಲಕ್ಷ್ಯಿಸಿ ಸೃಷ್ಟಿಯಾಗಿರುವಂತಹದ್ದು. ಜನಪದರ ಬದುಕು ಹಾಗೂ ಮೌಖಿಕವಾಗಿ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದಿರುವ ಕಲೆಗಳನ್ನು ಕಡೆಗಣಿಸಲಾಗಿದೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ. ಪುರುಷೋತ್ತಮ ಬಿಳಿಮಲೆ ಅಭಿಪ್ರಾಯಪಟ್ಟರು.

ನಗರದ ಹೊರವಲಯದಲ್ಲಿರುವ ಜಾನಪದ ಲೋಕದಲ್ಲಿ ಜಾನಪದ ಪರಿಷತ್ತು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆಯುತ್ತಿರುವ ಎರಡು ದಿನಗಳ ‘ಮಹಿಳಾ ಜಾನಪದ ಲೋಕೋತ್ಸವ–2025’ ಕಾರ್ಯಕ್ರಮವನ್ನು ಶನಿವಾರ ಉದ್ಘಾಟಿಸಿ ಮಾತನಾಡಿದರು.

‘ದಕ್ಷಿಣ ಕನ್ನಡದಲ್ಲಿರುವ ಏಕೈಕ ಜಾನಪದ ವಸ್ತು ಸಂಗ್ರಹಾಲಯ ಸ್ಥಾಪಿಸಿದ ಹೆಗ್ಗಳಿಕೆ ಪರಿಷತ್ತಿನ ಸಂಸ್ಥಾಪಕರೂ ಆಗಿರುವ ಎಚ್.ಎಲ್. ನಾಗೇಗೌಡ ಅವರದ್ದು. ಅವರ ಸಾಹಿತ್ಯ ಹಾಗೂ ಸಂಶೋಧನಾ ಕೃತಿಗಳ ಕುರಿತು ಹೆಚ್ಚಿನ ಚರ್ಚೆ ಆಗಬೇಕಿದೆ’ ಎಂದರು.

ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಮಾತನಾಡಿ, ‘ಜಾನಪದವನ್ನು ನೋಡುವ ರೀತಿ– ನೀತಿ ಬದಲಾಗಬೇಕಿದೆ’ ಎಂದರು.

ಜನಪದ ಕಲೆಗಳ ಯುವ ಜನೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಪರಿಷತ್ತಿನ ಮಾಜಿ ಅಧ್ಯಕ್ಷ ಟಿ. ತಿಮ್ಮೇಗೌಡ, ‘ನೆಲಮೂಲದ ಕಲೆಗಳನ್ನು ಉಳಿಸಿ, ಬೆಳೆಸಿಕೊಂಡು ಹೋಗಬೇಕು. ಅದಕ್ಕಾಗಿ, ಸರ್ಕಾರ ಪರಿಣಾಮಕಾರಿ ಯೋಜನೆಗಳನ್ನು ರೂಪಿಸಬೇಕು’ ಎಂದು ಒತ್ತಾಯಿಸಿದರು.

ಪರಿಷತ್ತಿನ ಅಧ್ಯಕ್ಷ ಪ್ರೊ.ಹಿ.ಚಿ. ಬೋರಲಿಂಗಯ್ಯ ಮಾತನಾಡಿದರು.

ಲೋಕೋತ್ಸವದಲ್ಲಿ ಗಮನ ಸೆಳೆದ ಜಾನಪದ ಕಲಾತಂಡಗಳು

ರಿಯಾಲಿಟಿ ಅಲ್ಲದ ರಿಯಾಲಿಟಿ ಹೆಸರಿನ ಷೋಗಳು ಹಾಗೂ ಸಿನಿಮಾ ಹಾಡುಗಳಲ್ಲಿ ಜಾನಪದವನ್ನು ಕೊಲ್ಲಲಾಗುತ್ತಿದೆ. ಥಳುಕು ಬಳುಕುಗಳಿಂದ ಮರೆಮಾಚಲಾಗುತ್ತಿದೆ

ಗೊಲ್ಲಹಳ್ಳಿ ಶಿವಪ್ರಸಾದ್
ಅಧ್ಯಕ್ಷ, ಕರ್ನಾಟಕ ಜಾನಪದ ಅಕಾಡೆಮಿ

ಸಚಿವ, ಶಾಸಕ, ಅಧಿಕಾರಿಗಳು ಗೈರು

ಲೋಕೋತ್ಸವ ಉದ್ಘಾಟಿಸಬೇಕಿದ್ದ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ಎಸ್. ತಂಗಡಗಿ ಹಾಗೂ ಅಧ್ಯಕ್ಷತೆ ವಹಿಸಬೇಕಿದ್ದ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಗೈರಾಗಿದ್ದರು. ಆಹ್ವಾನ ಪತ್ರಿಕೆಯ ಗೌರವ ಉಪಸ್ಥಿತಿ ಪಟ್ಟಿಯಲ್ಲಿದ್ದ ಇಲಾಖೆಯ ನಿರ್ದೇಶಕಿ ಡಾ. ಕೆ. ಧರಣಿದೇವಿ ಮಾಲಗತ್ತಿ, ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್, ಎಸ್ಪಿ ಆರ್. ಶ್ರೀನಿವಾಸ ಗೌಡ, ಜಿಲ್ಲಾ ಪಂಚಾಯಿತಿ ಸಿಇಒ ಅನ್ಮೋಲ್ ಜೈನ್ ಸಹ ಕಾರ್ಯಕ್ರಮದಲ್ಲಿ ಕಾಣಿಸಿಕೊಳ್ಳಲಿಲ್ಲ.

ನಮ್ಮ ಮೆಟ್ರೋ namma metro

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

ಸಾರ್ವಜನಿಕ ಪ್ರಕಟಣೆ

ಪರಿಷ್ಕೃತ ಮೆಟ್ರೋ ದರಗಳು

ದೂರ ವಲಯ (ಕಿಮೀ)	ದಿ: 09/02/2025 ರಿಂದ ಜಾರಿಗೆ (ರೂ. ಗಳಲ್ಲಿ)	
0-2	10	
2-4	20	
4-6	30	
6-8	40	
8-10	50	
10-15	60	
15-20	70	
20-25	80	
25-30	90	
>30	90	
	ದಿನದ ಪಾಸ್‌ಗಳು	
ಮಾನ್ಯತೆ	ಪರಿಷ್ಕೃತ ದರ (ರೂ.)	
ಒಂದು ದಿನ	300	
ಮೂರು ದಿನಗಳು	600	
ಐದು ದಿನಗಳು	800	
	ಗ್ರೂಪ್ ಟಿಕೆಟ್	
ಗಾತ್ರ	ಒಂದೇ ನಿಲ್ದಾಣವನ್ನು ಪ್ರವೇಶಿಸಿ ಮತ್ತು ಒಂದೇ ನಿಲ್ದಾಣದಿಂದ ನಿರ್ಗಮಿಸಲು ಅನ್ವಯವಾಗುವ ದರದಲ್ಲಿ (%) ರಿಯಾಯಿತಿ	ವಿವಿಧ ನಿಲ್ದಾಣಗಳಿಂದ ಪ್ರವೇಶಿಸಿ ಮತ್ತು ಒಂದೇ ನಿಲ್ದಾಣದಲ್ಲಿ ನಿರ್ಗಮಿಸಲು ಅಥವಾ ಅದೇ ನಿಲ್ದಾಣಗಳಿಂದ ಪ್ರವೇಶಿಸಿ ಮತ್ತು ವಿವಿಧ ನಿಲ್ದಾಣಗಳಲ್ಲಿ ನಿರ್ಗಮಿಸಲು, ಫ್ಲಾಟ್ ದರ ಪ್ರತಿ ವ್ಯಕ್ತಿಗೆ
	ಪರಿಷ್ಕೃತ	ಪರಿಷ್ಕೃತ ದರ
25 to 99	15	ರಿಯಾಯಿತಿ ಇಲ್ಲ
100 to 1000	20	ರೂ. 60/-
>1000	25	ರೂ. 50/-

ಸ್ಮಾರ್ಟ್ ಕಾರ್ಡ್‌ಗಳ ಮೇಲೆ ಮಾತ್ರ ವಿಶೇಷ ಸೌಲಭ್ಯಗಳು

ಪ್ರಯಾಣಕ್ಕೆ ಬಳಸುವ ಸ್ಮಾರ್ಟ್ ಕಾರ್ಡಿನಲ್ಲಿ ಕನಿಷ್ಠ ಮೊತ್ತ ರೂ. 90 ಹೊಂದಿರಬೇಕು.

ಪೀಕ್ ಅವರ್

- ಪ್ರತಿ ಪ್ರಯಾಣಕ್ಕೆ ಶೇ. 5 ರಿಯಾಯಿತಿ.

ಆಫ್ ಪೀಕ್ ಅವರ್

- ಹೆಚ್ಚುವರಿ ಶೇ. 5 ರಿಯಾಯಿತಿ ಮೆಟ್ರೋ ವ್ಯವಸ್ಥೆಗೆ ಪ್ರವೇಶಿಸುವ ಕೆಳಗಿನ ಸಮಯವನ್ನು ಆಧರಿಸಿ:
- ವಾರದ ದಿನಗಳಲ್ಲಿ, ಬೆಳಗ್ಗೆ ಕಾರ್ಯಾಚರಣೆ ಆರಂಭದಿಂದ 8 ಗಂಟೆಯವರೆಗೆ.
- ಮಧ್ಯಾಹ್ನ 12 ರಿಂದ 4 ಗಂಟೆಯವರೆಗೆ.
- ರಾತ್ರಿ 9 ಗಂಟೆಯಿಂದ ಕಾರ್ಯಾಚರಣೆ ಮುಕ್ತಾಯದವರೆಗೆ.

ಭಾನುವಾರ ಮತ್ತು ರಾಷ್ಟ್ರೀಯ ರಜಾ ದಿನಗಳು

- ಎಲ್ಲಾ ಭಾನುವಾರ ಮತ್ತು ರಾಷ್ಟ್ರೀಯ ರಜಾದಿನಗಳಲ್ಲಿ (ಜನವರಿ 26, ಆಗಸ್ಟ್ 15, ಅಕ್ಟೋಬರ್ 02) ದಿನವಿಡೀ ಏಕರೂಪವಾಗಿ ಶೇ. 10 ರಿಯಾಯಿತಿ.

ದಟ್ಟ ಕಾಡಿಗೆ ಜನರೇ ಜೀವ

ಕುಮಟಾ ತಾಲ್ಲೂಕಿನ ಹಳಕಾರ ಗ್ರಾಮದ ಅರಣ್ಯವನ್ನು ನಿರಂತರವಾಗಿ ಕಾಯುವ ಗ್ರಾಮ ಅರಣ್ಯ ಪಂಚಾಯಿತಿಯ ಸದಸ್ಯರು

ಒಂದನೇ ಪುಟದಿಂದ...

1924ರಲ್ಲಿ ಬ್ರಿಟಿಷ್ ಕಾಲದಲ್ಲಿ ರಚನೆಯಾದ ಹಳಕಾರ ಗ್ರಾಮ ಅರಣ್ಯ ಪಂಚಾಯಿತಿಯಲ್ಲಿ ಕೃಷಿಯೇತರ ಭೂಮಿ ಹೊಂದಿರುವವರಿಗೆ ಸದಸ್ಯತ್ವ ಇಲ್ಲ. ಕಾಡಿಗೆ ಹಾನಿಯಾದರೆ, ಸದಸ್ಯತ್ವ ರದ್ದುಪಡಿಸಲಾಗುತ್ತದೆ. ಕಾಡಿಗೆ ಹಾನಿಯಾಗಿರುವ ವಿಷಯ ತಿಳಿದೂ ಸುಮ್ಮನಿರುವ ಗ್ರಾಮಸ್ಥ ಶಿಕ್ಷೆಗೆ ಗುರಿಯಾಗಬೇಕು. ಇಂತಹ ಕಟ್ಟುಪಾಡು ಇಂದಿಗೂ ಪಾಲನೆ ಆಗುತ್ತಿದೆ. ಇಂತಹ ನಿಯಮಗಳೇ ಕಾಡು ಉಳಿಯಲು ಮೂಲ ಪ್ರೇರಣೆಯಾಗಿದೆ.

ಹಳಕಾರ ಅರಣ್ಯದಲ್ಲಿ ಗ್ರಾಮಸ್ಥರೇ ಗಸ್ತು ತಿರುಗುತ್ತಾರೆ. ಕತ್ತಿ, ಕೊಡಲಿ, ಗರಗಸ ಹೀಗೆ ಯಾವುದೇ ಆಯುಧ ಹಿಡಿದು ಕಾಡಿನೊಳಗೆ ಬರಲು ಯಾರಿಗೂ ಬಿಡುವುದಿಲ್ಲ. ಆಯುಧ ಸಮೇತ ಊರಿನವರೂ ಕಾಡಿಗೆ ಹೋಗುವುದಿಲ್ಲ. ಇದು ಶತಮಾನದಿಂದ ನಡೆದು ಬಂದಿರುವ ಅಘೋಷಿತ ಪದ್ಧತಿ. ಈ ಪದ್ಧತಿಗೆ ಚ್ಯುತಿ ಬರದಂತೆ ಗ್ರಾಮಸ್ಥರು ನಡೆದು ಬಂದಿರುವ ಪರಿಣಾಮದಿಂದಲೇ 219 ಎಕರೆ ವಿಶಾಲವಾಗಿ ಅರಣ್ಯ ಹಸಿರಿನಿಂದ ನಳನಳಿಸುತ್ತಲೇ ಹಸನಾಗಿ ಉಳಿದಿದೆ.

ಕುಮಟಾ ಪಟ್ಟಣದ ಜನರು ಶುದ್ಧ ಆಮ್ಲಜನಕಕ್ಕೆ ನಿತ್ಯ ಮುಂಜಾನೆ ಮತ್ತು ಸಂಜೆ ಪಟ್ಟಣದಿಂದ ಮೂರು ಕಿಲೋ ಮೀಟರ್ ದೂರದಲ್ಲಿರುವ ಹಳಕಾರ ಗ್ರಾಮದ ರಸ್ತೆಯಲ್ಲಿ ವಾಯುವಿಹಾರಕ್ಕೆ ತೆರಳುತ್ತಾರೆ. ಹೀಗೆ ಬರುವವರು ಗ್ರಾಮದ ರಸ್ತೆಯ ಇಕ್ಕೆಲದಲ್ಲೂ ಹರಡಿಕೊಂಡ ಅರಣ್ಯವನ್ನು ಆಸ್ವಾದಿಸುತ್ತಾರೆ.

ಆದರೆ, ಯಾರೇ ಆದರೂ ಕಾಡಿನ ಒಳಹೊಕ್ಕು ಮರ ಕಡಿದರೆ, ಕನಿಷ್ಠಪಕ್ಷ ಮರದ ಒಂದೇ ಟೊಂಗೆಯನ್ನು ಮುರಿದರೂ ಅವರು ದಂಡ ತೆರಬೇಕು. ಇಲ್ಲವೇ, ಗ್ರಾಮಸ್ಥರು ವಿಧಿಸುವ ಶಿಕ್ಷೆಗೆ ಗುರಿಯಾಗಬೇಕು!

ಹೀಗೆ, ಶಿಕ್ಷೆಗೆ ಗುರಿಯಾದವರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ನಸುಕಿನ ಜಾವ, ತಡರಾತ್ರಿಯಲ್ಲೋ ಕಾಡಿನ ಮರ ಕಡಿಯಲು ಬಂದರೂ ಗ್ರಾಮಸ್ಥರು ಅವರನ್ನು ಹುಡುಕಿ ಹಿಡಿದಿದ್ದಾರೆ. ‘ಕುಮಟಾದಲ್ಲಿ ನಡೆದ ಕಾರ್ಯಕ್ರಮವೊಂದಕ್ಕೆ ಮರದ ದಿಮ್ಮಿ ಅಗತ್ಯವಿದೆ ಎಂಬ ಕಾರಣಕ್ಕೆ ಗುಂಪೊಂದು ರಾತ್ರೋರಾತ್ರಿ ಕಾಡಿಗೆ ನುಗ್ಗಿತ್ತು. ಗ್ರಾಮಸ್ಥರೊಬ್ಬರು ತಕ್ಷಣ ಮಾಹಿತಿ ನೀಡಿದರು. ಹತ್ತಾರು ಜನ ಒಟ್ಟಾಗಿ ಸೇರಿ ಮರ ಕಡಿಯಲು ಬಂದವರನ್ನು ಹಿಡಿದು, ಆಯುಧಗಳನ್ನು ವಶಕ್ಕೆ ಪಡೆದೆವು. ಎಚ್ಚರಿಕೆ ನೀಡಿ ಕಳುಹಿಸಿದೆವು. ಮತ್ತೆ ಅವರೆಂದೂ ಊರಿನತ್ತ ಹಾಯಲಿಲ್ಲ’ ಎಂದು ಹಳಕಾರ ಗ್ರಾಮಸ್ಥ ಅನಂತ ಪಟಗಾರ ಹೇಳಿದರು.

‘ಊರಿನ ಕಾಡು ಕಾಯುವುದು ಜವಾಬ್ದಾರಿ ಎಂಬುದು ನಮಗೆ ಗ್ರಾಮದ ಹಿರಿಯರು ಹೇಳಿಕೊಟ್ಟ ಪಾಠ. ಅದನ್ನು ಪಾಲಿಸುತ್ತಿದ್ದೇವೆ. ಇಡೀ ಗ್ರಾಮದ ಕಾಡನ್ನು ವಾರಕ್ಕೊಮ್ಮೆಯಾದರೂ ಒಬ್ಬೊಬ್ಬ ಸದಸ್ಯರು ಸುತ್ತುತ್ತಾರೆ. ಪಾಳಿ ಆಧಾರದಲ್ಲಿ ಕೆಲಸ ನಡೆಯುತ್ತದೆ. ಕಾಡಿನ ಒಳಗೆ ಅಪರಿಚಿತರು ಯಾರೇ ಹೊಕ್ಕರೂ, ಊರಿನವರೇ ಆಯುಧ ಹಿಡಿದು ಸಾಗಿದರೂ ಒಬ್ಬರಲ್ಲ ಒಬ್ಬರು ಗಮನಿಸಿ ಮಾಹಿತಿ ನೀಡುತ್ತಾರೆ. ಆಯುಧಗಳ ಹೊಡೆತಕ್ಕೆ ಮರವಷ್ಟೇ ಅಲ್ಲ, ಮರದ ಟೊಂಗೆಯೂ ಕಡಿತಗೊಳ್ಳಲು ಬಿಟ್ಟಿಲ್ಲ’ ಎಂದರು.

‘ಗ್ರಾಮದಲ್ಲಿ ವಿಭಿನ್ನ ಸಮುದಾಯದ, ಬೇರೆ ಬೇರೆ ಕ್ಷೇತ್ರದಲ್ಲಿ ಕೆಲಸ ಮಾಡುವ ಜನರಿದ್ದಾರೆ. ಸೈದ್ಧಾಂತಿಕವಾಗಿ ಭಿನ್ನಾಭಿಪ್ರಾಯ ಇರಬಹುದು. ಆದರೆ, ಗ್ರಾಮದ ಅರಣ್ಯ ರಕ್ಷಿಸುವ ವಿಚಾರದಲ್ಲಿ ಎಲ್ಲರೂ ಒಟ್ಟಾಗಿದ್ದೇವೆ. ಈ ಕಾರಣದಿಂದ ಸುರಗಿ, ನೇರಲೆ, ಹಳಚರಿ, ತಾರಿ, ಮತ್ತಿ, ನೀಲಗಿರಿ ಸೇರಿ ಸಾವಿರಾರು ಮರಗಳು ಮಟ್ಟಸವಾಗಿ ಬೆಳೆದು ನಿಂತಿವೆ’ ಎನ್ನುತ್ತಲೇ ಸಮೃದ್ಧ ಅರಣ್ಯದತ್ತ ಕೈ ತೋರಿಸಿದರು.

‘ಹಳಕಾರ ಗ್ರಾಮ ಅರಣ್ಯ ಪಂಚಾಯಿತಿಯು, ಸರ್ಕಾರವೊಂದು ರಾಜ್ಯದ ಆಡಳಿತ ನೋಡಿಕೊಳ್ಳುವಂತೆ, ಗ್ರಾಮದ ಅರಣ್ಯ ಭೂಮಿಯನ್ನು ಕಾಯುವ ಕೆಲಸ ಮಾಡುತ್ತಿದೆ. ಗ್ರಾಮದಲ್ಲಿನ 262 ಮನೆಗಳಿಂದ ತಲಾ ಒಬ್ಬರ ಸದಸ್ಯರು ಸಮಿತಿಯಲ್ಲಿ ಇದ್ದಾರೆ. ಪ್ರತಿಯೊಬ್ಬರಿಗೂ ಮತದಾನದ ಹಕ್ಕು ಇದೆ. ಮೂರು ವರ್ಷಕ್ಕೊಮ್ಮೆ 9 ಮಂದಿ ನಿರ್ದೇಶಕರನ್ನು ಆರಿಸುತ್ತೇವೆ. ಅವರು ಗ್ರಾಮ ಅರಣ್ಯದ ರಕ್ಷಣೆಯ ಜವಾಬ್ದಾರಿ ನಿಭಾಯಿಸುತ್ತಾರೆ. ಅವರೊಟ್ಟಿಗೆ ಉಳಿದ ಸದಸ್ಯರು ಪಾಳಿ ಆಧಾರದಲ್ಲಿ ಕಾಡು ಕಾಯುತ್ತಾರೆ’ ಎಂದು ಅರಣ್ಯದ ಆಡಳಿತವನ್ನು ಗ್ರಾಮ ಅರಣ್ಯ ಪಂಚಾಯಿತಿ ಅಧ್ಯಕ್ಷ ನಾಗರಾಜ ಭಟ್ಟ ವಿವರಿಸಿದರು.

‘ಕಾಡನ್ನು ಗ್ರಾಮಸ್ಥರು ಕೃಷಿಗಾಗಿ ಬಳಸಿಕೊಳ್ಳುತ್ತಾರೆ. ಗೊಬ್ಬರಕ್ಕಾಗಿ ಬಿದ್ದ ತರಗೆಲೆಗಳನ್ನು ಸಂಗ್ರಹಿಸುತ್ತಾರೆ. ಮುರಿದು ಬಿದ್ದ ಒಣ ಕಟ್ಟಿಗೆಗಳನ್ನು ಸಂಗ್ರಹಿಸಲಾಗುತ್ತದೆ. ಯಾರೂ ಆಯುಧ ಒಯ್ಯದೆ, ಬಿದ್ದ ಟೊಂಗೆ, ಎಲೆಗಳನ್ನು ಮಾತ್ರ ಆರಿಸಿಕೊಳ್ಳಬಹುದು. ಹೀಗೆ ಕಾಡು ಬಳಕೆಗೆ ಪ್ರತಿ ಮನೆಯಿಂದ ತಲಾ ₹30 ಶುಲ್ಕವನ್ನು ವಾರ್ಷಿಕವಾಗಿ ಸಂಗ್ರಹಿಸಿ, ಅವರಿಗೆ ಪಾಸ್ ನೀಡಲಾಗುತ್ತದೆ. ಸಂಗ್ರಹವಾದ ಮೊತ್ತದಲ್ಲಿ ಕಾಡಿನಲ್ಲಿ ಗಸ್ತು ತಿರಗಲು ಒಬ್ಬ ಕಾವಲುಗಾರನ್ನು ನೇಮಿಸಲಾಗಿದೆ’ ಎಂದು ತಿಳಿಸಿದರು.

‘ಕಾಡಿನಲ್ಲಿರುವ ಸುರಗಿ ಮರದಲ್ಲಿ ಬಿಡುವ ಹೂವನ್ನು ಹರಾಜು ಮೂಲಕ ಮಾರುತ್ತೇವೆ. ಉರುವಲುಗಳನ್ನು ಸಂಗ್ರಹಿಸಿ, ಕೆ.ಜಿ ಲೆಕ್ಕದಲ್ಲಿ ಮಾರಲಾಗುತ್ತದೆ. ಗ್ರಾಮದಲ್ಲಿ ಯಾರಾದರೂ ಮೃತಪಟ್ಟರೆ ಬಿದ್ದ ಮರಗಳಿಂದ ಸಂಗ್ರಹಿಸಿದ 5 ಕ್ವಿಂಟಲ್ ಉರುವಲು ಒದಗಿಸಲಾಗುತ್ತದೆ. ಇವೆಲ್ಲವನ್ನೂ ನಿಭಾಯಿಸಲು ಒಬ್ಬ ಕಾರ್ಯದರ್ಶಿಯನ್ನು ನಿಯೋಜಿಸಲಾಗಿದೆ. ಕಾಡಿಗೆ ಹಾನಿ ಮಾಡದಂತೆ ಪ್ರತಿ ಕ್ಷಣವೂ ಗ್ರಾಮಸ್ಥರೇ ಎಚ್ಚರ ವಹಿಸುತ್ತಿದ್ದೇವೆ’ ಎಂದೂ ವಿವರಿಸಿದರು.

ಶಿವಮೊಗ್ಗ ಜಿಲ್ಲೆಯ ತೋರಣಗೊಂಡನಕೊಪ್ಪ ಗ್ರಾಮಸ್ಥರು ತಾವೇ ಮುಂದಾಗಿ ಅರಣ್ಯಾಧಿಕಾರಿಗಳ ನೆರವಿನಿಂದ ಅರಣ್ಯ ಗಡಿ ಗುರುತಿಸಿ ಕಂದಕ ತೋಡಿಸಿದ ಸಂದರ್ಭ.

‘ಕಾಡಿನ ಕುರಿತು ಭಾವನಾತ್ಮಕ ನಂಟು ಇರುವ ಕಾರಣದಿಂದ ಅದರ ರಕ್ಷಣೆ, ಜನರಿಂದ ನಡೆಯುತ್ತಿದೆ. ನಮ್ಮಪ್ಪ, ನಮ್ಮಜ್ಜ ಕಾಡು ಉಳಿಸಲು ಪ್ರೇರೇಪಿಸಿದ್ದರು. ಅದನ್ನು ನಾವೂ ನಮ್ಮ ಮಕ್ಕಳಿಗೆ ಕಲಿಸಿದ್ದೇವೆ. ರಜೆಯ ದಿನಗಳಲ್ಲಿ ಮಕ್ಕಳು ಕಾಡಿಗೆ ಗಸ್ತು ತಿರುಗಲು ಹಿರಿಯರೊಂದಿಗೆ ಹೋಗುತ್ತಾರೆ. ಶಾಲೆ, ಕಾಲೇಜಿಗೆ ತೆರಳುವ ವೇಳೆ ರಸ್ತೆಯಲ್ಲಿ ಯಾರಾದರೂ ಕಾಡಿನೊಳಗೆ ಸಾಗಿದರೆ ಗ್ರಾಮಸ್ಥರಿಗೆ ಮಾಹಿತಿ ನೀಡುತ್ತಾರೆ. ಪಟ್ಟಣಕ್ಕೆ ಸಮೀಪದಲ್ಲಿರುವ ಕಾರಣಕ್ಕೆ ಕಸ ಎಸೆದು ಹೋಗುವವರನ್ನು ಊರಿನ ಮಕ್ಕಳೇ ತಡೆದು ಓಡಿಸಿದ ಘಟನೆಯೂ ನಡೆದಿವೆ’ ಎಂದು ಗ್ರಾಮ ಅರಣ್ಯ ಪಂಚಾಯಿತಿಯ ಸದಸ್ಯ ಅನಿಲ ಮಡಿವಾಳ ಹೇಳಿದರು.

ಕೇವಲ ನೈಸರ್ಗಿಕವಾಗಿ ಬೆಳೆದು ನಿಂತ ಅರಣ್ಯವನ್ನು ರಕ್ಷಿಸುವುದಕ್ಕೆ ಮಾತ್ರ ಅವರ ಕೆಲಸ ಸೀಮಿತವಾಗಿಲ್ಲ. ವರ್ಷಕ್ಕೊಮ್ಮೆ ‘ಹಂತಿ ಧರೆ’ (ಶ್ರಮದಾನ) ನಡೆಸಿ, ಅರಣ್ಯದ ಖಾಲಿ ಜಾಗದಲ್ಲಿ ವಿವಿಧ ಬಗೆಯ ಸಸಿಗಳನ್ನು ನೆಡುವ ರೂಢಿ ಇದೆ. ಈಚಿನ ವರ್ಷದಲ್ಲಿ ಹಣ್ಣು ಹಂಪಲುಗಳ ಗಿಡಗಳನ್ನು ಬೆಳೆಸಲು ಆದ್ಯತೆ ನೀಡುತ್ತಿದ್ದಾರೆ. ಅದರ ನಡುವೆ ನೈಸರ್ಗಿಕ ಅರಣ್ಯದಲ್ಲಿರುವ ತಳಿಗಳ ಸಸಿಗಳನ್ನು, ಔಷಧೀಯ ಸಸಿಗಳನ್ನೂ ನೆಟ್ಟು ಪೋಷಿಸುತ್ತಿದ್ದಾರೆ.

ಶಿರಸಿ, ಸಿದ್ದಾಪುರ ತಾಲ್ಲೂಕಿನಲ್ಲಿ ಗ್ರಾಮದ ಬಳಕೆಗೆ ಬಿಟ್ಟಿರುವ ಸಾಮೂಹಿಕ ಬೆಟ್ಟ ಸಂರಕ್ಷಣೆ ಕಾರ್ಯ ಮಾದರಿಯಾಗಿದೆ. ಆಯಾ ಗ್ರಾಮದ ರೈತರೇ ಬೆಟ್ಟದಲ್ಲಿ ಸಸಿಗಳ ನಾಟಿ, ಕಾಲುವೆ ನಿರ್ಮಾಣ, ತರಗೆಲೆ ಸಂಗ್ರಹಿಸಿ ಸ್ವಚ್ಛತೆ ಕಾಯ್ದುಕೊಳ್ಳುವ ಕೆಲಸ ಅಚ್ಚುಕಟ್ಟಾಗಿ ಮಾಡುತ್ತಿದ್ದಾರೆ.

ಶಿರಸಿ ತಾಲ್ಲೂಕಿನ ಭೈರುಂಬೆ ಹಾಗೂ ಸದಾಶಿವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವ್ಯಾಪಿಸಿರುವ ಕೈಲಾಸಗುಡ್ಡ ಅರಣ್ಯ ಶ್ರೇಣಿಯನ್ನು ಸುತ್ತಲಿನ ಗ್ರಾಮಸ್ಥರು ಚೆನ್ನಾಗಿ ಕಾಪಾಡಿಕೊಂಡು ಬರುತ್ತಿದ್ದಾರೆ. ಸುಮಾರು 200 ಹೆಕ್ಟೇರ್‌ಗೂ ಅಧಿಕ ವಿಸ್ತೀರ್ಣದ ಸಮೃದ್ಧ ಕಾಡು ಇಲ್ಲಿದೆ. ಇಲ್ಲಿ ಸ್ವಲ್ಪವೂ ಅತಿಕ್ರಮಣ, ಮರ ಕಡಿತ ಇತ್ಯಾದಿ, ಕಾಡಿಗೆ ಬೆಂಕಿ ಇತ್ಯಾದಿ ಸಮಸ್ಯೆ ಇಲ್ಲ. ಇದಕ್ಕೆ ಕಾರಣ ಸುತ್ತಲಿನ ಗ್ರಾಮಸ್ಥರು. ಸುತ್ತಲಿನ ಊರುಗಳಾದ ತಾರಗೋಡು, ಕೆರೆಯೊಡಲು, ನಿಡಗೋಡು, ಕಾಳಿಸರ, ಅಶೀಶರ, ಭೈರುಂಬೆ, ಗಡಿಗೆಹೊಳೆ, ಅಗಸಾಲ, ಬೊಮ್ಮನಳ್ಳಿ ಗ್ರಾಮದ ಜನರು ಒಟ್ಟಾಗಿ ಇದನ್ನು ರಕ್ಷಿಸುತ್ತಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಮಲೆನಾಡು, ಅರೆಮಲೆನಾಡು ಭಾಗದಲ್ಲಿ ಕಾಡು ಕಣ್ಮರೆಯಾಗಿ ಅಡಿಕೆ ತೋಟಗಳು ರೂಪುಗೊಳ್ಳುತ್ತಿರುವ ಈ ಹೊತ್ತಿನಲ್ಲಿ ಗ್ರಾಮೀಣರು ಹಾಗೂ ಅರಣ್ಯದಂಚಿನ ನಿವಾಸಿಗಳು ಕಾಡು ಉಳಿಸಿಕೊಳ್ಳುವ ಪ್ರಯತ್ನದ ಬೆಳ್ಳಿ ಗೆರೆಗಳು ಕಾಣಸಿಗುತ್ತವೆ.

ಚಂದ್ರಗುತ್ತಿ ಹೋಬಳಿಯ ತೋರಣಗೊಂಡನಕೊಪ್ಪದಲ್ಲಿ 150 ಎಕರೆಯಷ್ಟು ಅರಣ್ಯ ಪ್ರದೇಶದ ಸುತ್ತಲೂ ಗ್ರಾಮಸ್ಥರೇ ಆಗಳ (ಕಂದಕ) ಹೊಡೆದು ರಕ್ಷಣೆಗೆ ಮುಂದಾಗಿದ್ದಾರೆ. ಹೊಳೆ ಮರೂರಿನಲ್ಲಿ 380 ಎಕರೆ ಮತ್ತು ಹರೂರಿನಲ್ಲಿ 60 ಎಕರೆ ಅರಣ್ಯ ಗ್ರಾಮಸ್ಥರ ಪ್ರಯತ್ನದಿಂದ ಉಳಿದಿದೆ. ಅವರಿಗೆ ಸ್ಥಳೀಯವಾಗಿ ಪರಿಸರ ಜಾಗೃತಿ ಟ್ರಸ್ಟ್‌ನವರು ಬೆನ್ನೆಲುಬಾಗಿದ್ದಾರೆ.

ಸಾಗರ ತಾಲ್ಲೂಕಿನ ಯಲಕುಂದಲಿಯಲ್ಲಿ ಬೀರದೇವರ ಬನದ ರೂಪದಲ್ಲಿ 35 ಎಕರೆಯನ್ನು ಕಾರೇ ಹೊಂಡ ಅರಣ್ಯದ ಹೆಸರಿನಲ್ಲಿ ಉಳಿಸಿಕೊಂಡಿದ್ದಾರೆ. ದೇವರು ಸ್ವತ್ತು ಎಂಬ ಭಾವದಿಂದ ಅಲ್ಲಿಂದ ಒಂದು ಕಡ್ಡಿಯನ್ನು ಯಾರೂ ಹೊರಗೆ ಒಯ್ಯುವುದಿಲ್ಲ. ಹೀಗಾಗಿ ಆ ಜಾಗದಲ್ಲಿ ಅರಣ್ಯ ದಟ್ಟವಾಗಿದೆ.

ಉಳಿವಿ ಹೋಬಳಿಯ ಕರ್ಜಿಕೊಪ್ಪ, ಈಡೂರು ಮತ್ತು ಕುಂಟಗಳಲಿಯಲ್ಲಿ ಗ್ರಾಮ ಅರಣ್ಯ ಸಮಿತಿಯ ಒತ್ತಾಸೆಯಿಂದ ಕಾಡು ಉಳಿದಿದೆ. ಕೆರೆ, ಕುಂಟೆಗಳಲ್ಲಿ ಪ್ರಾಣಿಗಳು ಇಳಿದು ನೀರು ಕುಡಿಯುವ ವ್ಯವಸ್ಥೆ ಸ್ಥಳೀಯರು ಮಾಡಿದ್ದಾರೆ. ಅಲ್ಲಿಯೇ ಯಕ್ಷಿಯಲ್ಲಿ ಹುಲಿಯಪ್ಪ ದೇವರ ಬನದ ಹೆಸರಿನಲ್ಲಿ ಅಲ್ಲಿನ ಕೃಷಿಕರು ಅರಣ್ಯ ಉಳಿಸಿಕೊಂಡಿದ್ದಾರೆ. ವರ್ಷಕ್ಕೊಮ್ಮೆ ಹುಲಿಯಪ್ಪನ ಆರಾಧನೆ ಕೂಡ ಮಾಡುತ್ತಾರೆ. ಅಲ್ಲಿಯೇ ರಸ್ತೆಗೆ ಅಂಟಿಕೊಂಡಂತೆ ಮಾಸ್ತಿಯ ಆರಾಧನೆ ನಡೆಯುತ್ತದೆ. ಉಳವಿ ಹೋಬಳಿ ಹುನವಳ್ಳಿಯಲ್ಲಿ ಹುಲಿಯಪ್ಪನ ಕಣಿವೆ 600 ಎಕರೆಗೂ ಹೆಚ್ಚು ವಿಸ್ತಾರ ಹೊಂದಿದೆ. ಸಾಗರ ತಾಲ್ಲೂಕಿನ ಬರೂರು ಗುಡ್ಡ ಶ್ರೇಣಿಯಲ್ಲಿ ಸ್ಥಳೀಯರ ಪ್ರಯತ್ನದಿಂದ ನಿತ್ಯಹರಿದ್ವರ್ಣ ಕಾಡು ಉಳಿದುಕೊಂಡಿದೆ. ಹಳೇ ಸೊರಬ ದೇವರ ಕಾಡು ಪಾರಂಪರಿಕ ಅರಣ್ಯ ಎಂದು ಗುರುತಿಸುವಲ್ಲೂ ಸ್ಥಳೀಯರ ಕಾಳಜಿ ಕಾಣಸಿಗುತ್ತದೆ.

ಕಾಡು ಬೆಳೆಸಬಹುದು, ಕಡಿಯುವಂತಿಲ್ಲ, ಮರಗಳ್ಳತನಕ್ಕೆ ಅವಕಾಶವೇ ಇಲ್ಲ, ಸೌದೆಗೂ ಅರಣ್ಯಕ್ಕೆ ಹೋಗುವಂತಿಲ್ಲ. ಇದು ಚಿಕ್ಕಮಗಳೂರು ಜಿಲ್ಲೆಯ ವಿವಿಧೆಡೆಗಳಲ್ಲಿ ಗ್ರಾಮಸ್ಥರೇ ತಾವೇ ನಿಯಮ ಮಾಡಿಕೊಂಡು ಅರಣ್ಯ ರಕ್ಷಣೆ ಮಾಡುತ್ತಿರುವ ಪರಿ.

ಈ ರೀತಿ ಅರಣ್ಯ ರಕ್ಷಣೆಯನ್ನು ಗ್ರಾಮಸ್ಥರೇ ಮಾಡುತ್ತಿರುವ ಹಲವು ಉದಾಹರಣೆಗಳು ಕೊಪ್ಪ ತಾಲ್ಲೂಕಿನಲ್ಲಿವೆ. 25 ವರ್ಷಗಳ ಹಿಂದಿನಿಂದಲೂ ಅರಣ್ಯ ಸಮಿತಿಗಳು ಅಸ್ತಿತ್ವದಲ್ಲಿದ್ದು, ಇಂದಿಗೂ ಅರಣ್ಯವನ್ನು ಕಾಪಿಡುತ್ತಿವೆ. ಕೊಪ್ಪ ತಾಲ್ಲೂಕಿನಲ್ಲಿ ಸದ್ಯ 14 ಗ್ರಾಮ ಅರಣ್ಯ ಸಮಿತಿಗಳಿವೆ. ಅರಣ್ಯದ ಅಂಚಿನಲ್ಲಿರುವ ಸುತ್ತಮುತ್ತಲ ಎರಡು–ಮೂರು ಗ್ರಾಮಗಳು ಸೇರಿ ಅರಣ್ಯ ಇಲಾಖೆಯ ಸಹಯೋಗದಲ್ಲಿ ಒಂದೊಂದು ಗ್ರಾಮ ಅರಣ್ಯ ಸಮಿತಿ ರಚನೆ ಮಾಡಿಕೊಂಡಿವೆ.

ಸಮಿತಿಗೆ ಊರಿನ ಎಲ್ಲರೂ ಸದಸ್ಯರಾಗಿದ್ದು, ಸದಸ್ಯರೇ ಸೇರಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡುತ್ತಾರೆ. ವಲಯ ಅರಣ್ಯ ಅಧಿಕಾರಿ ಈ ಸಮಿತಿಗೆ ಕಾರ್ಯದರ್ಶಿ ಆಗಿರುತ್ತಾರೆ. ತಮ್ಮ ಸುತ್ತಮುತ್ತಲಿನ ವ್ಯಾಪ್ತಿಯ ಅರಣ್ಯವನ್ನು ಕಾಪಾಡುವುದು ಈ ಸಮಿತಿಯ ಮೊದಲ ಕೆಲಸ. ಸಸಿ ನೆಡುವುದು, 20 ವರ್ಷಗಳ ಬಳಿಕ ಕಡಿತಲೆಗೆ ಬರುವ ಮರಗಳನ್ನು ಕಟಾವು ಮಾಡುವುದು, ಮರಗಳನ್ನು ಸೌದೆಗಾಗಿ ಕಡಿಯದಂತೆ ನೋಡಿಕೊಳ್ಳುವುದು, ಸೋಲಾರ್ ಲೈಟ್‌ಗಳನ್ನು ವಿತರಿಸುವುದು, ಗ್ಯಾಸ್ ಸ್ಟವ್‌ಗಳನ್ನು ವಿತರಿಸುವ ಮೂಲಕ ಅರಣ್ಯ ರಕ್ಷಣೆ ಮಾಡುತ್ತಿದ್ದಾರೆ. ನರ್ಸರಿ ಮೂಲಕ ಸಸಿ ಬೆಳಸಿ ಮಾರಾಟ ಮಾಡುವುದು, ಬೆಳಸಿದ ಅರಣ್ಯ ಕಡಿತಲೆಗೆ ಬಂದಾಗ ಸಮಿತಿ ಮೂಲಕವೇ ಕಟಾವು ಮಾಡಿಸುವುದು, ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿ ಮಾರಾಟ ಮಾಡುವುದು, ಈ ಎಲ್ಲಾ ಕೆಲಸದಿಂದ ಬಂದ ಆದಾಯವನ್ನು ಗ್ರಾಮದ ಅಭಿವೃದ್ಧಿ ಕಾರ್ಯಗಳಿಗೇ ಉಪಯೋಗಿಸುವುದು ಸಮಿತಿಯ ಕೆಲಸ.

ಗ್ರಾಮದ ಎಲ್ಲರೂ ಸಮಿತಿ ಸದಸ್ಯರೇ ಆಗಿರುವುದರಿಂದ ಯಾರೊಬ್ಬರೂ ಕಾಡು ಕಡಿಯುವುದಿಲ್ಲ. ಮರಗಳ್ಳತನಕ್ಕೂ ಅವಕಾಶ ಕೊಡುವುದಿಲ್ಲ. ಎಲ್ಲರಿಗೂ ಈ ಕಾಡು ನಮ್ಮದು ಎಂಬ ಭಾವನೆ ಬೆಳೆದು ಹೋಗಿದೆ. ಈ ಕೆಲಸಗಳ ಮೂಲಕ ಸಮಿತಿಗೆ ಬಂದ ಎಲ್ಲಾ ಹಣವನ್ನೂ ಜಂಟಿ ಖಾತೆಗೆ ಜಮೆಯಾಗಲಿದ್ದು, ಉಪಅರಣ್ಯ ಸಂರಕ್ಷಣಾಧಿಕಾರಿಯ ಅನುಮತಿ ಪಡೆದು ಅಭಿವೃದ್ಧಿ ಕಾರ್ಯಗಳಿಗೆ ಬಳಕೆ ಮಾಡಲಾಗುತ್ತಿದೆ.

ಹಿರೇಕೂಡಿಗೆ ಮತ್ತು ಗೋಳಾಪುರ ಗ್ರಾಮಸ್ಥರು ಸೇರಿ ಕವಿಶೈಲ ಹೆಸರಿನಲ್ಲಿ ಗ್ರಾಮ ಅರಣ್ಯ ಸಮಿತಿ ರಚಿಸಿಕೊಂಡಿದ್ದಾರೆ. 25 ವರ್ಷಗಳಿಂದ ಈ ಸಮಿತಿ ಸಕ್ರಿಯವಾಗಿದೆ. ಸಮಿತಿಯಲ್ಲಿ 160 ಸದಸ್ಯರಿದ್ದು, ಯಾರೊಬ್ಬರು ಅರಣ್ಯ ನಾಶ ಮಾಡದಂತೆ ಈ ಸಮಿತಿ ನೋಡಿಕೊಳ್ಳುತ್ತಿದೆ. ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿದರೆ ಅದನ್ನೂ ಸಮಿತಿಗೇ ಒಪ್ಪಿಸಬೇಕು ಎಂಬ ನಿಯಮಗಳನ್ನು ಮಾಡಿಕೊಂಡಿದೆ.

‘20 ವರ್ಷದ ನಂತರ ಕಡಿತಲೆ ಆಗಬೇಕಿರುವ ಮರಗಳಿದ್ದರೆ ಸಮಿತಿ ಸಭೆ ನಡೆಸಿ, ನಿರ್ಧರಿಸುತ್ತದೆ. ಇದರಿಂದ ಬಂದ ಆದಾಯದಲ್ಲಿ ಗ್ರಾಮದ ಅಭಿವೃದ್ಧಿಗೆ ಬಳಸಲಾಗುತ್ತಿದೆ. ಸದ್ಯ ಸೌರಶಕ್ತಿ ವಿತರಿಸಲಾಗಿದೆ. ಅಡಿಕೆ ಬೇಯಿಸುವ ಸೌದೆಯನ್ನು ಹೆಚ್ಚು ಬಳಸಬೇಕಾಗುತ್ತದೆ. ಅದರ ಬದಲಿಗೆ ಅಡಿಕೆ ಒಲೆಗಳನ್ನು ತರಿಸಿ ಕೊಡಲಾಗಿದೆ. ಇದರಿಂದ ಸೌದೆ ಬಳಕೆಗೆ ಕಡಿವಾಣ ಬಿದ್ದಿದೆ’ ಎಂದು ಸಮಿತಿಯ ಅಧ್ಯಕ್ಷ ಎಚ್.ಕೆ.ವಿಶ್ವನಾಥ್ ಹೇಳಿದರು.

‘ಸಮಿತಿಯಲ್ಲಿ ಈಗ ₹25 ಲಕ್ಷಕ್ಕೂ ಹೆಚ್ಚು ಹಣ ಇದೆ. ತಿಂಗಳಿಗೊಮ್ಮೆ ಸಭೆ ನಡೆಯಲಿದ್ದು, ಅಲ್ಲಿ ಎಲ್ಲಾ ವಿಷಯವೂ ಚರ್ಚೆಯಾಗಲಿದೆ. ಸಮುದಾಯ ಭವನ ಅಭಿವೃದ್ಧಿ ಮಾಡಬೇಕೆಂಬ ಆಲೋಚನೆ ಇದೆ. ಹಣಕಾಸಿನ ವ್ಯವಹಾರವೆಲ್ಲವೂ ಅರಣ್ಯ ಇಲಾಖೆ ಅಧಿಕಾರಿಗಳ ಜಂಟಿ ಖಾತೆ ಮೂಲಕವೇ ನಡೆಯುತ್ತದೆ. ಸಹಕಾರ ಸಂಘಗಳ ಮಾದರಿಯಲ್ಲಿ ಲೆಕ್ಕಪರಿಶೋಧನೆಯೂ ನಡೆಯುತ್ತದೆ. ಸಮಿತಿಯಿಂದ ಅರಣ್ಯವೂ ಉಳಿದಿದೆ. ಅರಣ್ಯದಿಂದ ಗ್ರಾಮ ಅಭಿವೃದ್ಧಿಯನ್ನೂ ಕಂಡಿದೆ’ ಎಂದು ವಿವರಿಸಿದರು.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೆಲವು ಊರುಗಳಲ್ಲಿ ನಾಗರ ಬನಗಳು ಹಾಗೂ ದೇವರಕಾಡುಗಳು ಕಾಣ ಸಿಗುತ್ತವೆ. ಇವುಗಳನ್ನು ನೂರಾರು ವರ್ಷಗಳಿಂದ ಸ್ಥಳೀಯರೇ ಕಾಪಾಡಿಕೊಂಡು ಬರುತ್ತಿದ್ದಾರೆ. ಸಾಮಾನ್ಯವಾಗಿ ವರ್ಷದಲ್ಲಿ ಒಂದೆರಡು ದಿನ ಮಾತ್ರ ಧಾರ್ಮಿಕ ಆಚರಣೆಗಳಿಗಾಗಿ ನಾಗರ ಬನ ಅಥವ ದೇವರ ಕಾಡುಗಳಿಗೆ ಪ್ರವೇಶ. ಉಳಿದ ಅಷ್ಟೂ ದಿನಗಳು ಇವುಗಳಿಗೆ ಮಾನವ ಹಸ್ತಕ್ಷೇಪ ಇರುವುದಿಲ್ಲ. ಇಲ್ಲಿ ಜೀವ ಜಂತುಗಳು ಪಶುಪಕ್ಷಗಳು ಸ್ವಚ್ಛಂದವಾಗಿರುತ್ತವೆ. ಕೆಲವು ದೇವರ ಕಾಡುಗಳ ಬಳಿ ಅಪರೂಪದ ಪ್ರಾಣಿ ಹಾಗೂ ಪಕ್ಷಿಗಳ ಪ್ರಭೇದಗಳು ಇರುವುದು ಅಧ್ಯಯನಗಳಲ್ಲೂ ದಾಖಲಾಗಿದೆ.

ಅನವಶ್ಯಕ ಅಭಿವೃದ್ಧಿಗೆ ಕಡಿವಾಣ ಹಾಕಿದರೆ ಪಶ್ಚಿಮ ಘಟ್ಟ ಪ್ರದೇಶದಲ್ಲಿ ನಶಿಸುತ್ತಿರುವ ಕಾಡಿಗೆ ಕಡಿವಾಣ ಹಾಕಬಹುದು. ಇದರ ಜೊತೆಯಲ್ಲಿ ಅರಣ್ಯ ಇಲಾಖೆ ಮತ್ತು ಕಾಡಿನ ಮಡಿಲಿನಲ್ಲಿರುವ ಗ್ರಾಮಸ್ಥರು ಮನಸ್ಸು ಮಾಡಿದರೆ ಹಸಿರು ಉಳಿಸುವುದು ಕಷ್ಟವೇನಲ್ಲ.

ಪೂರಕ ಮಾಹಿತಿ: ವೆಂಕಟೇಶ್ ಜಿ.ಎಚ್., ವಿಜಯಕುಮಾರ್ ಎಸ್.ಕೆ.

ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ.

ಕಾನು ಸಂರಕ್ಷಣೆಗೆ ಬಾರದ ಅನುದಾನ

ಶಿವಮೊಗ್ಗ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಯ ಬನವಾಸಿ ಹೋಬಳಿ ವ್ಯಾಪ್ತಿಯಲ್ಲಿರುವ ‘ಕಾನು’ (ಕಂದಾಯ ಇಲಾಖೆ ಜಾಗದ ವ್ಯಾಪ್ತಿಯಲ್ಲಿರುವ ಅರಣ್ಯ) ಸಂರಕ್ಷಣೆಗೆ ಈ ಹಿಂದೆ ನೀಡಲಾಗುತ್ತಿದ್ದ ಅನುದಾನವನ್ನು ರಾಜ್ಯ ಸರ್ಕಾರ ಈಚಿನ ವರ್ಷದಲ್ಲಿ ಬಿಡುಗಡೆ ಮಾಡಿಲ್ಲ ಎಂಬ ಆರೋಪಗಳಿವೆ.

2010 ರಿಂದ 2013ರ ಅವಧಿಯಲ್ಲಿ ಪಶ್ಚಿಮ ಘಟ್ಟ ಕಾರ್ಯಪಡೆಯು ಕಾನು ಸಂರಕ್ಷಣೆ ಮತ್ತು ಅಭಿವೃದ್ಧಿ ಯೋಜನೆ ಜಾರಿಗೆ ತಂದಿತ್ತು. ‘ನಾನು ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಕಾನು ಸಂರಕ್ಷಣೆ ಯೋಜನೆ ಜಾರಿಗೆ ತಂದು, ಅನುದಾನವನ್ನೂ ಒದಗಿಸಲಾಗಿತ್ತು. ಐದು ವರ್ಷಗಳಿಂದ ಈ ಯೋಜನೆಗೆ ಅನುದಾನವನ್ನು ಸರ್ಕಾರ ಒದಗಿಸಿಲ್ಲ ಎಂಬ ಮಾಹಿತಿ ಇದೆ. ಪರಿಸರ ಸಂರಕ್ಷಣೆ ನಿಟ್ಟಿನಲ್ಲಿ ಕಾನುಗಳ ಸಂರಕ್ಷಣೆ ಅತಿ ಮಹತ್ವದ್ದಾಗಿದೆ. ಹೀಗಾಗಿ ಅನುದಾನ ಬಿಡುಗಡೆಗೆ ವಿಳಂಬ ಮಾಡಬಾರದು’ ಎಂದು ಪಶ್ಚಿಮ ಘಟ್ಟ ಕಾರ್ಯಪಡೆಯ ಮಾಜಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಆಗ್ರಹಿಸಿದರು.

ಹಳಕಾರ ಗ್ರಾಮ ಅರಣ್ಯ ಪಂಚಾಯಿತಿಯ ಗಡಿ ಅಂತಿಮಗೊಳಿಸಲು ಸರ್ವೆ ನಡೆಸಿ, ಅರಣ್ಯ ಅಂಚಿಗೆ ಸಂರಕ್ಷಣೆ ಉದ್ದೇಶದಿಂದ ಕಾಂಪೌಂಡ್ ನಿರ್ಮಿಸಲು ಸರ್ಕಾರ ಅನುದಾನ ನೀಡಬೇಕು. ಹಳೆಯ ಕಾಲುವೆಯಿಂದ ಸದ್ಯ ಅರಣ್ಯ ಒತ್ತುವರಿಗೆ ಅವಕಾಶ ಆಗುತ್ತಿಲ್ಲ

ನಾಗರಾಜ ಭಟ್ಟ, ಅಧ್ಯಕ್ಷ, ಹಳಕಾರ ಗ್ರಾಮ ಅರಣ್ಯ ಪಂಚಾಯಿತಿ

ಗ್ರಾಮ ಅರಣ್ಯವನ್ನು ಹಗಲು, ರಾತ್ರಿ ಪಾಳಿ ಆಧಾರದಲ್ಲಿ ಕಾವಲು ಕಾಯುತ್ತೇವೆ. ಇದಕ್ಕಾಗಿ ಯಾವುದೇ ಹಣ ಪಡೆಯುವುದಿಲ್ಲ. ಮರಗಿಡಗಳ ಸಂರಕ್ಷಿಸುವುದು ಪೂರ್ವಜರಿಂದಲೂ ನಡೆದುಕೊಂಡು ಬಂದ ಜವಾಬ್ದಾರಿ

ಅನಂತ ಪಟಗಾರ, ಹಳಕಾರ ಗ್ರಾಮಸ್ಥ

ಮೂರು ದಶಕಗಳ ಹಿಂದೆ ದೊಡ್ಡ ಮರಗಳನ್ನೊಳಗೊಂಡ ಕಾಡಿನಲ್ಲಿ ನೀರುನೇರಳೆ, ರಾಮಪತ್ರೆ ಮರಗಳು ವಿನಾಶದ ಅಂಚಿನಲ್ಲಿದ್ದವು. ಆಗ ಗ್ರಾಮಸ್ಥರು ಸೇರಿ ಸಂರಕ್ಷಣೆ ಮಾಡಿದ ಫಲವಾಗಿ ಸಮೃದ್ಧ ಅರಣ್ಯ ಇಂದಿಗೂ ಉಳಿದುಕೊಂಡಿದೆ. ಗ್ರಾಮಕ್ಕೆ ವರ್ಷಾವಧಿ ಸಾಲುವಷ್ಟು ನೀರು ಕಾಡಿನ ತೊರೆಯಿಂದ ಸಿಗುತ್ತಿದೆ

ಆನೆಗೋಳಿ ಸುಬ್ಬ ರಾವ್, ಹುಳಕೋಡು ಗ್ರಾಮಸ್ಥ

ಮಂಚಿಕೇರಿ ವಲಯ ಅರಣ್ಯ ವ್ಯಾಪ್ತಿಯ ಭರಣಿ, ಹೆಮ್ಮಾಡಿ ವ್ಯಾಪ್ತಿಯಲ್ಲಿ ಕಾಡಿನಲ್ಲಿ ಸಿಸಿಟಿವಿ ಅಳವಡಿಸಿ ಮರಕಳವು ನಡೆಯದಂತೆ ಕಣ್ಗಾವಲಿಡಲಾಗಿದೆ. ತಂತ್ರಜ್ಞಾನ ಬಳಕೆ ಮಾಡಿ ಕಾಡು ಸಂರಕ್ಷಣೆಗೆ ಇದು ಮುನ್ನುಡಿಯಾಗಿದೆ

ಹರ್ಷ ಬಾನು, ಯಲ್ಲಾಪುರ ಡಿಸಿಎಫ್

ಗ್ರಾಮಸ್ಥರೇ ಸಂರಕ್ಷಿಸಿದ ‘ನೀರುನೇರಳೆ ಕಾಡು’

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಶರಾವತಿ ನದಿಕಣಿವೆಯ ಲಿಂಗನಮಕ್ಕಿ ಜಲಾಶಯದ ಹಿನ್ನೀರಿನ ಅರಣ್ಯ ಪ್ರದೇಶದ ಹುಳಕೋಡಿನಲ್ಲಿ ಗ್ರಾಮಸ್ಥರೇ ಮೂರು ದಶಕಗಳಿಂದ ವಿನಾಶದ ಅಂಚಿನಲ್ಲಿರುವ ‘ನೀರುನೇರಳೆ’ ಮರದ ಪ್ರಭೇದಗಳಿರುವ ಕಾಡಿನ ಸಂರಕ್ಷಣೆ ಮಾಡುತ್ತಿದ್ದಾರೆ.

ಎಡಜಿಗಳೆಮನೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹುಳಕೋಡು ಗ್ರಾಮದ ರಾಮೇಶ್ವರ ದೇವಸ್ಥಾನದ ಹಿಂಬದಿಯ 180 ಎಕರೆಯಷ್ಟು ವಿಶಾಲವಾದ ಕಾನು ಅರಣ್ಯದಲ್ಲಿ ವಿರಳವೂ ಆಗಿರುವ ‘ರಾಮಪತ್ರೆ ಜಡ್ಡಿ’ ಜೌಗುಗಳಿವೆ. ದಕ್ಷಿಣ ಭಾರತದಲ್ಲೇ ಕೆಲವೇ ಉಳಿದಿರುವ ನೈಸರ್ಗಿಕ ನೀರುನೇರಳೆ ಮರಗಳಿರುವ ತಾಣವನ್ನು ಗ್ರಾಮಸ್ಥರು ನಾಶವಾಗದಂತೆ ಕಾಪಿಟ್ಟುಕೊಂಡು ಬಂದಿದ್ದಾರೆ. 50 ಮೀಟರಿಗಿಂತ ಎತ್ತರದವರೆಗೆ ಬೆಳೆದ ಬೃಹದಾಕಾರದ ಮರಗಳೂ ಇಲ್ಲಿವೆ.

‘ಗ್ರಾಮ ಅರಣ್ಯ ಸಮಿತಿಗಳು ರಚನೆಯಾಗುವ ಮುಂಚಿನ ದಿನಗಳಿಂದಲೂ ಗ್ರಾಮಸ್ಥರೇ ಸೇರಿ ಅರಣ್ಯ ರಕ್ಷಣೆಯ ಕಾರ್ಯದಲ್ಲಿ ಸಕ್ರಿಯರಾಗಿದ್ದೆವು. ಗ್ರಾಮದ ರಾಮೇಶ್ವರ ದೇವಸ್ಥಾನದ ಹಿಂಬದಿಯಲ್ಲಿದ್ದ ಅರಣ್ಯವನ್ನು ದೇವರ ಕಾಡು ಎಂದು ಪರಿಗಣಿಸುತ್ತಲೇ, ಆ ನಂಬಿಕೆಯೊಂದಿಗೆ ಕಾಡಿನ ಗಿಡ, ಮರ ಕಡಿಯದಂತೆ ಸಂರಕ್ಷಿಸಲಾಗುತ್ತಿದೆ. ಪಶ್ಚಿಮ ಘಟ್ಟ ಕಾರ್ಯಪಡೆಯ ನೆರವಿನಿಂದ 2010ರಲ್ಲಿ ಕಾಡಿನಲ್ಲಿ ಒತ್ತುವರಿ, ನಾಶ ತಡೆಗೆ ಕಾಲುವೆ ನಿರ್ಮಿಸಲಾಯಿತು’ ಎಂದು ಅರಣ್ಯ ಸಂರಕ್ಷಣೆಯಲ್ಲಿ ಮುಖ್ಯಪಾತ್ರವಹಿಸಿರುವ ಆನೆಗೋಳಿ ಸುಬ್ಬರಾವ್ ತಿಳಿಸಿದರು.

ಮರಗಳವು ತಡೆಗೆ ಕಾಡಿನಲ್ಲಿ ಸಿಸಿಟಿವಿ

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ಅರಣ್ಯ ವಿಭಾಗದ ವ್ಯಾಪ್ತಿಯ ಮಂಚಿಕೇರಿ ವಲಯ ವ್ಯಾಪ್ತಿಯ ಕುಂದರಗಿ, ಉಮ್ಮಚಗೇರಿ, ಭರಣಿ ಮತ್ತು ಹೆಮ್ಮಾಡಿ ಅರಣ್ಯ ಪ್ರದೇಶದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಅವುಗಳ ವೆಚ್ಚವನ್ನು ಗ್ರಾಮ ಅರಣ್ಯ ಸಮಿತಿ ಭರಿಸಿದೆ.

ಈ ಪ್ರದೇಶದಲ್ಲಿ ಬೆಲೆಬಾಳುವ ಸಾಗವಾನಿ ಮರಗಳು ಹೆಚ್ಚಿನ ಪ್ರಮಾಣದಲ್ಲಿವೆ. ಕೆಲ ವರ್ಷಗಳ ಹಿಂದೆ ಮರ ಕಳ್ಳತನ ಪ್ರಕರಣ ಹೆಚ್ಚಿತ್ತು. ಅವುಗಳ ತಡೆಗೆ ಸಿಸಿಟಿವಿ ಅಳವಡಿಕೆ ಮಾಡಲಾಗಿದೆ.

‘ಮರಗಳ್ಳತನದ ಮೇಲೆ ನಿಗಾ ಇಡಲು ಗ್ರಾಮ ಅರಣ್ಯ ಸಮಿತಿಯ ಲಾಭಾಂಶದಲ್ಲಿ ಸಿಸಿಟಿವಿ ಖರೀದಿಸಿ ಒದಗಿಸಲಾಗಿದೆ’ ಎಂದು ಭರಣಿ ಗ್ರಾಮ ಅರಣ್ಯ ಸಮಿತಿ ಅಧ್ಯಕ್ಷ ವಿನಾಯಕ ಭಟ್ಟ ತಿಳಿಸಿದರು.

ಭರಣಿ ಗ್ರಾಮದಲ್ಲಿ ಅರಣ್ಯದ ಅಂಚಿನಲ್ಲಿ ಸಿಸಿಟಿವಿ ಅಳವಡಿಸಲಾಗಿದೆ

‘ಭರಣಿ, ಹೆಮ್ಮಾಡಿ ಗ್ರಾಮ ಅರಣ್ಯ ಸಮಿತಿಯ ನೆರವಿನಿಂದ ಕುಂದರಿ ಉಪ ವಲಯ ಅರಣ್ಯ ವ್ಯಾಪ್ತಿಯ 10 ಕಡೆಯಲ್ಲಿ ಸಿಸಿಟಿವಿ ಅಳವಡಿಕೆಯಾಗಿದೆ. ಸೌರಶಕ್ತಿಯಿಂದ ಅವು ನಿರ್ವಹಣೆ ಆಗುತ್ತವೆ. ಗ್ರಾಮದಲ್ಲಿ ಕೂಡು ರಸ್ತೆಗಳಿರುವ ಕಡೆ, ಅರಣ್ಯ ಪ್ರದೇಶದ ಆಯಕಟ್ಟಿನ ಸ್ಥಳದಲ್ಲಿ ಅಳವಡಿಕೆ ಮಾಡಿದ್ದು, ಕಾಡಿನ ಉತ್ಪನ್ನ ಒಯ್ಯದಂತೆ ನಿಗಾ ಇಡಲಾಗುತ್ತಿದೆ’ ಎಂದು ಕುಂದರಗಿ ಉಪ ವಲಯ ಅರಣ್ಯಾಧಿಕಾರಿ ಬಿ.ಎಂ.ಪಟಗಾರ ತಿಳಿಸಿದರು.

ಗುಂಡಣ್ಣ

25 ವರ್ಷಗಳ ಹಿಂದೆ

ಬುಧವಾರ, 9-2-2000

● ಕೃಷ್ಣಾ ಪ್ರಾಧಿಕಾರ; ರಾಜ್ಯಗಳ ಸಲಹೆ ನಂತರ ನಿರ್ಧಾರ

ನವದೆಹಲಿ, ಫೆ. 8– ಕೃಷ್ಣಾ ಜಲ ವಿವಾದ ಕುರಿತು ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ಸ್ಕೀಂ ‘ಬಿ’ ಜಾರಿಗಾಗಿ ಕೃಷ್ಣಾ ಕಣಿವೆ ಪ್ರಾಧಿಕಾರ ರಚನೆ ಮತ್ತು ಆಲಮಟ್ಟಿ ಅಣೆಕಟ್ಟು ಎತ್ತರವನ್ನು 519 ಮೀ.ವರೆಗೆ ಎತ್ತರಿಸಲು ಅನುಮತಿ ನೀಡುವ ವಿಷಯವಾಗಿ ಇಂದು 3 ರಾಜ್ಯಗಳ ಸಲಹೆ ಕೇಳುವ ಮೂಲಕ ವಿವಾದಕ್ಕೆ ಸದ್ಯದಲ್ಲಿಯೇ ತೆರೆ ಎಳೆಯುವ ಇಂಗಿತ ನೀಡಿತು.

ಕೃಷ್ಣಾ ಕಣಿವೆ ಪ್ರಾಧಿಕಾರವು ಅಸ್ತಿತ್ವಕ್ಕೆ ಬಂದರೆ ಸ್ಕೀಂ ‘ಬಿ’ಯನ್ನು ಹೇಗೆ ಜಾರಿಗೆ ತರಬಹುದು ಎನ್ನುವ ಬಗೆಗೆ ಪರಿಶೀಲಿಸಲಿದೆ.

50 ವರ್ಷಗಳ ಹಿಂದೆ

ಭಾನುವಾರ, 9-2-1975

● ಗಂಗೂಬಾಯಿ ಹಾನಗಲ್‌ಗೆ ‘ಅಖ್ತರ್’ ಪ್ರಶಸ್ತಿ

ಹುಬ್ಬಳ್ಳಿ, ಫೆ.8– ಹಿಂದೂಸ್ತಾನಿ ಸಂಗೀತ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಸಲುವಾಗಿ ಖ್ಯಾತ ಗಾಯಕಿ ಶ್ರೀಮತಿ ಗಂಗೂಬಾಯಿ ಹಾನಗಲ್ ಅವರಿಗೆ ರೂ–ಇ–ಗಜಲ್ ಬೇಗಂ ಅಖ್ತರ್ ಪ್ರಶಸ್ತಿ ಲಭಿಸಿದೆ.

‘ಗಜಲ್ ರಾಣಿ’ ದಿವಂಗತ ಬೇಗಂ ಅಖ್ತರ್ ಸ್ಮಾರಕ ಕಂಚು ಫಲಕ ಹಾಗೂ 10 ಸಹಸ್ರ ರೂ. ನಗದು ಪ್ರಶಸ್ತಿ ಶ್ರೀಮತಿ ಗಂಗೂಬಾಯಿ ಹಾನಗಲ್ ಅವರಿಗೆ ಸಂದಾಯವಾಗುತ್ತದೆ.

ಅತ್ಯುತ್ತಮವಾಗಿ ಗಜಲ್ ಹಾಡುವವರಿಗೆಂದು ಪ್ರತಿವರ್ಷ ಇನ್ನೊಂದು ಪ್ರಶಸ್ತಿ ನೀಡಲೂ ರೂ–ಇ–ಗಜಲ್ ಸಂಸ್ಥೆ ನಿರ್ಧರಿಸಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಫೆಬ್ರುವರಿ 9, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ದ್ವಾದಶಿ ಗಂ. 19-26 ನಕ್ಷತ್ರ: ಆರ್ದ್ರಾ ಗಂ. 17-53 ಯೋಗ: ವಿಷ್ಕಂಭ ಗಂ. 12-07 ಕರಣ: ಬವ ಗಂ. 07-49, ಮಕರ ಮಾಸದ 26 ನೇ ದಿನ, ಮಳೆನಕ್ಷತ್ರ: ಧನಿಷ್ಠಾ 2.

ರಾಹುಕಾಲ : ಸಾಯಂಕಾಲ 04-30 – 06-00

ಸೂರ್ಯೋದಯ : 06-59 ಸೂರ್ಯಾಸ್ತ : 06-31

ಮುಸ್ಲಿಂ ದಿನಾಂಕ : 10 ಶಬನ್ ದಿನ ವಿಶೇಷ : ಭೀಷ್ಮದ್ವಾದಶಿ

ಅದೃಷ್ಟ ಸಂಖ್ಯೆ : 2, 5

ಮೇಷ: ಸರಕು ಸಾಗಾಣೆದಾರರಿಗೆ ಆದಾಯದಲ್ಲಿ ಗಣನೀಯವಾಗಿ ಹೆಚ್ಚಳ ಕಂಡುಬಂದರೂ, ಕೆಲಸದ ಒತ್ತಡದಿಂದ ವೃತ್ತಿಯಲ್ಲಿ ನಿರಾಶೆಯಾಗುವುದು. ಈಶ್ವರನ ಆರಾಧನೆಯನ್ನು ಮಾಡಿ. ನಿಮಗೆ ಶುಭವಾಗುತ್ತದೆ.

ವೃಷಭ: ನಿಮ್ಮ ಜೀವನಕ್ಕೆ ತತ್ವ ಆದರ್ಶಗಳ ಜೊತೆಗೆ ಹಿರಿಯರ ಅನುಭವ ಸಲಹೆಗಳನ್ನು ಅಳವಡಿಸಿಕೊಳ್ಳುವಿರಿ. ಭಾವನಾತ್ಮಕ ಸಂಬಂಧಗಳಿಂದ ದೂರ ಉಳಿಯುವ ಸ್ಥಿತಿ ಬರಲಿದೆ. ಸಂಘ ಸಂಸ್ಥೆಯಲ್ಲಿ ಸ್ಥಾನಮಾನ ಲಭ್ಯವಾಗುವುದು.

ಮಿಥುನ: ಮಾತಿನ ಬುದ್ಧಿವಂತಿಕೆ, ಚಾತುರ್ಯದಿಂದ ಇತರರನ್ನು ಗೆಲ್ಲುವ ಸಾಮರ್ಥ್ಯ ನಿಮ್ಮಲ್ಲಿದೆ. ಆದರೆ ನಿಮ್ಮ ಮಾತುಗಳು ಬೇರೆಯವರ ದುಃಖಕ್ಕೆ ಕಾರಣವಾಗದಂತೆ ಗಮನಿಸಿ. ಮನೆಯಲ್ಲಿ ಶುಭ ಕಾರ್ಯ ಜರುಗುವುದು.

ಕರ್ಕಾಟಕ: ಸಮಾಜ ಸೇವೆಯನ್ನು ಹವ್ಯಾಸವನ್ನಾಗಿ ಬೆಳೆಸಿಕೊಂಡಿರುವ ನಿಮಗೆ ಈ ದಿನ ಅದರಿಂದ ಬಹಳಷ್ಟು ಪ್ರಚಾರದ ಜೊತೆಗೆ ರಾಜಕೀಯ ಸೇರಲು ಆಹ್ವಾನ ದೊರೆಯಲಿದೆ. ಆರೋಗ್ಯದ ಬಗ್ಗೆ ಅನಗತ್ಯ ಭೀತಿ ಬೇಡ.

ಸಿಂಹ: ಉದ್ಯೋಗಕ್ಕೆ ಸಂಬಂಧಿಸಿದಂತೆ ಹೊಸ ಜನರ ಸಂಪರ್ಕವು ಉತ್ತಮ ಧನಲಾಭವನ್ನು ತರಲಿದೆ. ವಿದ್ಯುತ್ ಉಪಕರಣ, ಯಂತ್ರೋಪಕರಣಗಳ ಮಾರಾಟದಿಂದ ಅಧಿಕ ಲಾಭ ಸಿಗುವುದು. ಖರ್ಚಿನ ಮೇಲೆ ಬಿಗಿ ಹಿಡಿತವಿರಲಿ.

ಕನ್ಯಾ: ಆಹಾರ ಪದಾರ್ಥದ ವ್ಯಾಪಾರಸ್ಥರಿಗೆ ಶ್ರಮಕ್ಕೆ ತಕ್ಕಷ್ಟು ಆದಾಯ ಲಭಿಸಲಿದೆ. ಲೆಕ್ಕ ಪತ್ರಗಳನ್ನು ಸರಿಯಾಗಿ ಪರಿಶೀಲಿಸಿ ಸಹಿ ಮಾಡುವುದು ಒಳಿತು. ದೇವಿಯ ಆರಾಧನೆಯಿಂದ ತುಸು ನೆಮ್ಮದಿ ದೊರೆಯಲಿದೆ.

ತುಲಾ: ಮನೆ ಜಾಗದ ಪಾಲುದಾರಿಕೆ ವಿಷಯದಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳಬೇಕಾಗುವ ಪರಿಸ್ಥಿತಿ ಬರುವುದು. ಸಣ್ಣ ವಿಚಾರಗಳೂ ದೊಡ್ಡ ರಾದ್ಧಾಂತವಾಗಿ ಪರಿಣಮಿಸಲಿದೆ. ಹಾಗಾಗಿ ಎಚ್ಚರದಿಂದ ಕಾರ್ಯ ನಿರ್ವಹಿಸಿ.

ವೃಶ್ಚಿಕ: ಬೆಂಕಿಯಿಂದ ಅನಾಹುತಗಳು ಸಂಭವಿಸುವ ಲಕ್ಷಣವಿದ್ದು, ಜಾಗೃತರಾಗಿರುವುದು ಒಳ್ಳೆಯದು. ಸಾಂಸಾರಿಕ ವಿಷಯದಲ್ಲಿ ಹಿರಿಯರ ಮಾತು ಮೀರದಿರುವುದು ಲೇಸು. ನಿರ್ಮಾಪಕರಿಗೆ ಹೊಸ ಹುರುಪು ಮೂಡಲಿದೆ.

ಧನು: ಉದ್ಯೋಗದಲ್ಲಿನ ಬದಲಾವಣೆಯನ್ನು ಬಯಸಿದ ನಿಮಗೆ ನಿಮ್ಮಿಚ್ಛೆಯಂತೆಯೇ ಹೆಚ್ಚಿನ ಆದಾಯ ದೊರೆಯುವ ಕೆಲಸ ಸಿಗಲಿದೆ. ಆದರೆ ಕಾರ್ಯದ ಸಮಯ, ಒತ್ತಡಗಳು ನಿಮ್ಮ ಸುಖ-ಶಾಂತಿಯನ್ನು ಕಡಿಮೆ ಮಾಡಬಹುದು.

ಮಕರ: ಸರ್ಕಾರಿ ಗುತ್ತಿಗೆ ಕೆಲಸದ ವಿಪುಲ ಅವಕಾಶಗಳು ಒದಗಿ ಬರಲಿದೆ. ಅದರಿಂದಾಗಿ ಆದಾಯದಲ್ಲಿ ಹೆಚ್ಚಳವಾಗುವುದು. ಜೀವನದಲ್ಲಿ ಹೊಸ ಅಧ್ಯಾಯ ಸೃಷ್ಟಿಯಾಗುತ್ತದೆ. ಇನ್ನೊಬ್ಬರನ್ನು ನಿಂದಿಸುವುದು ಸರಿಯಲ್ಲ.

ಕುಂಭ: ಸಂಬಂಧಿಕರಿಗಾಗಿ ಅಥವಾ ಆಪ್ತ ಸ್ನೇಹಿತನಿಗಾಗಿ ಸಮಯ, ಹಣವನ್ನು ಖರ್ಚು ಮಾಡುವ ಪರಿಸ್ಥಿತಿ ಈ ದಿನ ಬರುವುದು. ಬೆನ್ನು ನೋವು ಹೋಗಲಾಡಿಸಿಕೊಳ್ಳುವ ಸಲುವಾಗಿ ಚಿಕಿತ್ಸೆ ತೆಗೆದುಕೊಳ್ಳುವುದು ಅನಿವಾರ್ಯ.

ಮೀನ: ದಾಂಪತ್ಯ ಜೀವನದಲ್ಲಿ ತಾಳ್ಮೆ, ಸಮಾಧಾನದಿಂದ ಮುಂದುವರಿದು ಸಂಸಾರದಲ್ಲಿ ಉತ್ತಮ ಹೊಂದಾಣಿಕೆಯನ್ನು ಕಾಣುವಿರಿ. ನೂತನ ವಾಹನ ಖರೀದಿಯ ನಿಮ್ಮ ಯೋಚನೆಯನ್ನು ಅಗತ್ಯಕ್ಕೆ ಅನುಗುಣವಾಗಿ ತೀರ್ಮಾನಿಸಿ.

ಪದಬಂಧ 5948

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸ್ವಯಂಪೂರ್ಣವಾದ ಬಿಡಿ ಪದ್ಯ (3)
5.ಮಾಸ್ತಿ ವೆಂಕಟೇಶ ಐಯ್ಯಂಗಾರ್‌ರ ಕಾವ್ಯನಾಮ (4)
6.ತಿರುವು ಮುರುವಾಗಿರುವ ಗುಂಪು (2)
9.ದ. ರಾ. ಬೇಂದ್ರೆಯವರ ಕಾವ್ಯನಾಮ (8)
12.ಕುಮಾರವ್ಯಾಸ ಎನ್ನುವ ಕಾವ್ಯನಾಮವುಳ್ಳ ಕವಿ (8)
15.ಮೂಲಸ್ಥಾನವಿಲ್ಲಿ ತಿರುವುಮುರುವಾಗಿದೆ (2)
17.ವಿನಾಯಕ ಕೃಷ್ಣ ಗೋಕಾಕರವರ ಕಾವ್ಯನಾಮ (4)
20.ಕರ್ನಾಟಕ ರಾಜ್ಯಕ್ಕೆ ಮೊದಲಿನ ಹೆಸರಿದು (3)

ಮೇಲಿಂದ ಕೆಳಕ್ಕೆ

1.ನಂದಳಿಕೆ ಲಕ್ಷ್ಮಿನಾರಾಯಣರ ಕಾವ್ಯನಾಮ (3)
2.ಕವಿತೆ ಬರೆಯುವವನು (2)
3. ಉಚ್ಚಾರಣಾಂಗಗಳಿಂದ ಉತ್ಪಾದಿತವಾಗಿ ಭಾಷೆಯಲ್ಲಿ ಬಳಕೆಯಾಗುವ ಸದ್ದು (2)
4.ಕವಿ,ನಾಟಕಕಾರರಾಗಿದ್ದ ಸ್ವಾಮಿ ವೆಂಕಟಾದ್ರಿ ಐಯ್ಯರ್ ಅವರು ಈ ಹೆಸರಿನಿಂದ ಪ್ರಸಿದ್ಧಿಯಾಗಿದ್ದಾರೆ (2)
5.ಧನಿಕ ಇಲ್ಲಿದ್ದಾನೆ (3)
7.ದೇಹದ ಭಾಗವಿಲ್ಲಿ ಉಲ್ಟಾ ಕಾಣುತ್ತಿದೆ (2)
8.ಹಾವಿನ ವಾಸಸ್ಥಾನ (2)
10.ಅರಣ್ಯವನ್ನು ಹೀಗೂ ಹೇಳುತ್ತಾರೆ (3)
11.ನರನಿರುವ ಷಹರು (3)
12.ಗಡಿಬಿಡಿಯಿಂದ ಪ್ರವೇಶಿಸಿರುವ ಎಲ್ಲೆ (2)
13.ನಾವೆಯನ್ನು ನಡೆಸುವವನು (3)
14.ತಪ್ಪಲೆಯಲ್ಲಿನ ಬಳಿಯುವ ವಸ್ತು ಉಲ್ಟಾಕಾಣುತ್ತಿದೆ (2)
16.ಇವರ ಜನುಮದಿನವನ್ನು ಮಕ್ಕಳ ದಿನಾಚರಣೆಯನ್ನಾಗಿ ಆಚರಿಸಲಾಗುತ್ತದೆ (3)
17.ರೀತಿಗೊಂದು ಪರ್ಯಾಯ ಪದ (2)
18.ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡಿರುವವನು (2)
19.ದೂರವನ್ನು ಅಳೆಯುವ ಮಾನ ಇಲ್ಲಿ ಉಲ್ಟಾ ಕಾಣುತ್ತಿದೆ (2)



5947ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕೌತುಕ 3.ನೆರಕೆ 5.ಗಡಾರಿ 6.ಅಳು 7.ಕರಗ 9.ವಿನೋದ 10.ಮಾತುಲ 12.ನಗರ 15.ದಿಟ 17.ಹಮಾಲ 19.ಬಯಲು 20.ನಜರು

ಮೇಲಿಂದ ಕೆಳಕ್ಕೆ: 1.ಕೌಲು 2.ಕರುಳು 3.ನೆರಿಗೆ 4.ಕೆರ 5.ಗಟಾರ 6.ಅಡವಿ 7.ಕದನ 8.ಗಮಾರ 11.ಲಲಾಟ 13.ಗದ್ದಲ 14.ಮಹಲು 5.ದಿವಾನ1 6.ಬಿಂಬ 18.ನಾರು

ಸುಡೊಕು 6333

4			9		1		3	
	9			8			7	4
8			4		5	9		
7								8
	8		1	6	2		9	
		9	7			2		
		8		1				
9		4	8		7		2	5
	1			9			8	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ

6332 ಸುಡೊಕು

6	2	4	9	1	7	3	5	8
5	1	3	8	4	6	9	2	7
9	7	8	2	5	3	4	1	6
7	4	9	5	3	8	1	6	2
1	8	6	4	2	9	7	3	5
2	3	5	6	7	1	8	4	9
4	9	2	3	8	5	6	7	1
3	6	1	7	9	2	5	8	4
8	5	7	1	6	4	2	9	3

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದೆಹಲಿ ವಿಧಾನಸಭಾ ಚುನಾವಣೆ ಫಲಿತಾಂಶ • ಮುಖ್ಯಮಂತ್ರಿ ಹುದ್ದೆಯ ರೇಸ್‌ನಲ್ಲಿ ಹಲವರ ಹೆಸರು

‘ಪಂದ್ಯಶ್ರೇಷ್ಠ’ ಪರ್ವೇಶ್‌ಗೆ ಸಿ.ಎಂ ಗಾದಿ?

ಪ್ರಜಾವಾಣಿ ವಾರ್ತೆ

ನವದೆಹಲಿ: 2024ರ ಲೋಕಸಭಾ ಚುನಾವಣೆಯಲ್ಲಿ ಪರ್ವೇಶ್ ವರ್ಮಾ ಅವರನ್ನು ತನ್ನ ‘ಆಟಗಾರ’ರ ಪಟ್ಟಿಯಿಂದಲೇ ಬಿಜೆಪಿ ಕೈಬಿಟ್ಟಿತ್ತು. ಎಂಟೇ ತಿಂಗಳಲ್ಲಿ ಭರ್ಜರಿ ಪುನರಾಗಮನ ಮಾಡಿರುವ ಅವರು ದೆಹಲಿ ರಾಜಕೀಯದಲ್ಲಿ ಅತಿ ದೊಡ್ಡ ವಿಕೆಟ್ ಪಡೆದಿದ್ದಾರೆ. ಅವರಿಗೆ ದೆಹಲಿ ಬಿಜೆಪಿ ಸರ್ಕಾರದ ನಾಯಕತ್ವ ಸಿಗುತ್ತದೆಯೇ? ಮತ್ತೊಮ್ಮೆ ನವದೆಹಲಿಯ ಶಾಸಕರಿಗೆ ಮುಖ್ಯಮಂತ್ರಿ ಗಾದಿ ದೊರಕಲಿದೆಯೇ?

ಹೀಗೊಂದು ಪ್ರಶ್ನೆ ದೆಹಲಿ ರಾಜಕೀಯ ಪಡಸಾಲೆಯಲ್ಲಿ ಆರಂಭವಾಗಿದೆ. 1998ರಿಂದ 2013ರವರೆಗೆ ಮೂರು ಅವಧಿಗೆ ಶೀಲಾ ದೀಕ್ಷಿತ್ ನವದೆಹಲಿ ಕ್ಷೇತ್ರದ ಶಾಸಕರಾಗಿದ್ದರು. 2013ರಲ್ಲಿ ದೀಕ್ಷಿತ್ ಅವರನ್ನು ಅರವಿಂದ ಕೇಜ್ರಿವಾಲ್ ಸೋಲಿಸಿದ್ದರು. ಅವರು ಹ್ಯಾಟ್ರಿಕ್ ಗೆಲುವು ಸಾಧಿಸಿದ್ದರು. ಈ ಸಲ ಕೇಜ್ರಿವಾಲ್ ಅವರನ್ನು ವರ್ಮಾ ಮಣಿಸಿ ದೆಹಲಿ ಮುಖ್ಯಮಂತ್ರಿಯ ಹುದ್ದೆಯ ಪ್ರಮುಖ ಸ್ಪರ್ಧಿಯಾಗಿ ಹೊರಹೊಮ್ಮಿದ್ದಾರೆ.

ಮಾಜಿ ಮುಖ್ಯಮಂತ್ರಿ ಸಾಹಿಬ್ ಸಿಂಗ್ ವರ್ಮಾ ಪುತ್ರ ಪರ್ವೇಶ್ ಅವರು 2014ರಿಂದ 2024ರವರೆಗೆ ಪಶ್ಚಿಮ ದೆಹಲಿಯ ಸಂಸದರಾಗಿದ್ದರು. ವಿವಾದಾತ್ಮಕ ಹೇಳಿಕೆಗಳಿಂದಲೇ ಸುದ್ದಿಯಲ್ಲಿದ್ದವರು. 2024ರ ಲೋಕಸಭಾ ಚುನಾವಣೆಯಲ್ಲಿ ಅವರಿಗೆ ಪಕ್ಷ ಟಿಕೆಟ್ ನಿರಾಕರಿಸಿತ್ತು.

ನವದೆಹಲಿಯ ಬಿಜೆಪಿ ಕಚೇರಿ ಎದುರು ಪಕ್ಷದ ಕಾರ್ಯಕರ್ತರು ಗೆಲುವಿನ ಸಂಭ್ರಮ ಆಚರಿಸಿದರು ಪಿಟಿಐ ಚಿತ್ರ

ಅವರ ರಾಜಕೀಯ ಜೀವನ ಮುಗಿದು ಹೋಯಿತು ಎಂದು ಭಾವಿಸಿದವರು ಹೆಚ್ಚು. ಇದೀಗ, ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರನ್ನು ಸೋಲಿಸುವ ಮೂಲಕ ‘ಅಚ್ಚರಿ’ಯ ಪುನರಾಗಮನ ಮಾಡಿದ್ದಾರೆ.

• ಮುಖ್ಯಮಂತ್ರಿ ಸ್ಥಾನದ ಸಂಭಾವ್ಯರು: ಪರ್ವೇಶ್ ವರ್ಮಾ, ವಿಜೇಂದರ್ ಗುಪ್ತ, ವೀರೇಂದ್ರ ಸಚ್‌ದೇವ್, ಸತೀಶ್ ಉಪಾಧ್ಯಾಯ, ಅಶೀಶ್ ಸೂದ್.



ಪರ್ವೇಶ್ ವರ್ಮಾ

ಲೋಕಸಭಾ ಚುನಾವಣೆಗೆ ಸ್ಪರ್ಧಿಸುವ ಮುನ್ನ ಅವರು ಮೆಹ್ರೋಲಿ ಕ್ಷೇತ್ರದ ಶಾಸಕರಾಗಿದ್ದರು. 2019ರ ಲೋಕಸಭಾ ಚುನಾವಣೆಯಲ್ಲಿ ಅವರು 5.7 ಲಕ್ಷ ಮತಗಳಿಂದ ಗೆದ್ದಿದ್ದರು. ಇದು ದೆಹಲಿಯ ಚುನಾವಣಾ ಇತಿಹಾಸದಲ್ಲಿಯೇ ಗರಿಷ್ಠ ಅಂತರದ ಗೆಲುವು. ಲೋಕಸಭಾ ಚುನಾವಣೆಯಲ್ಲಿ ಅವಕಾಶ ವಂಚಿತರಾದ ಸಂದರ್ಭದಲ್ಲಿ ಅವರು ಬಂಡಾಯ ಏಳಲಿಲ್ಲ. ಪಕ್ಷದ ವರಿಷ್ಠರ ತೀರ್ಮಾನವನ್ನು ಒಪ್ಪಿಕೊಂಡರು. 2024ರ ಮಾರ್ಚ್‌ನಿಂದಲೇ ವಿಧಾನಸಭಾ ಚುನಾವಣೆಯಲ್ಲಿ ಕಣಕ್ಕಿಳಿಯಲು ಸಿದ್ಧತೆ ನಡೆಸಿದರು. ಎಎಪಿಯ ಮಹಾ ದಂಡನಾಯಕ ಕೇಜ್ರಿವಾಲ್ ಅವರನ್ನು ಮಣಿಸುವ ಮೂಲಕ ದೈತ್ಯ ಸಂಹಾರಿಯಾಗಿ ಹೊರಹೊಮ್ಮಿದ್ದಾರೆ. ಒಂದರ್ಥದಲ್ಲಿ ದೆಹಲಿ ಚುನಾವಣಾ ಅಖಾಡದಲ್ಲಿ ಅವರು ಈಗ ‘ಪಂದ್ಯಶ್ರೇಷ್ಠ’.

ವರ್ಮಾ ಅವರನ್ನು ನವದೆಹಲಿಯ ಅಭ್ಯರ್ಥಿಯನ್ನಾಗಿ ಮಾಡುವ ಮೂಲಕ ಕೇಜ್ರಿವಾಲ್ ಅವರು ತಮ್ಮ ಕ್ಷೇತ್ರದಲ್ಲೇ ಹೆಚ್ಚು ಸಮಯ ಇರುವಂತೆ ಬಿಜೆಪಿ ನೋಡಿಕೊಂಡಿತು. ಎಎಪಿಯ ನೀತಿ ಹಾಗೂ ಶೀಷಮಹಲ್‌ನಲ್ಲಿ ಕೇಜ್ರಿವಾಲ್ ಅವರ ವಾಸದ ಕುರಿತು ವರ್ಮಾ ಪದೇ ಪದೇ ಪ್ರಸ್ತಾಪಿಸಿದರು. ಅವರ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಕೇಜ್ರಿವಾಲ್ ಹೆಚ್ಚಿನ ಸಮಯ ಮೀಸಲಿಡಬೇಕಾಯಿತು. ಬಿಜೆಪಿಯ ಸಂದೇಶವನ್ನು ದೆಹಲಿಯ ಜನರಿಗೆ ತಲುಪಿಸುವುದರ ಜೊತೆಗೆ, ಎಎಪಿಯನ್ನು ಉಗ್ರವಾಗಿ ಟೀಕಿಸುವ ಮೂಲಕ ತಮ್ಮನ್ನು ಸಂಭಾವ್ಯ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಬಿಂಬಿಸಿಕೊಂಡರು.

ವರ್ಮಾಗೆ ಅನುಕೂಲ ಮಾಡಿ ಕೊಡುವ ಉದ್ದೇಶದಿಂದ ಸಾವಿರಾರು ಮತದಾರರ ಹೆಸರನ್ನು ಕೈಬಿಡಲಾಗಿದೆ ಹಾಗೂ ಪೂರ್ವಾಂಚಲಿಗಳ ಹೆಸರನ್ನು ಸೇರ್ಪಡೆ ಮಾಡಲಾಗಿದೆ ಎಂದು ಕೇಜ್ರಿವಾಲ್ ಆರೋಪ ಮಾಡಿದರು. ಪೂರ್ವಾಂಚಲಿಗಳಿಗೆ ಎಎಪಿ ವರಿಷ್ಠ ಅವಮಾನಿಸಿದ್ದಾರೆ ಎಂದು ಬಿಜೆಪಿ ಬಿಂಬಿಸಿತು.

ನವದೆಹಲಿ ಕ್ಷೇತ್ರದ ಮತದಾರರಿಗೆ ಹಣ ಹಂಚಿದ ಆರೋಪಕ್ಕೆ ವರ್ಮಾ ಇತ್ತೀಚೆಗೆ ಒಳಗಾಗಿದ್ದರು. 2020ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಅವರು ದ್ವೇಷ ಭಾಷಣ ಮಾಡಿದ್ದರು. ಶಹೀನ್ ಬಾಗ್ ಪ್ರತಿಭಟನಾನಿರತರನ್ನು ಅತ್ಯಾಚಾರಿಗಳು ಹಾಗೂ ಕೊಲೆಗಾರರು ಎಂದು ಜರೆದಿದ್ದರು. ಕೇಜ್ರಿವಾಲ್ ಅವರನ್ನು ಭಯೋತ್ಪಾದಕ ಎಂದು ನಿಂದಿಸಿದ್ದರು. ಮುಸ್ಲಿಮರನ್ನು ಸಂಪೂರ್ಣವಾಗಿ ಬಹಿಷ್ಕರಿಸಬೇಕು ಎಂದು 2022ರಲ್ಲಿ ಹೇಳಿಕೆ ನೀಡಿದ್ದರು.

‘ನವದೆಹಲಿ ಕ್ಷೇತ್ರದಲ್ಲಿ ಕೇಜ್ರಿವಾಲ್ ವಿರುದ್ಧ ಸ್ಪರ್ಧಿಸಲು ಮಾನಸಿಕವಾಗಿ ಸಿದ್ಧರಾಗುವಂತೆ ಪಕ್ಷದ ವರಿಷ್ಠರು ಎರಡು ತಿಂಗಳ ಹಿಂದೆಯೇ ಸೂಚಿಸಿದ್ದರು. ನನ್ನ ಗೆಲುವಿಗೆ ಮೋದಿ ಅವರೇ ಕಾರಣ’ ಎಂದು ವರ್ಮಾ ಹೇಳಿದ್ದಾರೆ.

ಐತಿಹಾಸಿಕ ಗೆಲುವು: ಪ್ರಧಾನಿ ಬಣ್ಣನೆ

ನವದೆಹಲಿ (ಪಿಟಿಐ): ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ಗೆಲುವನ್ನು ‘ಐತಿಹಾಸಿಕ’ ಎಂದು ಬಣ್ಣಿಸಿದ ಪ್ರಧಾನಿ ನರೇಂದ್ರ ಮೋದಿ, ‘ದೇಶಕ್ಕೆ ವಂಚನೆ ಮತ್ತು ಮೂರ್ಖತನದ ರಾಜಕೀಯ ಬೇಕಿಲ್ಲ’ ಎಂದು ಹೇಳಿದರು.

ಬಿಜೆಪಿ ಕೇಂದ್ರ ಕಚೇರಿಯಲ್ಲಿ ಶನಿವಾರ ಸಂಜೆ ಏರ್ಪಡಿಸಿದ ವಿಜಯೋತ್ಸವದಲ್ಲಿ ಪಕ್ಷದ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಅವರು ಎಎಪಿ ಮತ್ತು ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.

‘ದೆಹಲಿಯ ಜನರು ಎಎಪಿಗೆ ನಿರ್ಗಮನದ ಬಾಗಿಲು ತೋರಿಸಿದ್ದಾರೆ. ಇನ್ನು ಮುಂದೆ ಡಬಲ್ ಎಂಜಿನ್ ಸರ್ಕಾರವು ದೆಹಲಿಯ ಅಭಿವೃದ್ಧಿಯ ವೇಗವನ್ನು ಇಮ್ಮಡಿಗೊಳಿಸಲಿದೆ. ದೆಹಲಿಯ ಜನರು ‘ಶಾರ್ಟ್‌-ಕಟ್‌ಗಳ ರಾಜಕೀಯವನ್ನು ಶಾರ್ಟ್-ಸರ್ಕ್ಯೂಟ್ ಮಾಡಿದ್ದಾರೆ’. ರಾಜಕೀಯದಲ್ಲಿ ಭ್ರಷ್ಟಾಚಾರ ಮತ್ತು ಸುಳ್ಳಿಗೆ ಜಾಗವಿಲ್ಲ ಎಂಬುದನ್ನು ಜನಾದೇಶ ಸ್ಪಷ್ಟಪಡಿಸಿದೆ’ ಎಂದಿದ್ದಾರೆ.

‘ಕಾಂಗ್ರೆಸ್ ಕೈಹಿಡಿದವರ ಅಂತ್ಯ ಖಚಿತ’: ಕಾಂಗ್ರೆಸ್ ವಿರುದ್ಧ ಹರಿಹಾಯ್ದ ಪ್ರಧಾನಿ, ‘ಮಿತ್ರ ಪಕ್ಷಗಳನ್ನು ಒಂದೊಂದಾಗಿ ಮುಗಿಸುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ’ ಎಂದು ಕುಟುಕಿದರು.

ದೆಹಲಿ: ಎಎಪಿ ಸೋಲಿನಲ್ಲಿ ಸಮಾಧಾನ ಕಂಡ ಕಾಂಗ್ರೆಸ್

• ಶೆಮಿನ್ ಜಾಯ್

ನವದೆಹಲಿ: ರಾಷ್ಟ್ರ ಮಟ್ಟದಲ್ಲಿ ‘ಇಂಡಿಯಾ’ ಮೈತ್ರಿಕೂಟದ ಅಂಗಪಕ್ಷವಾಗಿರುವ ಎಎಪಿ ವಿರುದ್ಧ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಭಾರಿ ಪ್ರಚಾರ ನಡೆಸಿತು. ತಾನು ಹಿಂದೆ ಹೊಂದಿದ್ದ ಒಂದಿಷ್ಟು ಬಲವನ್ನು ಮತ್ತೆ ಗಳಿಸಿಕೊಳ್ಳಬಹುದು ಎಂಬುದು ಕಾಂಗ್ರೆಸ್ಸಿನ ಈ ಬಗೆಯ ಪ್ರಚಾರದ ಹಿಂದಿದ್ದ ಲೆಕ್ಕಾಚಾರವಾಗಿತ್ತು.

ಆದರೆ ದೆಹಲಿ ವಿಧಾನಸಭೆಯಲ್ಲಿ ಈ ಬಾರಿಯೂ ಒಂದು ಸ್ಥಾನ ಗೆಲ್ಲಲೂ ಕಾಂಗ್ರೆಸ್ಸಿಗೆ ಆಗಿಲ್ಲ. ಮೂರು ಸ್ಥಾನಗಳನ್ನು ಹೊರತುಪಡಿಸಿದರೆ ಇನ್ನೆಲ್ಲ ಕಡೆ ಕಾಂಗ್ರೆಸ್ ಅಭ್ಯರ್ಥಿಗಳು ಠೇವಣಿ ಕಳೆದುಕೊಂಡಿದ್ದಾರೆ. 2020ರ ಚುನಾವಣೆಗೆ ಹೋಲಿಸಿದರೆ ಪಕ್ಷವು 2.05 ಲಕ್ಷದಷ್ಟು ಹೆಚ್ಚು ಮತಗಳನ್ನು ಪಡೆದಿದೆ.

ಚುನಾವಣೆಯಲ್ಲಿ ಎಎಪಿ ಸೋತಿದೆ ಎಂಬುದು ಕಾಂಗ್ರೆಸ್ ನಾಯಕರ ಸಂತಸಕ್ಕೆ ಕಾರಣವಾಗಿದೆ. ಎಎಪಿಗೆ ಇನ್ನಷ್ಟು ಏಟು ಕೊಡಲು ಈ ಚುನಾವಣೆಯು ಆರಂಭಿಕ ಹೆಜ್ಜೆ ಎಂದು ಕಾಂಗ್ರೆಸ್ ಭಾವಿಸಿದೆ. ದೆಹಲಿಯ ವಿಷಯಗಳನ್ನು ಪ್ರಸ್ತಾಪಿಸುವ ಕೆಲಸವನ್ನು ತಾವು ಮುಂದುವರಿಸುವುದಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸ್ಪಷ್ಟಪಡಿಸಿದ್ದಾರೆ.

ಎಎಪಿಗೆ ಎದುರಾದ ಸೋಲು ಹಾಗೂ ಅದರಲ್ಲಿ ಕಾಂಗ್ರೆಸ್ಸಿನ ಪಾತ್ರವು ‘ಇಂಡಿಯಾ’ ಮೈತ್ರಿಕೂಟದಲ್ಲಿ ಸಮಸ್ಯೆ ಸೃಷ್ಟಿಸುವ ಸಾಧ್ಯತೆ ಇದೆ. ಕೇಜ್ರಿವಾಲ್ ಅವರನ್ನು ಗುರಿಯಾಗಿಸಿಕೊಂಡು ರಾಹುಲ್ ಟೀಕೆಗಳನ್ನು ಮಾಡಿದ್ದುದು ಮಿತ್ರಪಕ್ಷಗಳಲ್ಲಿ ಕೆಲವರಿಗೆ ಸರಿಕಂಡಿಲ್ಲ.

ದಲಿತರು, ಮುಸ್ಲಿಮರು ಹೆಚ್ಚಿರುವ ಕ್ಷೇತ್ರಗಳಲ್ಲಿ ಪಕ್ಷಕ್ಕೆ ದೊಡ್ಡ ಮುನ್ನಡೆ ಸಿಕ್ಕಿಲ್ಲ. ಕಾಂಗ್ರೆಸ್ ಎಎಪಿ ನೇತೃತ್ವದ ಸರ್ಕಾರದ ವಿರುದ್ಧ ಜನಾಭಿಪ್ರಾಯ ಮೂಡಿಸಿತಾದರೂ ಜನರು ಕಾಂಗ್ರೆಸ್ಸಿಗೆ ನಿರೀಕ್ಷಿತ ಜನಾದೇಶ ನೀಡಿಲ್ಲ ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

12 ಕ್ಷೇತ್ರಗಳಲ್ಲಿ ಎಎಪಿಗೆ ಕಾಂಗ್ರೆಸ್ ಅಡ್ಡಿ

ದೆಹಲಿ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಎಎಪಿ ಪರಸ್ಪರ ಮೈತ್ರಿ ಮಾಡಿಕೊಳ್ಳದೆ ಪ್ರತ್ಯೇಕವಾಗಿ ಸ್ಪರ್ಧಿಸಿದ್ದವು. 70 ಕ್ಷೇತ್ರಗಳ ಪೈಕಿ 12 ಕಡೆಗಳಲ್ಲಿ ಎಎಪಿ ಗೆಲುವಿಗೆ ಕಾಂಗ್ರೆಸ್ ಅಭ್ಯರ್ಥಿಗಳು ಅಡ್ಡಿಯಾಗಿ ಪರಿಣಮಿಸಿದ್ದಾರೆ. ಎಎಪಿ ಅಭ್ಯರ್ಥಿಗಳು ಕೆಲವು ಕ್ಷೇತ್ರಗಳಲ್ಲಿ ಕಡಿಮೆ ಅಂತರದಲ್ಲಿ ಸೋತಿದ್ದಾರೆ. ಈ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲುವಿನ ಅಂತರಕ್ಕಿಂತ ಹೆಚ್ಚಿನ ಮತಗಳು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಬಿದ್ದಿವೆ.

ದಕ್ಷಿಣ ದೆಹಲಿಯ ಗ್ರೇಟರ್ ಕೈಲಾಶ್ ಕ್ಷೇತ್ರದಲ್ಲಿ ಬಿಜೆಪಿಯ ಶಿಖಾ ರಾಯ್ ಅವರು ಎಎಪಿಯ ಸೌರಭ್ ಭಾರದ್ವಾಜ್ ಅವರನ್ನು 3,188 ಮತಗಳಿಂದ ಮಣಿಸಿದ್ದಾರೆ. ಇಲ್ಲಿನ ಕಾಂಗ್ರೆಸ್ ಅಭ್ಯರ್ಥಿ ಗಾರ್ವಿತ್ ಸಿಂಘ್ವಿ ಅವರಿಗೆ 6,711 ಮತಗಳು ಬಿದ್ದಿವೆ. ಕಾಂಗ್ರೆಸ್–ಎಎಪಿ ಮೈತ್ರಿ ಇದ್ದಿದ್ದರೆ ಸೌರಭ್ ಗೆಲುವು ಸಾಧಿಸುವ ಅವಕಾಶವಿತ್ತು.

ಆಮ್ ಆದ್ಮಿ ಪಕ್ಷದ ಮಹಾರಥಿಗಳ ಸೋಲು

ಪ್ರಜಾವಾಣಿ ವಾರ್ತೆ

ನವದೆಹಲಿ: ಎಎಪಿಯ ಮಹಾರಥಿಗಳ ಪೈಕಿ ಮುಖ್ಯಮಂತ್ರಿ ಆತಿಶಿ, ನಾಯಕ ಗೋಪಾಲ್ ರಾಯ್ ಮಾತ್ರ ಗೆಲುವಿನ ನಗೆ ಬೀರಿದ್ದಾರೆ. ಉಳಿದವರು ಸೋತು ಮುಖಭಂಗ ಅನುಭವಿಸಿದ್ದಾರೆ.

ಅರವಿಂದ ಕೇಜ್ರಿವಾಲ್, ಮನೀಷ್ ಸಿಸೋಡಿಯಾ, ಸೌರಭ್ ಭಾರದ್ವಾಜ್, ದುರ್ಗೇಶ್ ಪಾಠಕ್, ಸೋಮನಾಥ ಬಾರ್ತಿ, ಸತ್ಯೇಂದರ್ ಜೈನ್, ಅವಧ್ ಓಜಾ ಸೋತ ಪ್ರಮುಖ ನಾಯಕರು. ಇವರೆಲ್ಲ ಪಕ್ಷದ ದಿಗ್ಗಜರು. ಶಿಕ್ಷಣ ತಜ್ಞ ಅವಧ್ ಓಜಾ ಅವರಿಗೆ ಮನೀಷ್ ಸಿಸೋಡಿಯಾ ಕ್ಷೇತ್ರ ಬಿಟ್ಟುಕೊಟ್ಟಿದ್ದರು. ಸಿಸೋಡಿಯಾ ಅವರು ಜಂಗ್‌ಪುರದಲ್ಲಿ ಸ್ಪರ್ಧಿಸಿದ್ದರು. ಎರಡೂ ಕ್ಷೇತ್ರಗಳಲ್ಲಿ ಪಕ್ಷ ಸೋತಿದೆ. ಕೇಜ್ರಿವಾಲ್, ಸಿಸೋಡಿಯಾ, ದುರ್ಗೇಶ್, ಬಾರ್ತಿ ಅವರ ಕ್ಷೇತ್ರಗಳಲ್ಲಿ ಗೆಲುವಿನ ಅಂತರಕ್ಕಿಂತ ‘ಕೈ’ ಅಭ್ಯರ್ಥಿಗಳು ಅಧಿಕ ಮತಗಳನ್ನು ಪಡೆದಿದ್ದಾರೆ. ಈ ಮೂಲಕ, ಪಂಚ ನಾಯಕರ ಸೋಲಿಗೆ ಕಾಂಗ್ರೆಸ್ ಅಭ್ಯರ್ಥಿಗಳು ಪರೋಕ್ಷವಾಗಿ ಕಾರಣರಾಗಿದ್ದಾರೆ. ಎಎಪಿ ದಿಗ್ಗಜರ ಕ್ಷೇತ್ರಗಳಲ್ಲಿ ಪ್ರಭಾವಿ ನಾಯಕರನ್ನೇ ಕಾಂಗ್ರೆಸ್ ಪಕ್ಷವು ಕಣಕ್ಕೆ ಇಳಿಸಿತ್ತು.

2013ರ ಚುನಾವಣೆಯಲ್ಲಿ ನವದೆಹಲಿ ಕ್ಷೇತ್ರದಲ್ಲಿ ಆಗಿನ ಮುಖ್ಯಮಂತ್ರಿ ಶೀಲಾ ದೀಕ್ಷಿತ್ ವಿರುದ್ಧ ಅರವಿಂದ ಕೇಜ್ರಿವಾಲ್ ಸ್ಪರ್ಧಿಸಿದ್ದರು. ಕೇಜ್ರಿವಾಲ್ ಅವರು 25 ಸಾವಿರ ಮತಗಳಿಂದ ಜಯಭೇರಿ ಬಾರಿಸಿದ್ದರು. ಈ ಕ್ಷೇತ್ರದಲ್ಲಿ ಶೀಲಾ ದೀಕ್ಷಿತ್ ಪುತ್ರ ಸಂದೀಪ್ ದೀಕ್ಷಿತ್ ಈ ಸಲ ಕಾಂಗ್ರೆಸ್ ಹುರಿಯಾಳುವಾಗಿದ್ದರು. ದೀಕ್ಷಿತ್ ಗೆಲ್ಲದೇ ಇದ್ದರೂ ಕೇಜ್ರಿವಾಲ್ ಸೋಲಿಗೆ ಕಾರಣಕರ್ತರಾಗುವ ಮೂಲಕ ‘ಸೇಡು’ ತೀರಿಸಿಕೊಂಡಿದ್ದಾರೆ. 2020ರ ಚುನಾವಣೆಯಲ್ಲಿ ಕೇಜ್ರಿವಾಲ್ ಅವರು ಶೇ 60ರಷ್ಟು ಮತಗಳನ್ನು ಪಡೆದು ದಿಗ್ವಿಜಯ ಸಾಧಿಸಿದ್ದರು. ಈ ಸಲ, ಮಾಜಿ ಮುಖ್ಯಮಂತ್ರಿಗಳ ಪುತ್ರರನ್ನು ಕಾಂಗ್ರೆಸ್ ಹಾಗೂ ಬಿಜೆಪಿ ಕಣಕ್ಕೆ ಇಳಿಸಿದ್ದವು.

ನವದೆಹಲಿ

ಅಭ್ಯರ್ಥಿ	ಮತ
ಪರ್ವೇಶ್ ವರ್ಮಾ (ಬಿಜೆಪಿ)	30,088
ಅರವಿಂದ ಕೇಜ್ರಿವಾಲ್ (ಎಎಪಿ)	25,999
ಸಂದೀಪ್ ದೀಕ್ಷಿತ್ (ಕಾಂಗ್ರೆಸ್)	4,568
ಗೆಲುವಿನ ಅಂತರ	4,089

ಜಂಗ್‌ಪುರ

ಅಭ್ಯರ್ಥಿ	ಮತ
ತರ್ವಿಂದರ್ ಸಿಂಗ್ ಮಾರ್ವಾ (ಬಿಜೆಪಿ)	38,859
ಮನೀಷ್ ಸಿಸೋಡಿಯಾ (ಎಎಪಿ)	38,184
ಫರ್ಹಾದ್ ಸೂರಿ (ಕಾಂಗ್ರೆಸ್)	7,350
ಗೆಲುವಿನ ಅಂತರ	675

ಗ್ರೇಟರ್ ಕೈಲಾಶ್

ಅಭ್ಯರ್ಥಿ	ಮತ
ಶಿಖಾ ರಾಯ್ (ಬಿಜೆಪಿ)	49,594
ಸೌರಭ್ ಭಾರದ್ವಾಜ್ (ಎಎಪಿ)	46,406
ಗರ್ವಿತ್ ಸಿಂಘ್ವಿ (ಕಾಂಗ್ರೆಸ್)	6,711
ಗೆಲುವಿನ ಅಂತರ	3,188

ರಾಜಿಂದರ್ ನಗರ

ಅಭ್ಯರ್ಥಿ	ಮತ
ಉಮಾಂಗ್ ಬಜಾಜ್ (ಬಿಜೆಪಿ)	46671
ದುರ್ಗೇಶ್ ಪಾಠಕ್ (ಎಎಪಿ)	45440
ವಿನೀತ್ ಯಾದವ್ (ಕಾಂಗ್ರೆಸ್)	4015
ಗೆಲುವಿನ ಅಂತರ	1231

ಮಾಳವಿಯಾ ನಗರ

ಅಭ್ಯರ್ಥಿ	ಮತ
ಸತೀಶ್ ಉಪಾಧ್ಯಾಯ (ಬಿಜೆಪಿ)	39,564
ಸೋಮನಾಥ ಬಾರ್ತಿ (ಎಎಪಿ)	37,433
ಜಿತೆಂದರ್ ಕುಮಾರ್ ಕೊಚ್ಚಾರ್ (ಕಾಂಗ್ರೆಸ್)	6,770
ಗೆಲುವಿನ ಅಂತರ	2131

ಶಕುರ್ ಬಸ್ತಿ

ಅಭ್ಯರ್ಥಿ	ಮತ
ಕರ್ನೈಲ್ ಸಿಂಗ್ (ಬಿಜೆಪಿ)	56869
ಸತ್ಯೇಂದರ್ ಜೈನ್ (ಎಎಪಿ)	35,871
ಸತೀಶ್ ಕುಮಾರ್ ಲೂತ್ರಾ (ಕಾಂಗ್ರೆಸ್)	5,784
ಗೆಲುವಿನ ಅಂತರ	20,999

ಬಲ ಕಳೆದುಕೊಂಡ ‘ಇಂಡಿಯಾ’

ವಿರೋಧ ಪಕ್ಷಗಳ ನಾಯಕರ ನಡುವೆ ಆಂತರಿಕ ಭಿನ್ನಾಭಿಪ್ರಾಯ

ನವದೆಹಲಿ (ಪಿಟಿಐ): ‘ಇಂಡಿಯಾ’ ಮೈತ್ರಿಕೂಟವು ಲೋಕಸಭಾ ಚುನಾವಣೆಯಲ್ಲಿ ಉತ್ತಮ ಪ್ರದರ್ಶನ ತೋರಿ ಎಂಟು ತಿಂಗಳು ಮಾತ್ರ ಕಳೆದಿದೆ. ಆದರೆ, ಆಂತರಿಕ ಭಿನ್ನಾಭಿಪ್ರಾಯ ಹಾಗೂ ವಿವಿಧ ಪಕ್ಷಗಳ ಗುರಿ ಬೇರೆಬೇರೆ ಆಗಿರುವ ಪರಿಣಾಮವಾಗಿ ವಿಧಾನಸಭಾ ಚುನಾವಣೆಗಳಲ್ಲಿ ಮೈತ್ರಿಕೂಟವು ಕಳಪೆ ಸಾಧನೆ ತೋರುತ್ತಿದ್ದು, ಅದರ ಬಲವು ರಾಜಕೀಯವಾಗಿ ಕುಂದುತ್ತಿರುವಂತೆ ಕಾಣುತ್ತಿದೆ.

ರಾಷ್ಟ್ರ ರಾಜಕಾರಣದಲ್ಲಿ ಬಿಜೆಪಿಯು ಮತ್ತೆ ಚಾಲಕನ ಸ್ಥಾನಕ್ಕೆ ಬಂದು ಕುಳಿತಿದೆ. ದೆಹಲಿಯಲ್ಲಿ ಎಎಪಿ ನೇತೃತ್ವದ ಸರ್ಕಾರವು ಅಧಿಕಾರ ಕಳೆದುಕೊಂಡಿರುವುದರ ಪರಿಣಾಮವಾಗಿ ರಾಷ್ಟ್ರದಲ್ಲಿ ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳ ನೇತೃತ್ವದ ಸರ್ಕಾರಗಳ ಸಂಖ್ಯೆಯು ಎಂಟಕ್ಕೆ ಕುಸಿದಿದೆ.

2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರ ಹಿಡಿಯದಂತೆ ಮಾಡಲು ‘ಇಂಡಿಯಾ’ ಮೈತ್ರಿಕೂಟಕ್ಕೆ ಸಾಧ್ಯವಾಗಲಿಲ್ಲವಾದರೂ ಬಿಜೆಪಿಗೆ ಸ್ವಂತ ಬಲದ ಮೇಲೆ ಅಧಿಕಾರ ರಚಿಸಲು ಸಾಧ್ಯವಾಗದಂತೆ ಮಾಡಿದ್ದು ಕಡಿಮೆ ಸಾಧನೆಯೇನೂ ಅಲ್ಲ.

ಮೈತ್ರಿಕೂಟವು ಲೋಕಸಭಾ ಚುನಾವಣೆಗೆ ಸೀಮಿತ, ವಿಧಾನಸಭಾ ಚುನಾವಣೆಗಳ ಸಂದರ್ಭದಲ್ಲಿ ಅಲ್ಲಿನ ಪರಿಸ್ಥಿತಿ ಅವಲೋಕಿಸಿ ಮೈತ್ರಿಯನ್ನು ಮುಂದುವರಿಸಲಾಗುತ್ತದೆ ಎಂದು ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳು ಮೊದಲಿನಿಂದಲೂ ಹೇಳುತ್ತಿವೆ. ಆದರೆ ವಿಧಾನಸಭಾ ಚುನಾವಣೆಗಳ ಸಂದರ್ಭದ ಆರೋಪ–ಪ್ರತ್ಯಾರೋಪಗಳು ರಾಷ್ಟ್ರ ಮಟ್ಟದಲ್ಲಿ ಮೈತ್ರಿಕೂಟದಲ್ಲಿ ಬಿರುಕು ಮೂಡಲು ಕಾರಣವಾಗಬಹುದು ಎಂಬುದು ಆರಂಭದಲ್ಲಿ ಆಲೋಚನೆಗೆ ಬಂದಿರಲಿಲ್ಲ.

ಆದರೆ, ‘ಇಂಡಿಯಾ’ ಮೈತ್ರಿಕೂಟದ ಅತಿದೊಡ್ಡ ಪಕ್ಷವಾದ ಕಾಂಗ್ರೆಸ್, ದೆಹಲಿ ಚುನಾವಣೆಯ ಸಂದರ್ಭದಲ್ಲಿ ಎಎಪಿ ವಿರುದ್ಧ ಭಾರಿ ಪ್ರಚಾರ ನಡೆಸಿತು. ಇದರ ಪರಿಣಾಮವಾಗಿ ಎರಡೂ ಪಕ್ಷಗಳ ನಡುವೆ ತೀವ್ರ ಸ್ವರೂಪದ ಆರೋಪ–ಪ್ರತ್ಯಾರೋಪ ದಾಖಲಾದವು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಎಎಪಿ ಮತ್ತು ಕೇಜ್ರಿವಾಲ್ ವಿರುದ್ಧ ವಾಗ್ದಾಳಿ ನಡೆಸಿದರು. ‘ಅಬಕಾರಿ ಹಗರಣದ ರೂವಾರಿ’ ಎಂದು ಜರೆದರು.

ಆದರೆ ‘ಇಂಡಿಯಾ’ ಮೈತ್ರಿಕೂಟದ ಎಸ್‌ಪಿ ಮತ್ತು ಟಿಎಂಸಿ ಪಕ್ಷಗಳು ಎಎಪಿಗೆ ಬೆಂಬಲ ವ್ಯಕ್ತಪಡಿಸಿದವು. ಮೈತ್ರಿಕೂಟದಲ್ಲಿ ಕಾಂಗ್ರೆಸ್ ಹಾಗೂ ಸಣ್ಣ ಪಕ್ಷಗಳ ನಡುವಿನ ಅಂತರವು ಹೆಚ್ಚಾಗುತ್ತ ಸಾಗಿದೆ. ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ, ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಇದು ಕಾಣುತ್ತಿದೆ. ಈ ಎರಡೂ ಕಡೆಗಳಲ್ಲಿ ಮೈತ್ರಿ ಸಾಧಿಸಲು ಎಎಪಿ ಮತ್ತು ಕಾಂಗ್ರೆಸ್ಸಿಗೆ ಆಗಲಿಲ್ಲ.

ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ‘ಇಂಡಿಯಾ’ ಮೈತ್ರಿಕೂಟವು ಒಗ್ಗಟ್ಟಿನಿಂದ ಇರುವಂತೆ ಕಾಣುತ್ತಿದೆ. ಆದರೆ ಪಶ್ಚಿಮ ಬಂಗಾಳ ಹಾಗೂ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗಳಲ್ಲಿ ಒಟ್ಟಾಗಿರುವುದು ಕಷ್ಟಸಾಧ್ಯ.

ಫಲಿತಾಂಶ ಪ್ರಕಟವಾದ ನಂತರದಲ್ಲಿ ‘ಇಂಡಿಯಾ’ ಮೈತ್ರಿಕೂಟದ ವಿವಿಧ ಪಕ್ಷಗಳ ನಾಯಕರಲ್ಲಿನ ಅಸಮಾಧಾನವು ವ್ಯಕ್ತವಾಗಲು ಆರಂಭಿಸಿದೆ. ‘ಪರಸ್ಪರರೊಂದಿಗೆ ಕಚ್ಚಾಟ ಮುಂದುವರಿಸೋಣ’ ಎಂದು ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ವ್ಯಂಗ್ಯವಾಗಿ ಹೇಳಿದ್ದಾರೆ.

‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳ ನಡುವಿನ ಭಿನ್ನಮತವು ದೆಹಲಿಯಲ್ಲಿ ಬಿಜೆಪಿಗೆ ಉತ್ತಮ ಸಾಧನೆ ತೋರಲು ನೆರವಾಗಿದೆ ಎಂದು ಸಿಪಿಎಂ ಮತ್ತು ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ಹೇಳಿವೆ.

‘ಇಂಡಿಯಾ’ ಮೈತ್ರಿಕೂಟವು ಪರಿಣಾಮಕಾರಿಯಾಗಿ ಕೆಲಸ ಮಾಡಲು ಕಾಂಗ್ರೆಸ್ ಸಹಕಾರ ನೀಡಿಲ್ಲ
ಟಿ.ಪಿ. ರಾಮಕೃಷ್ಣನ್, ಸಿಪಿಎಂ ನಾಯಕ

‘ಇಂಡಿಯಾ’ ಪಾಲುದಾರ ಪಕ್ಷಗಳು ಒಂದಾಗಿದ್ದಿದ್ದರೆ ಬಿಜೆಪಿ ಗೆಲ್ಲುತ್ತಿರಲಿಲ್ಲ. ಎಲ್ಲರೂ ಈ ವಿಚಾರದ ಬಗ್ಗೆ ಚರ್ಚಿಸಬೇಕು
ಪಿ.ಕೆ. ಕುಞ್ಞಾಲಿಕುಟ್ಟಿ, ಐಯುಎಂಎಲ್ ನಾಯಕ

ಮಿಲ್ಕೀಪುರ ಬಿಜೆಪಿಗೆ

ಲಖನೌ: ಉತ್ತರ ಪ್ರದೇಶದ ಅಯೋಧ್ಯೆ ಲೋಕಸಭೆ ಕ್ಷೇತ್ರದಲ್ಲಿ ಸೋಲು ಕಂಡಿದ್ದ ಬಿಜೆಪಿಯು, ಮಿಲ್ಕೀಪುರ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಜಯಗಳಿಸುವ ಮೂಲಕ ಮುಯ್ಯಿ ತೀರಿಸಿಕೊಂಡಿದೆ.

ಈ ಕ್ಷೇತ್ರವನ್ನು ಬಿಜೆಪಿಯು ಪ್ರತಿಷ್ಠೆಯಾಗಿ ಪರಿಗಣಿಸಿತ್ತು. ಅಯೋಧ್ಯೆಯಲ್ಲಿ ಗೆಲುವು ಕಂಡಿದ್ದ ಸಮಾಜವಾದಿ ಪಕ್ಷದ ಅವಧೇಶ್ ಪ್ರಸಾದ್ ಅವರ ಮಗ ಅಜಿತ್ ಪ್ರಸಾದ್ ಅವರನ್ನು ಮಿಲ್ಕೀಪುರ ಕ್ಷೇತ್ರದಿಂದ ಎಸ್‌ಪಿ ಕಣಕ್ಕಿಳಿಸಿತ್ತು.

ಡಿಎಂಕೆಗೆ ಗೆಲುವು

ಚೆನ್ನೈ: ತಮಿಳುನಾಡಿನ ಈರೋಡ್(ಪೂರ್ವ) ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಆಡಳಿತಾರೂಢ ಡಿಎಂಕೆ ಭರ್ಜರಿ ಗೆಲುವು ದಾಖಲಿಸಿದೆ. ಎಐಡಿಎಂಕೆ, ಬಿಜೆಪಿಯ ಬಹಿಷ್ಕಾರದ ನಡುವೆಯೇ ಡಿಎಂಕೆ ಈ ಕ್ಷೇತ್ರವನ್ನು ತೆಕ್ಕೆಗೆ ಪಡೆದಿದೆ.

ಎನ್‌ಟಿಕೆಯ ಸೀತಾಲಕ್ಷ್ಮೀ ವಿರುದ್ಧ ಡಿಎಂಕೆಯ ವಿ.ಸಿ ಚಂದಿರಕುಮಾರ್ ಅವರು 91,558 ಮತಗಳ ಅಂತರದಿಂದ ಜಯ ಗಳಿಸಿದರು. ಸೀತಾಲಕ್ಷ್ಮೀ ಅವರು 24,151 ಮತಗಳನ್ನು ಪಡೆದಿದ್ದು, ಚಂದಿರಕುಮಾರ್ ಅವರು 1,14,439 ಮತಗಳನ್ನು ಗಳಿಸಿದ್ದಾರೆ.

ಬಿಜೆಪಿಗೆ ಗದ್ದುಗೆ: ಎಎಪಿ ಮನೆಗೆ

ಒಂದನೇ ಪುಟದಿಂದ...

ಸಾಮಾಜಿಕ ಹೋರಾಟಗಾರ ಅಣ್ಣಾ ಹಜಾರೆ ಅವರ ಭ್ರಷ್ಟಾಚಾರ ವಿರೋಧಿ ಹೋರಾಟದಿಂದ ಹುಟ್ಟಿಕೊಂಡ ಪಕ್ಷವಾದ ಎಎಪಿಯು ದಶಕದಲ್ಲೇ ಭ್ರಷ್ಟಾಚಾರದ ಕಳಂಕ ಅಂಟಿಸಿಕೊಂಡು ಸೋತು ಸುಣ್ಣವಾಗಿದೆ. ಕೇಜ್ರಿವಾಲ್ ಸೇರಿದಂತೆ ಪ್ರಮುಖರ ರೆಕ್ಕೆಪುಕ್ಕಗಳನ್ನು ಕಮಲ ಪಾಳಯ ಕತ್ತರಿಸಿದೆ. ಕಾಂಗ್ರೆಸ್ ಪಕ್ಷವು ಸತತ ಮೂರನೇ ಬಾರಿಗೆ ಶೂನ್ಯ ಸಂಪಾದನೆ ಮಾಡಿದರೂ ಕೇಜ್ರಿವಾಲ್ ವಿರುದ್ಧ ಸೇಡು ತೀರಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಯುಪಿಎ ಸರ್ಕಾರವನ್ನು ಗುರಿಯಾಗಿಸಿಕೊಂಡು ಅಣ್ಣಾ ಹಜಾರೆ ನಡೆಸಿದ ಆಂದೋಲನ ಕಾಂಗ್ರೆಸ್‌ನ ಪತನಕ್ಕೆ ಕಾರಣವಾಗಿತ್ತು. ಎಎಪಿಯು ದೆಹಲಿಯಲ್ಲಿ ಕಾಂಗ್ರೆಸ್ ಪಕ್ಷವನ್ನು ಗುಡಿಸಿ ಹಾಕಿತ್ತು. 11 ವರ್ಷಗಳಲ್ಲೇ ‘ಬ್ರ್ಯಾಂಡ್ ಕೇಜ್ರಿವಾಲ್’ ಪ್ರಭಾವಳಿಗೆ ಮಂಕು ಕವಿಯಲಾರಂಭಿಸಿದೆ. ರಾಜ್ಯದಲ್ಲಿ ಸತತ ನಾಲ್ಕನೆಯ ಸಲ ಗೆಲುವಿಗಾಗಿ ಕಡೆಯ ಗಳಿಗೆಯ ತನಕ ‘ವೀರೋಚಿತ’ ಹೋರಾಟ ನಡೆಸಿದರೂ ಕೇಜ್ರಿವಾಲ್ ಅವರಿಗೆ ಯಶಸ್ಸು ಸಿಕ್ಕಿಲ್ಲ.

ಲೋಕಸಭಾ ಚುನಾವಣೆಯಲ್ಲಿ ಮೋದಿಗೆ ಮತ ಕೊಟ್ಟು ವಿಧಾನಸಭಾ ಚುನಾವಣೆಯಲ್ಲಿ ಕೇಜ್ರಿವಾಲ್ ಪಕ್ಷಕ್ಕೆ ಮತ ಚಲಾಯಿಸುತ್ತಿದ್ದ ‘ಬಲಪಂಥೀಯ’ ಮತದಾರರು ಮತ್ತೆ ಕೇಸರಿ ಪಾಳಯಕ್ಕೆ ಮರಳಿದ್ದಾರೆ. 2020ರಲ್ಲಿ ಶೇ 53.57 ರಷ್ಟಿದ್ದ ಎಎಪಿಯ ಮತ ಪ್ರಮಾಣ ಈ ಸಲ ಶೇ 43.7ಕ್ಕೆ ಇಳಿಯಿತು. ಬಡವರು, ಮಹಿಳೆಯರು ಹಾಗೂ ಮಧ್ಯಮ ವರ್ಗದ ನಿರ್ಣಾಯಕ ಮತದಾರರು ತಮ್ಮ ನಿಷ್ಠೆ ಬದಲಾಯಿಸಿದರು. ರಾಜಧಾನಿಯಲ್ಲಿ ಶೇ 46ರಷ್ಟಿರುವ ಪ್ರಬಲ ಜಾತಿಯವರ ಜತೆಗೆ ಶೇ 66ರಷ್ಟಿರುವ ಮಧ್ಯಮ ವರ್ಗದವರು ಬಿಜೆಪಿ ಪರ ಬಲವಾಗಿ ನಿಂತರು. ಮತದಾನಕ್ಕೆ ಐದು ದಿನಗಳ ಮೊದಲು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ‘ಆದಾಯ ತೆರಿಗೆ ವಿನಾಯಿತಿ’ ಘೋಷಣೆಯೂ ಬಿಜೆಪಿಗೆ ಭರಪೂರ ಫಸಲನ್ನು ಕೊಟ್ಟಿತು.

ಬಿಜೆಪಿ ಗೆಲುವಿಗೆ ಕಾರಣಗಳೇನು?

- ಸ್ಥಳೀಯ ವಿಚಾರಗಳು ಹಾಗೂ ದೆಹಲಿಯ ಸಮಸ್ಯೆಗಳಿಗೆ ಮಹತ್ವ ನೀಡಿಕೆ
- ಎಎಪಿಯ ಪ್ರಮುಖ ಅಭ್ಯರ್ಥಿಗಳ ಕ್ಷೇತ್ರಗಳಲ್ಲಿ ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಮೂಲಕ ಕ್ಷೇತ್ರದಲ್ಲಿ ಕಟ್ಟಿ ಹಾಕುವ ಪ್ರಯತ್ನದಲ್ಲಿ ಯಶಸ್ಸು
- ಎಎಪಿಯ ಪ್ರಮುಖ ನಾಯಕರನ್ನು ಸೆಳೆದುಕೊಂಡು ಟಿಕೆಟ್ ನೀಡಿಕೆ
- ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ಹಾಗೂ ಹಲವಾರು ಪ್ರಮುಖ ನಾಯಕರನ್ನು ಕಣಕ್ಕಿಳಿಸದೆ ಪ್ರಚಾರದ ಹೊಣೆ
- ‘ಉತ್ತಮ ದೆಹಲಿ–ಉತ್ತಮ ಭಾರತ’ ಘೋಷಣೆಯಡಿ ಆರ್‌ಎಸ್‌ಎಸ್ ಕಾರ್ಯಕರ್ತರು ತಳಮಟ್ಟದಲ್ಲಿ ನಡೆಸಿದ ‘ದೆಹಲಿ ಉಳಿಸಿ ಅಭಿಯಾನ’
- ಬಿಜೆಪಿ ನಾಯಕರ ಅಬ್ಬರದ ಪ್ರಚಾರ. ಕೇಂದ್ರ ಸಚಿವರು ಹಾಗೂ ಎನ್‌ಡಿಎ ಸಂಸದರಿಂದ ಮನೆ ಮನೆಗೆ ತೆರಳಿ ‘ತನು ಮನ ಧನ’ದ ಪ್ರಚಾರ
- ಎಎಪಿ ಸರ್ಕಾರದ ಲೋಪಗಳನ್ನು ಲೆಫ್ಟಿನೆಂಟ್ ಗವರ್ನರ್ ನಿರಂತರವಾಗಿ ಬೊಟ್ಟು ಮಾಡಿ ತೋರಿಸಿದ್ದು
- ದೆಹಲಿ ಚುನಾವಣೆಗೆ ಮೊದಲು ಪ್ರಕಟಿಸಿದ ಬಜೆಟ್ ಘೋಷಣೆಗಳು
- ಬಿಜೆಪಿ ಅಧಿಕಾರಕ್ಕೆ ಬಂದರೆ ಉಚಿತ ಯೋಜನೆಗಳನ್ನು ನಿಲ್ಲಿಸುವುದಿಲ್ಲ ಎಂದು ಘೋಷಿಸಿದ್ದು. ಉಚಿತ ಯೋಜನೆಗಳ ಸಂಕಲ್ಪ ಪತ್ರ ಪ್ರಕಟಣೆ
- ಮುಖ್ಯಮಂತ್ರಿ ಅಭ್ಯರ್ಥಿ ಘೋಷಿಸದೇ ಎಲ್ಲ ನಾಯಕರು ಒಗ್ಗಟ್ಟಿನಿಂದ ಪ್ರಚಾರದಲ್ಲಿ ತೊಡಗುವಂತೆ ಮಾಡಿದ ಕಾರ್ಯತಂತ್ರ

ಮತದಾರರ ತೀರ್ಪನ್ನು ವಿನಯದಿಂದ ಸ್ವೀಕರಿಸುತ್ತೇವೆ. ಹೊಸ ಸರ್ಕಾರವು ದೆಹಲಿಯ ಜನರ ನಿರೀಕ್ಷೆಗಳನ್ನು ಈಡೇರಿಸುವುದಾಗಿ ಭಾವಿಸುತ್ತೇವೆ
ಅರವಿಂದ ಕೇಜ್ರಿವಾಲ್
ಎಎಪಿ ಸಂಚಾಲಕ

ಜನಾದೇಶ ಸ್ವೀಕರಿಸುತ್ತೇವೆ. ದೆಹಲಿಯ ಜನರ ಹಕ್ಕುಗಳಿಗಾಗಿ ಹಾಗೂ ಮಾಲಿನ್ಯ, ಬೆಲೆ ಏರಿಕೆ, ಭ್ರಷ್ಟಾಚಾರದ ವಿರುದ್ಧ ನಮ್ಮ ಹೋರಾಟ ಮುಂದುವರಿಯಲಿದೆ
ರಾಹುಲ್ ಗಾಂಧಿ
ಕಾಂಗ್ರೆಸ್ ನಾಯಕ

ಆಮ್ ಆದ್ಮಿ ಪಕ್ಷವು (ಎಎಪಿ) ಅಬಕಾರಿ ನೀತಿಯ ಕಾರಣದಿಂದಾಗಿ ಹಾಗೂ ಹಣಕ್ಕೆ ಹೆಚ್ಚು ಗಮನ ನೀಡಿದ ಪರಿಣಾಮವಾಗಿ ಮುಳುಗಿದೆ
ಅಣ್ಣಾ ಹಜಾರೆ
ಸಾಮಾಜಿಕ ಕಾರ್ಯಕರ್ತ

ಎಎಪಿ ಮತ್ತು ಅದರ ಸಂಚಾಲಕ ಅರವಿಂದ ಕೇಜ್ರಿವಾಲ್ ‘ದುರಹಂಕಾರ’ವೇ ಪಕ್ಷದ ಸೋಲಿಗೆ ಕಾರಣ. ರಾವಣನ ದುರಹಂಕಾರವೂ ಉಳಿಯಲಿಲ್ಲ
ಸ್ವಾತಿ ಮಾಲಿವಾಲ್
ರಾಜ್ಯಸಭಾ ಸದಸ್ಯೆ

ಎಎಪಿ ಎಡವಿದ್ದೆಲ್ಲಿ?

ಒಂದನೇ ಪುಟದಿಂದ...

ಹರಿಯಾಣದ ಬಿಜೆಪಿ ಸರ್ಕಾರವು ಯಮುನಾ ನದಿಗೆ ವಿಷ ಹಾಕಿದೆ ಎಂಬುದು ಸೇರಿದಂತೆ ಹಲವು ಆರೋಪ ಮಾಡುವ ಮೂಲಕ ಕೇಜ್ರಿವಾಲ್ ಚುನಾವಣಾ ಕಣದಲ್ಲಿ ಅಸಹಾಯಕ ಮೂರ್ತಿಯಂತೆ ಕಂಡರು. ಬಿಜೆಪಿ ಅಧಿಕಾರಕ್ಕೆ ಬಂದರೆ ಉಚಿತ ವಿದ್ಯುತ್ ಹಾಗೂ ಉಚಿತ ನೀರಿನ ಯೋಜನೆ ನಿಲ್ಲಿಸಲಿದೆ ಎಂದು ಎಎಪಿ ನಾಯಕರು ಪ್ರಚಾರ ಮಾಡಿದರೂ ಜನರು ನಂಬಲಿಲ್ಲ. ಅದೇ ಸಂದರ್ಭದಲ್ಲಿ ಉಚಿತ ಯೋಜನೆಗಳ ಮಹಾಪೂರವೇ ಇರುವ ಸಂಕಲ್ಪ ಪತ್ರವನ್ನು ಬಿಜೆಪಿ ಪ್ರಕಟಿಸಿತು. ಉಚಿತ ಯೋಜನೆಗಳ ಕಾರಣಕ್ಕೆ ಎಎಪಿ ಜತೆಗಿದ್ದ ಮತದಾರರು ಈ ಸಲ ಕಮಲ ಪಾಳಯಕ್ಕೆ ಜಿಗಿದರು.

ಡಿಸೆಂಬರ್ ಹಾಗೂ ಜನವರಿಯಲ್ಲಿನ ವಿಪರೀತ ಮಾಲಿನ್ಯದಿಂದ ಜನರು ಬಳಲಿದ್ದರು. ನಗರದ ಮಾಲಿನ್ಯವನ್ನು ತಹಬದಿಗೆ ತರುವುದಾಗಿ ಎಎಪಿಯು ಹಿಂದಿನ ಚುನಾವಣೆಗಳಲ್ಲಿ ಭರವಸೆ ನೀಡಿತ್ತು. ಮಾಲಿನ್ಯ ನಿಯಂತ್ರಣ ಸೇರಿದಂತೆ ಮೂರು ಭರವಸೆಗಳನ್ನು ಈಡೇರಿಸಲು ಸಾಧ್ಯವಾಗಿಲ್ಲ ಎಂದು ಕೇಜ್ರಿವಾಲ್ ಅವರೇ ಸಂದರ್ಶನದಲ್ಲಿ ಒಪ್ಪಿಕೊಂಡಿದ್ದರು. ಹಿಂದಿನ ಚುನಾವಣೆಗಳಲ್ಲಿ ಕೇಜ್ರಿವಾಲ್ ಅವರಿಗೆ ಹೆಗಲು ಕೊಟ್ಟಿದ್ದ ನಾಯಕರೆಲ್ಲ ದುರ್ಬಲರಾಗಿದ್ದರು. ಹಿಂದಿನ ಚುನಾವಣೆಗೆ ಹೋಲಿಸಿದರೆ ಈ ಬಾರಿ ಪಕ್ಷವು ಕೇಜ್ರಿವಾಲ್ ಅವರನ್ನು ಹೆಚ್ಚು ಅವಲಂಬಿಸಬೇಕಾಯಿತು.

ಕಾಂಗ್ರೆಸ್ ವಿರೋಧಿ ರಾಜಕಾರಣದಿಂದಲೇ ಪ್ರವರ್ಧಮಾನಕ್ಕೆ ಬಂದ ಪಕ್ಷ ಎಎಪಿ. 2024ರ ಲೋಕಸಭಾ ಚುನಾವಣೆಯಲ್ಲಿ ಎಎಪಿ–ಕಾಂಗ್ರೆಸ್ ಮೈತ್ರಿ ಮಾಡಿಕೊಂಡವು. ವಿಧಾನಸಭಾ ಚುನಾವಣೆಯಲ್ಲಿ ಮೈತ್ರಿ ಮುರಿದುಕೊಂಡವು. ಇದು ಸಹ ಮತದಾರರಿಗೆ ತಪ್ಪು ಸಂದೇಶ ರವಾನಿಸಿತು. 2020ರಲ್ಲಿ ಹಿಂದೂ–ಮುಸ್ಲಿಂ ಗಲಭೆಯಲ್ಲಿ 53 ಮಂದಿ ಮೃತಪಟ್ಟಿದ್ದರು. ಆ ಸಂದರ್ಭದಲ್ಲಿ ಎಎಪಿ ನಾಯಕರು ಮೃದು ಹಿಂದುತ್ವ ಧೋರಣೆ ತಳೆದಿದ್ದರು. ಇದರಿಂದ ಮುಸ್ಲಿಮರು ಬೇಸತ್ತಿದ್ದರು. ಮುಸ್ಲಿಂ ಬಾಹುಳ್ಯದ ಕ್ಷೇತ್ರಗಳಲ್ಲಿ ಪಕ್ಷ ಸೋಲಲು ಇದೂ ಕಾರಣ.

2020ರಲ್ಲಿ ಅಭೂತಪೂರ್ವ ಗೆಲುವು ಸಾಧಿಸಿದ ಮೇಲೆ ಕೇಜ್ರಿವಾಲ್ ಅವರು ರಾಷ್ಟ್ರ ರಾಜಕಾರಣದ ಕಡೆಗೆ ಗಮನ ಕೇಂದ್ರೀಕರಿಸಿದರು. ಗುಜರಾತ್, ಗೋವಾ, ಪಂಜಾಬ್, ಹಿಮಾಚಲ ಪ್ರದೇಶ, ಹರಿಯಾಣದಂತಹ ರಾಜ್ಯಗಳ ಕಡೆಗೆ ದೃಷ್ಟಿ ನೆಟ್ಟರು. ಪರಿಣಾಮವಾಗಿ, ದೆಹಲಿ ಸರ್ಕಾರದ ಆಡಳಿತದಲ್ಲಿ ಅವರ ಹಿಡಿತ ಕಡಿಮೆಯಾಯಿತು. 2020ರಲ್ಲಿ ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಐದೇ ಸ್ಥಾನಗಳನ್ನು ಗೆದ್ದರೂ ಶೇ 12ರಷ್ಟು ಮತಗಳನ್ನು ಪಡೆಯಿತು. ಅದಾದ ಸ್ವಲ್ಪ ಸಮಯದಲ್ಲೇ ಅಬಕಾರಿ ನೀತಿ ಹಗರಣದ ತನಿಖೆಗೆ ದೆಹಲಿ ಲೆಫ್ಟಿನೆಂಟ್ ಗವರ್ನರ್ ಆದೇಶಿಸಿದರು. ಅಲ್ಲಿಂದಲೇ ಕೇಜ್ರಿವಾಲ್ ಪಕ್ಷದ ಇಳಿಹಾದಿ ಆರಂಭವಾಯಿತು.

ಇತ್ತೀಚಿನ ವರ್ಷಗಳಲ್ಲಿ ದೆಹಲಿ ರಾಜಕಾರಣದಲ್ಲಿ ಮೂರು ಮುಖ್ಯ ಪಕ್ಷಗಳು ಏಳುಬೀಳುಗಳನ್ನು ಕಂಡಿವೆ. ಕಾಂಗ್ರೆಸ್ ಪತನದ ಲಾಭವನ್ನು ಎಎಪಿ ಹಾಗೂ ಬಿಜೆಪಿ ಪಡೆದುಕೊಂಡಿದ್ದವು. ಈ ಸಲ ಎಎಪಿಯ ಜೋಳಿಗೆಯಲ್ಲಿದ್ದ ಒಂದಷ್ಟು ಮತಗಳನ್ನು ಕಾಂಗ್ರೆಸ್ ಕಸಿದುಕೊಂಡಿದೆ. ಎಎಪಿಯ ಆಡಳಿತ ವಿರೋಧಿ ಅಲೆಯ ಭರಪೂರ ಲಾಭ ಪಡೆದ ಬಿಜೆಪಿಯು ಯಶಸ್ಸಿನ ಭಾರಿ ಅಲೆಯಲ್ಲಿ ತೇಲಿದೆ.

ಕೆನರಾ ಬ್ಯಾಂಕ್‌ನ ಮುಖ್ಯ ಅರ್ಥಶಾಸ್ತ್ರಜ್ಞರಾಗಿ ಮಾಧವನ್‌ಕುಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಧವನ್‌ಕುಟ್ಟಿ ಜಿ. ಅವರನ್ನು ಮುಖ್ಯ ಅರ್ಥಶಾಸ್ತ್ರಜ್ಞರನ್ನಾಗಿ ಕೆನರಾ ಬ್ಯಾಂಕ್ ನೇಮಿಸಿದೆ.

2025ರ ಜನವರಿಯಿಂದ ನೇಮಕಾತಿ ಜಾರಿಗೆ ಬರಲಿದೆ. ಶಿಕ್ಷಣ, ಹಣಕಾಸು ವಲಯದಲ್ಲಿ 2 ದಶಕಕ್ಕೂ ಹೆಚ್ಚು ಅನುಭವವನ್ನು ಮಾಧವನ್‌ಕುಟ್ಟಿ ಹೊಂದಿದ್ದಾರೆ. ಕೆನರಾ ಬ್ಯಾಂಕ್‌ಗೆ ಸೇರುವ ಮೊದಲು ಇವರು ಬ್ಯಾಂಕ್ ಆಫ್ ಇಂಡಿಯಾ, ಆದಿತ್ಯಾ ಬಿರ್ಲಾ ಸಮೂಹ, ಟೈಮ್ಸ್ ಸಮೂಹದಲ್ಲಿ ಹಿರಿಯ ಅರ್ಥಶಾಸ್ತ್ರಜ್ಞರಾಗಿ ಕೆಲಸ ಮಾಡಿದ್ದರು.

ಬ್ಯುಸಿನೆಸ್ ಎಕನಾಮಿಕ್ಸ್ ವಿಷಯದಲ್ಲಿ ಸ್ನಾತಕೋತ್ತರ ಪದವಿ ಮತ್ತು ಇಂಟರ್‌ನ್ಯಾಷನಲ್ ಎಕನಾಮಿಕ್ಸ್‌ನಲ್ಲಿ ಡಾಕ್ಟರೇಟ್ ಪಡೆದಿದ್ದಾರೆ.

ಆರ್ಥಿಕತೆಯ ಬಗ್ಗೆ ಅಪಾರ ಜ್ಞಾನ ಹೊಂದಿರುವ ಮಾಧವನ್‌ಕುಟ್ಟಿ ಅವರು ದೇಶೀಯ, ಜಾಗತಿಕ ಆರ್ಥಿಕತೆ ಮತ್ತು ಹಣಕಾಸು ವಲಯದ ಬೆಳವಣಿಗೆಗಳ ಬಗ್ಗೆ ಆಡಳಿತ ಮಂಡಳಿಗೆ ಸಲಹೆ ನೀಡಲಿದ್ದಾರೆ. ಬ್ಯಾಂಕ್‌ನ ಆರ್ಥಿಕತೆಯ ಮುನ್ನೋಟ ಮತ್ತು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಇವರು ಪ್ರಮುಖ ಪಾತ್ರ ವಹಿಸಲಿದ್ದಾರೆ ಎಂದು ಬ್ಯಾಂಕ್ ತಿಳಿಸಿದೆ.

ಐಒಸಿ ಲಾಭ ಇಳಿಕೆ

ನವದೆಹಲಿ (ಪಿಟಿಐ): 2024–25ರ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಭಾರತೀಯ ತೈಲ ನಿಗಮದ (ಐಒಸಿ) ನಿವ್ವಳ ಲಾಭದಲ್ಲಿ ಶೇ 23ರಷ್ಟು ಇಳಿಕೆಯಾಗಿದೆ.

2023–24ರ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹1,584 ಕೋಟಿ ನಿವ್ವಳ ಲಾಭ ಗಳಿಸಿತ್ತು. ಅದು ಈ ಬಾರಿ ₹1,221 ಕೋಟಿ ಆಗಿದೆ. ತೆರಿಗೆ, ಬಡ್ಡಿ, ಸಾಲ ತೀರುವಳಿ (ಇಬಿಐಟಿಡಿಎ) ನಂತರದ ಆದಾಯವು ₹2,321 ಕೋಟಿಯಾಗಿದೆ ಎಂದು ಕಂಪನಿ ತಿಳಿಸಿದೆ.

ಪ್ರತಿ ಷೇರಿಗೆ ₹7 ಮಧ್ಯಂತರ ಲಾಭಾಂಶ ನೀಡಲು ಮಂಡಳಿ ಶಿಫಾರಸು ಮಾಡಿದೆ.

ಸಂಕ್ಷಿಪ್ತ ಸುದ್ದಿ

ರೆಪೊ ದರ ಇಳಿಕೆ ಮನೆಗಳಿಗೆ ಹೆಚ್ಚಲಿದೆ ಬೇಡಿಕೆ

ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರ ಇಳಿಕೆ ಮಾಡಿದ್ದರಿಂದ ಮನೆಗಳಿಗೆ ಬೇಡಿಕೆ ಹೆಚ್ಚಲಿದೆ ಎಂದು ರಿಯಲ್ ಎಸ್ಟೇಟ್ ಡೆವಲಪರ್‌ಗಳು ಹೇಳಿದ್ದಾರೆ.

ಮನೆಗಳ ಖರೀದಿಗೆ ಸಾಲ ಮಾಡುವವರಿಗೆ ರೆಪೊ ದರ ಇಳಿಕೆಯಿಂದ ಅನುಕೂಲ ಆಗಲಿದೆ. ಜೊತೆಗೆ ವಸತಿ ಯೋಜನೆಗಳ ಮೇಲೆ ಹೂಡಿಕೆ ಮಾಡುವವರಿಗೆ ಉತ್ತೇಜನ ನೀಡಲಿದೆ ಎಂದು ಹೇಳಿದ್ದಾರೆ.

‘ಶೇ 0.25ರಷ್ಟು ರೆಪೊ ದರ ಇಳಿಕೆಯು ರಿಯಲ್ ಎಸ್ಟೇಟ್ ವಲಯದ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ. ಇದು ಗೃಹ ಸಾಲಗಳನ್ನು ಕೈಗೆಟಕುವಂತೆ ಮಾಡಲಿದ್ದು, ಗೃಹ ಸಾಲದ ಮೇಲಿನ ಬಡ್ಡಿ ದರವನ್ನು ಕಡಿಮೆ ಮಾಡಲಿದೆ. ಜೊತೆಗೆ ಮನೆಗಳಿಗೆ ಬೇಡಿಕೆ ಹೆಚ್ಚಲಿದೆ’ ಎಂದು ನರೆಡ್ಕೊ ರಾಷ್ಟ್ರೀಯ ಅಧ್ಯಕ್ಷ ಜಿ.ಹರಿಬಾಬು ಹೇಳಿದ್ದಾರೆ.

ಮಹೀಂದ್ರಗೆ ₹3,181 ಕೋಟಿ ಲಾಭ

ಮುಂಬೈ (ಪಿಟಿಐ): 2024–25ರ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ವಾಹನ ತಯಾರಿಕ ಕಂಪನಿ ಮಹೀಂದ್ರ ಆ್ಯಂಡ್ ಮಹೀಂದ್ರ, ₹3,181 ಕೋಟಿ ತೆರಿಗೆ ನಂತರದ ಲಾಭ (ಪಿಎಟಿ) ಗಳಿಸಿದೆ.

ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹2,658 ಕೋಟಿ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 20ರಷ್ಟು ಏರಿಕೆಯಾಗಿದೆ ಎಂದು ಕಂಪನಿ ತಿಳಿಸಿದೆ. ವರಮಾನದಲ್ಲಿ ಶೇ 17ರಷ್ಟು ಹೆಚ್ಚಳವಾಗಿದ್ದು, ₹41,470 ಕೋಟಿ ಗಳಿಸಿದೆ. ಪ್ರಯಾಣಿಕ ವಾಹನಗಳ ಮಾರಾಟವು 2.45 ಲಕ್ಷವಾಗಿದೆ. 1.42 ಲಕ್ಷ ಯುಟಿಲಿಟಿ ವಾಹನಗಳು ಮಾರಾಟವಾಗಿವೆ ಎಂದು ತಿಳಿಸಿದೆ.

ಮಾರುಕಟ್ಟೆ ಶಕ್ತಿಗಳಿಂದ ರೂಪಾಯಿ ಮೌಲ್ಯ ನಿರ್ಧಾರ: ಮಲ್ಹೋತ್ರಾ

ನವದೆಹಲಿ (ಪಿಟಿಐ): ‘ಮಾರುಕಟ್ಟೆ ಶಕ್ತಿಗಳು ರೂಪಾಯಿ ಮೌಲ್ಯವನ್ನು ನಿರ್ಧರಿಸುತ್ತವೆ. ದಿನನಿತ್ಯದ ಕರೆನ್ಸಿ ಮೌಲ್ಯದ ಏರಿಳಿತದ ಬಗ್ಗೆ ಆರ್‌ಬಿಐ ಚಿಂತಿಸುವುದಿಲ್ಲ’ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಸಂಜಯ್ ಮಲ್ಹೋತ್ರಾ ಹೇಳಿದ್ದಾರೆ.

ಮಧ್ಯಮದಿಂದ ದೀರ್ಘಾವಧಿಯ ರೂಪಾಯಿ ಮೌಲ್ಯದ ಮೇಲೆ ಆರ್‌ಬಿಐ ಗಮನಹರಿಸುತ್ತದೆ. ಡಾಲರ್ ಮೌಲ್ಯ ಏರಿಕೆಯಿಂದ ರೂಪಾಯಿ ಇಳಿಕೆ ಯಾಗುತ್ತಿದೆ. ಶೇ 5ರಷ್ಟು ಇಳಿಕೆಯಾದರೆ ಅದು ಹಣದುಬ್ಬರ ಮೇಲೆ ಪರಿಣಾಮ ಬೀರಲಿದೆ ಎಂದು ಹೇಳಿದ್ದಾರೆ.

ಮುಂದಿನ ಹಣಕಾಸು ವರ್ಷದ ಬೆಳವಣಿಗೆ ಮತ್ತು ಹಣದುಬ್ಬರದ ಅಂದಾಜನ್ನು ರೂಪಿಸುವಾಗ ಆರ್‌ಬಿಐ ಪ್ರಸ್ತುತ ರೂಪಾಯಿ-ಡಾಲರ್ ದರವನ್ನು ಗಣನೆಗೆ ತೆಗೆದುಕೊಂಡಿದೆ ಎಂದು ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100ಕ್ಕೆ ₹495
12 ಕ್ಕೆ ₹66
ಮೈಸೂರು
100ಕ್ಕೆ ₹497

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹422-655
ದ್ವಿತಳಿ (ಬಿ.ವಿ) ₹400-816

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹188
ಆರ್‌ಎಸ್‌ಎಸ್-5 ₹183
ಗುಡ್ ಲಾಟ್ ₹178
(ಪ್ರತಿ ಕೆ.ಜಿಗೆ)

ಫೆಬ್ರುವರಿ 11ರಿಂದ 14ರವರೆಗೆ ಬೆಂಗಳೂರಿನಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶ

‘ಇನ್‌ವೆಸ್ಟ್ ಕರ್ನಾಟಕ’ಕ್ಕೆ ಸಚಿವರ ದಂಡು

ಪ್ರಜಾವಾಣಿ ವಾರ್ತೆ



ಎಂ.ಬಿ.ಪಾಟೀಲ

ಬೆಂಗಳೂರು: ಅರಮನೆ ಮೈದಾನದಲ್ಲಿ ಇದೇ 11ರಿಂದ 14ರವರೆಗೆ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶ ‘ಇನ್‌ವೆಸ್ಟ್ ಕರ್ನಾಟಕ’ವನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಉದ್ಘಾಟಿಸಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ‘ಅಂದು ಸಂಜೆ 4ಕ್ಕೆ ರಾಜನಾಥ್ ಸಿಂಗ್ ಸಮಾವೇಶಕ್ಕೆ ಚಾಲನೆ ನೀಡುವರು. ರಾಜ್ಯಪಾಲ ಥಾವರಚಂದ್ ಗೆಹಲೋತ್, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಭಾಗವಹಿಸುವರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆ ವಹಿಸುವರು ಎಂದರು.

ನಾಲ್ಕು ದಿನಗಳ ಈ ಸಮಾವೇಶದಲ್ಲಿ ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ, ಎಚ್‌.ಡಿ. ಕುಮಾರಸ್ವಾಮಿ, ವಿ. ಸೋಮಣ್ಣ, ಶೋಭಾ ಕರಂದ್ಲಾಜೆ, ಪೀಯೂಷ್ ಗೋಯಲ್, ನಿರ್ಮಲಾ ಸೀತಾರಾಮನ್, ಅಶ್ವಿನಿ ವೈಷ್ಣವ್ ಭಾಗವಹಿಸುವರು. ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಸಮಾರೋಪದಲ್ಲಿ ಉಪಸ್ಥಿತರಿರುವರು ಎಂದು ಮಾಹಿತಿ ನೀಡಿದರು.

2025-30ನೇ ಸಾಲಿನ ನೂತನ ಕೈಗಾರಿಕಾ ನೀತಿ, ಕೈಗಾರಿಕಾ ಯೋಜನೆಗಳಿಗೆ ತ್ವರಿತ ಅನುಮೋದನೆ ನೀಡಲು ಏಕಗವಾಕ್ಷಿ ಪೋರ್ಟಲ್ ಬಿಡುಗಡೆ ಮಾಡಲಾಗುವುದು. ಫೆ.12ರಂದು ರಾಜ್ಯದ ಆರ್ಥಿಕ ಮತ್ತು ಕೈಗಾರಿಕಾ ಬೆಳವಣಿಗೆಗೆ ಕೊಡುಗೆ ನೀಡುತ್ತಿರುವ 14 ಉದ್ಯಮಗಳ ಮುಖ್ಯಸ್ಥರನ್ನು ಪುರಸ್ಕರಿಸಲಾಗುವುದು. 35 ಸಣ್ಣ ಮತ್ತು ಮಧ್ಯಮ ಸ್ತರದ ಕೈಗಾರಿಕೆಗಳು, ಜಿಲ್ಲಾ ಮಟ್ಟದಲ್ಲಿ ಅತ್ಯುತ್ತಮ ಸಾಧನೆ ಮಾಡುತ್ತಿರುವ ಮಹಿಳಾ ಉದ್ಯಮಿಗಳು, ವಲಯವಾರು ಕೈಗಾರಿಕಾ ಉತ್ಕೃಷ್ಟತೆ ಸಾಧಿಸಿರುವ ಉದ್ಯಮಗಳನ್ನು ಫೆ.13ರಂದು ಸನ್ಮಾನಿಸಲಾಗುವುದು. ‘ವೆಂಚುರೈಸ್’ ಉಪಕ್ರಮದಡಿ ಒಟ್ಟು ₹2.63 ಕೋಟಿ ಬಹುಮಾನ ನೀಡಲಾಗುತ್ತಿದೆ ಎಂದರು.

‘19 ರಾಷ್ಟ್ರಗಳ ಪ್ರತಿನಿಧಿಗಳು ಭಾಗವಹಿಸ ಲಿರುವ ಈ ಸಮಾವೇಶದಲ್ಲಿ ಭವಿಷ್ಯದ ತಯಾರಿಕಾ ವಲಯ, ಸಾರಿಗೆ ಮತ್ತು ಪರಿಸರಸ್ನೇಹಿ ಇಂಧನ ಉತ್ಪಾದನೆ ವಲಯಗಳಿಗೆ ವಿಶೇಷ ಗಮನ ಕೊಡ ಲಾಗುವುದು. 60ಕ್ಕೂ ಹೆಚ್ಚು ನವೋದ್ಯಮ ಕಂಪನಿಗಳು ಅತ್ಯಾಧುನಿಕ ತಂತ್ರಜ್ಞಾನ, ಪರಿಹಾರೋಪಾಯಗಳನ್ನು ಪ್ರದರ್ಶಿಸಲಿವೆ’ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, ಕೆಐಎಡಿಬಿ ಸಿಇಒ ಮಹೇಶ್ ಉಪಸ್ಥಿತರಿದ್ದರು.

ವಿಮಾನ ನಿಲ್ದಾಣ: ಎರಡು ಸ್ಥಳ ಅಂತಿಮ

ಬೆಂಗಳೂರು: ‘ಬೆಂಗಳೂರು ಸಮೀಪ ಮತ್ತೊಂದು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪನೆಗೆ ಎರಡು ಸ್ಥಳಗಳನ್ನು ಅಂತಿಮಗೊಳಿಸಲಾಗಿದ್ದು, ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಇದೇ ತಿಂಗಳು ಪ್ರಸ್ತಾವ ಸಲ್ಲಿಸಲಾಗುವುದು’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ ಹಾಗೂ ಕೇಂದ್ರ ಸರ್ಕಾರ ಮಾಡಿಕೊಂಡ ಒಪ್ಪಂದದ ಪ್ರಕಾರ, ಕೆಂಪೇಗೌಡ ವಿಮಾನ ನಿಲ್ದಾಣದ 150 ಕಿ.ಮೀ. ವ್ಯಾಪ್ತಿಯಲ್ಲಿ 2033ರವರೆಗೆ ಯಾವುದೇ ಹೊಸ ವಿಮಾನ ನಿಲ್ದಾಣ ನಿರ್ಮಿಸುವಂತಿಲ್ಲ. ಆದರೆ, ಭೂಸ್ವಾಧೀನ ಪ್ರಕ್ರಿಯೆ, ಅನುಮತಿ, ವಿಮಾನ ನಿಲ್ದಾಣ ಕಾಮಗಾರಿಗೆ ಸಾಕಷ್ಟು ಸಮಯ ಬೇಕಾಗುತ್ತದೆ. ಈಗಲೇ ಪ್ರಕ್ರಿಯೆ ಆರಂಭಿಸಿದರೆ 2033ರ ವೇಳೆಗೆ ವಿಮಾನ ನಿಲ್ದಾಣದ ಕಾರ್ಯಾಚರಣೆ ಆರಂಭಿಸಬಹುದು. ಹೀಗಾಗಿ, ಕೆಲವು ತಿಂಗಳ ಹಿಂದೆಯೇ ಸ್ಥಳ ಗುರುತಿಸುವ ಕೆಲಸ ಆರಂಭಿಸಲಾಗಿತ್ತು’ ಎಂದರು.

‘ಉದ್ಯಮಿಗಳಿಗೆ, ಪ್ರವಾಸಿಗರಿಗೆ, ಸಾರ್ವಜನಿಕರಿಗೆ ಅನುಕೂಲವಾಗುವಂತಹ ಸ್ಥಳದಲ್ಲೇ ವಿಮಾನ ನಿಲ್ದಾಣ ನಿರ್ಮಿಸಬೇಕು. ವಿಮಾನ ನಿಲ್ದಾಣ ನಿರ್ಮಾಣಕ್ಕೆ ಹೂಡಿಕೆ ಮಾಡುವ ಕಂಪನಿಗೂ ಅನುಕೂಲವಾಗಬೇಕು. ಹೀಗಾಗಿ, ಬೆಂಗಳೂರಿಂದ 50 ಕಿ.ಮೀಗೂ ಹೆಚ್ಚು ದೂರ ಇರಬಾರದು ಎಂಬುದು ಸರ್ಕಾರದ ನಿಲುವು. ಅಂತಿಮವಾಗಿ ಯಾವ ಸ್ಥಳ ಸೂಕ್ತ ಎನ್ನುವುದನ್ನು ವಿಮಾನ ನಿಲ್ದಾಣ ಪ್ರಾಧಿಕಾರ ಮತ್ತು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ ತೀರ್ಮಾನಿಸುತ್ತವೆ’ ಎಂದು ಹೇಳಿದರು.

ಬೆಂಗಳೂರಿನ ಎರಡನೇ ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣಕ್ಕಾಗಿ ಏಳು ಸ್ಥಳಗಳಲ್ಲಿ ಪ್ರಾಥಮಿಕ ಪರಿಶೀಲನಾ ಕಾರ್ಯ ನಡೆಸಲಾಗಿತ್ತು. ಮೂಲಗಳ ಪ್ರಕಾರ ಅಂತಿಮವಾಗಿ ನೆಲಮಂಗಲ, ಕನಕಪುರ ರಸ್ತೆಯ ಬಳಿ ಸ್ಥಳ ಗುರುತಿಸಲಾಗಿದೆ.

ದೇಶದ ಪ್ರಗತಿಗೆ ನಿರಂತರ ಕೆಲಸ: ನಿರ್ಮಲಾ

ನವದೆಹಲಿ (ಪಿಟಿಐ): ‘ಬಜೆಟ್‌ನಲ್ಲಿ ಘೋಷಿಸಲಾದ ವಿತ್ತೀಯ ಮತ್ತು ಹಣಕಾಸಿನ ಕ್ರಮಗಳು ಜನರ ಖರೀದಿ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಮತ್ತು ಖಾಸಗಿ ಹೂಡಿಕೆಗೆ ಉತ್ತೇಜನ ನೀಡಲು ಸಹಾಯ ಮಾಡಲಿದೆ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಸರ್ಕಾರ ಮತ್ತು ಆರ್‌ಬಿಐ ದೇಶದ ಪ್ರಗತಿ ಹೆಚ್ಚಿಸಲು ಮತ್ತು ಹಣದುಬ್ಬರವನ್ನು ನಿಯಂತ್ರಿಸಲು ನಿರಂತರವಾಗಿ ಕೆಲಸ ಮಾಡಲಿವೆ. ಇವೆರಡರ ನಡುವೆ (ಸರ್ಕಾರ ಮತ್ತು ಆರ್‌ಬಿಐ) ಉತ್ತಮ ಸಮನ್ವಯವಿದೆ ಎಂದು ಹೇಳಿದರು.

ಪ್ರಸಕ್ತ ವರ್ಷದ ಏಪ್ರಿಲ್-ಜೂನ್‌ಗಾಗಿ ಗ್ರಾಹಕ ಸರಕುಗಳಿಗೆ (ಎಫ್‌ಎಂಸಿಜಿ) ಬೇಡಿಕೆಗಳು ಈಗಾಗಲೇ ಸಲ್ಲಿಕೆ ಆಗಿವೆ. ಇದು ಗ್ರಾಹಕರಿಂದ ಹೆಚ್ಚುತ್ತಿರುವ ಬೇಡಿಕೆಯನ್ನು ತೋರಿಸುತ್ತದೆ ಎಂದು ಶನಿವಾರ ನಡೆದ ಆರ್‌ಬಿಐನ ಮಂಡಳಿಯ ಸಭೆ ನಂತರ ಮಾಧ್ಯಮಗಳ ಜೊತೆ ಅವರು ಮಾತನಾಡಿದರು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ಆರ್‌ಬಿಐನ ಆಡಳಿತ ಮಂಡಳಿಯ ನಿರ್ದೇಶಕರ ಸಭೆ ನಡೆಯಿತು. ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಇತರರಿದ್ದರು —ಪಿಟಿಐ ಚಿತ್ರ

ನಿರ್ಮಲಾ ಸೀತಾರಾಮನ್ ಅವರು ಫೆಬ್ರುವರಿ 1ರಂದು ಮಂಡಿಸಿದ 2025–26ನೇ ಆರ್ಥಿಕ ವರ್ಷದ ಬಜೆಟ್‌ನಲ್ಲಿ ಮಧ್ಯಮ ವರ್ಗದ ಜನರಿಗೆ ತೆರಿಗೆ ಹೊರೆ ಕಡಿಮೆ ಮಾಡಲು ₹12.75 ಲಕ್ಷದವರೆಗೆ ಆದಾಯಕ್ಕೆ ತೆರಿಗೆ ಇಲ್ಲ ಎಂಬ ನಿರ್ಧಾರ ಪ್ರಕಟಿಸಿದ್ದರು. ಇದರಿಂದ 1 ಕೋಟಿ ತೆರಿಗೆದಾರರಿಗೆ ಅನುಕೂಲ ಆಗಲಿದೆ ಎಂದು ಹೇಳಿದ್ದರು.

ಶುಕ್ರವಾರ ನಡೆದ ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ ಸಭೆಯು, ರೆಪೊ ದರದಲ್ಲಿ ಶೇ 0.25ರಷ್ಟು ಕಡಿತಗೊಳಿಸಿತ್ತು.

ಮುಂದಿನ ವಾರ ಆದಾಯ ತೆರಿಗೆ ಮಸೂದೆ ಮಂಡನೆ

‘ಹೊಸ ಆದಾಯ ತೆರಿಗೆ ಮಸೂದೆಯನ್ನು ಲೋಕಸಭೆಯಲ್ಲಿ ಮುಂದಿನ ವಾರ ಮಂಡನೆ ಮಾಡುವ ಸಾಧ್ಯತೆ ಇದೆ’ ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ರಾಜ್ಯಸಭೆಯಲ್ಲಿ ಮಂಡಿಸಿದ ಬಳಿಕ, ಮಸೂದೆಯನ್ನು ಸಂಸದೀಯ ಸ್ಥಾಯಿ ಸಮಿತಿ ಪರಿಶೀಲನೆಗೆ ಕಳುಹಿಸಲಾಗುವುದು. ಸಂಸದೀಯ ಸಮಿತಿಯು ಶಿಫಾರಸು ಮಾಡಿದ ನಂತರ ಮಸೂದೆ ಮತ್ತೆ ಸಂಪುಟಕ್ಕೆ ಹೋಗುತ್ತದೆ. ಸಚಿವ ಸಂಪುಟದ ಒಪ್ಪಿಗೆ ಬಳಿಕ ಮತ್ತೆ ಸಂಸತ್ತಿನಲ್ಲಿ ಮಂಡಿಸಲಾಗುವುದು ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯು ಮಸೂದೆಗೆ ಅನುಮೋದನೆ ನೀಡಿತ್ತು. ಈ ಮೂಲಕ ಆರು ದಶಕದಷ್ಟು ಹಳೆಯದಾದ ಆದಾಯ ತೆರಿಗೆ ಕಾಯ್ದೆಯ ಬದಲಾವಣೆಗೆ ಸರ್ಕಾರ ಮುಂದಾಗಿದೆ.

ರಾಹುಲ್‌ಗಾಂಧಿ ವಿರುದ್ಧ ಎಫ್‌ಐಆರ್

ಭುವನೇಶ್ವರ (ಪಿಟಿಐ): ‘ದೇಶದ್ರೋಹ’ದ ಹೇಳಿಕೆ ನೀಡಿದ ಆರೋಪದ ಮೇಲೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಬಿಜೆಪಿ ಯುವ ಮೋರ್ಚಾ, ಆರ್‌ಎಸ್‌ಎಸ್ ಹಾಗೂ ಬಜರಂಗ ದಳದ ಸದಸ್ಯರು ಉತ್ತರ ವಲಯದ ಐಜಿಪಿ ಹಿಮಾಂಶು ಲಾಲ್ ಅವರಿಗೆ ಫೆ. 5ರಂದು ರಾಹುಲ್ ವಿರುದ್ಧ ದೂರು ನೀಡಿದ್ದು, ಇದರ ಆಧಾರದ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಬಿಎನ್‌ಎಸ್‌ನ ಸೆಕ್ಷನ್ 152, 197(1), (ಡಿ)ರಡಿ ಝೂರ್ಸುಗುಡಾ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ ಎಂದಿದ್ದಾರೆ.

ರಾಹುಲ್ ಗಾಂಧಿ ಅವರು ಉದ್ದೇಶಪೂರ್ವಕವಾಗಿ ದೇಶದ್ರೋಹದ ಹೇಳಿಕೆಗಳನ್ನು ನೀಡುತ್ತಿದ್ದು, ಇದರಿಂದ ಪ್ರತಿಯೊಬ್ಬ ಭಾರತೀಯನಿಗೂ ನೋವುಂಟಾಗುತ್ತಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಟ್ರಂಪ್, ಮಸ್ಕ್ ಕ್ರಮಕ್ಕೆ ನ್ಯಾಯಾಲಯ ತಡೆ

ವಾಷಿಂಗ್ಟನ್ (ಎಪಿ): ಅಂತರರಾಷ್ಟ್ರೀಯ ಅಭಿವೃದ್ಧಿಗಾಗಿನ ಅಮೆರಿಕ ಏಜೆನ್ಸಿಯನ್ನು (ಯುಎಸ್ ಏಡ್) ಮುಚ್ಚುವ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಅವರ ಜೊತೆಗಾರ ಎಲಾನ್ ಮಸ್ಕ್ ಅವರ ನಡೆಗೆ ನ್ಯಾಯಾಲಯದಿಂದ ತಡೆ ಬಂದಿದೆ.

ಏಜೆನ್ಸಿಯ ನೌಕರರನ್ನು ಕೆಲಸದಿಂದ ತೆಗೆಯುವ ಆಲೋಚನೆಗೆ ಜಿಲ್ಲಾ ನ್ಯಾಯಾಧೀಶ ಕಾರ್ಲ್ ನಿಕೊಲ್ಸ್ ಅವರು ಶುಕ್ರವಾರ ತಡೆ ನೀಡಿದ್ದಾರೆ.

ಬೇರೆ ಬೇರೆ ದೇಶಗಳಲ್ಲಿ ಕೆಲಸ ಮಾಡುತ್ತಿರುವ ಏಜೆನ್ಸಿಯ ಸಹಸ್ರಾರು ನೌಕರರಿಗೆ ಮತ್ತು ಅವರ ಕುಟುಂಬದ ಸದಸ್ಯರಿಗೆ ಸರ್ಕಾರಿ ವೆಚ್ಚದಲ್ಲಿ ವಾಪಸ್ ಬರುವುದಕ್ಕೆ ಮೂವತ್ತು ದಿನ ಮಾತ್ರ ಅವಕಾಶ ಇರುತ್ತದೆ ಎಂದು ಹೇಳುವ ಆದೇಶಕ್ಕೆ ಕೂಡ ನ್ಯಾಯಾಧೀಶರು ತಡೆ ನೀಡಿದ್ದಾರೆ.

ರಜೌರಿ: ಸೈನಿಕರ ಮೇಲೆ ಗುಂಡಿನ ದಾಳಿ

ರಜೌರಿ/ಜಮ್ಮು (ಪಿಟಿಐ): ‘ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯ ಗಡಿ ನಿಯಂತ್ರಣ ರೇಖೆಯಲ್ಲಿ (ಎಲ್‌ಒಸಿ) ಗಸ್ತು ತಿರುಗುತ್ತಿದ್ದ ಭಾರತೀಯ ಸೈನಿಕರ ಮೇಲೆ ಶನಿವಾರ ಗುಂಡಿನ ದಾಳಿ ನಡೆದಿದೆ. ಇದಕ್ಕೆ ಸೇನೆ ಕಡೆಯಿಂದ ತಕ್ಕ ಪ್ರತ್ಯುತ್ತರ ನೀಡಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದರು.

ದಾಳಿ ವೇಳೆ ಸೈನಿಕರಿಗೆ ಗಾಯಗಳಾಗಿಲ್ಲ. ಆದರೂ, ಕಟ್ಟುನಿಟ್ಟಾದ ಗಸ್ತು ನಡೆಸುವಂತೆ ಸೈನಿಕರಿಗೆ ಸೂಚನೆ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಪ್ರತಿ ಕ್ವಿಂಟಲ್ ತೊಗರಿಗೆ ₹450 ಪ್ರೋತ್ಸಾಹಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಆರ್ಥಿಕ ವರ್ಷದಲ್ಲಿ ಪ್ರತಿ ಕ್ವಿಂಟಲ್ ತೊಗರಿಗೆ ರಾಜ್ಯ ಸರ್ಕಾರ ₹450 ಪ್ರೋತ್ಸಾಹಧನ ಘೋಷಿಸಿದೆ.

2024–25ನೇ ಸಾಲಿನಲ್ಲಿ ಪ್ರತಿ ಕ್ವಿಂಟಲ್ ತೊಗರಿಗೆ ಕೇಂದ್ರ ಸರ್ಕಾರವು ₹7,550 ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಘೋಷಿಸಿದೆ. ರಾಜ್ಯ ಸರ್ಕಾರವು ಘೋಷಿಸಿರುವ ಪ್ರೋತ್ಸಾಹ ಧನವೂ ಸೇರಿ ತೊಗರಿ ಬೆಳೆಗಾರರಿಗೆ ₹8,000 ದೊರೆಯಲಿದೆ.

ಪ್ರೋತ್ಸಾಹಧನಕ್ಕೆ ಅವಶ್ಯವಿರುವ ಅನುದಾನವನ್ನು ಆವರ್ತ ನಿಧಿಯಿಂದ ಬಳಸಲು ಆರ್ಥಿಕ ಇಲಾಖೆ ಅನುಮೋದನೆ ನೀಡಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

7ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಎಂ.ಸಿ. ಗೌರಮ್ಮನವರು
(ಜನನ: 07-12-1956 – ಮರಣ: 09-02-2018)
ನಿಮ್ಮ ನೆನಪು ಸದಾ ನಮ್ಮಲ್ಲಿ ಅಚ್ಚಳಿಯದೆ ಉಳಿದಿದೆ.
ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ:
ಮಗ: ಉದಯ್ ಎನ್, ಸರಳಶ್ರೀ ಎನ್, ಮಗಳು: ಉಷಾ ಎನ್, ರಮೇಶ್ ಬಾಬು ಆರ್. ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

ಏಳನೇ ವರ್ಷದ ಪುಣ್ಯಸ್ಮರಣೆ

09–02–2025
ನಮ್ಮೆಲ್ಲರಿಗೂ ಆದರ್ಶ ಹಾಗೂ ಸ್ಫೂರ್ತಿಯ ಚಿಲುಮೆಯಾಗಿದ್ದ ಪ್ರೀತಿಯ
ದಿ. ಎಂ. ಪುಟ್ಟಪ್ಪನವರ
ಏಳನೇ ವರ್ಷದ ಪುಣ್ಯಸ್ಮರಣೆ.
ನಿಮ್ಮ ಆಶೀರ್ವಾದವೇ ನಮಗೆ ಶ್ರೀರಕ್ಷೆ.
ಇಂತಿ: ಡಾ. ಗೋಪಾಲಕೃಷ್ಣ ಪಿ. & ಪಿ. ಕುಮಾರಸ್ವಾಮಿ ಮತ್ತು ಕುಟುಂಬದವರು
ಮೊ. 9980028888, 9845173106

LOOKING FOR JOB OPPORTUNITY — Refer Classifieds on Wednesday

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಅನುಭವವುಳ್ಳ ವಾಹನ ಚಾಲಕರು ಬೇಕಾಗಿದ್ದಾರೆ. Heavy_vehicle ಲೈಸನ್ಸ್ ಹೊಂದಿರಬೇಕು. ಸಂಪರ್ಕಿಸಿ:ಗಾಯತ್ರಿ ಅಸೋಸಿಯೆಟ್ಸ್ ಬೈರತಿ, ಬೆಂಗಳೂರು_560077. 8453353646/ 6362872796/ 9448488536/ 9844083318.

Multiple Vacancy

ಅಡುಗೆ ಕೆಲಸ ಹಾಗೂ ಚಾಲಕರಾಗಿ ಕೆಲಸ ಮಾಡಲು ಗಂಡ- ಹೆಂಡತಿ ಕುಟುಂಬ ಬೇಕಾಗಿದ್ದಾರೆ. 3 ಜನರ ಕುಟುಂಬಕ್ಕೆ ಉತ್ತಮ ಸಂಬಳ, ಊಟ- ವಸತಿ ಸೌಕರ್ಯ ನೀಡಲಾಗುವುದು. ಪೊಲೀಸ್ ಪರಿಶೀಲನೆ ಕಡ್ಡಾಯ. ಸಂಪರ್ಕಿಸಿ: 9741900909

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಪುತ್ತೂರಿನಲ್ಲಿರುವ ಆಯುರ್ವೇದಿಕ್ ಕಂಪೆನಿಗೆ ಯುವಕ ಯುವತಿಯರು ಬೇಕಾಗಿದ್ದಾರೆ. ಸಂಬಳ 12000–20000/–, ಊಟ, ವಸತಿ ಉಚಿತ. ಸಂಪರ್ಕಿಸಿರಿ: 9945964988, 9900791095

ರಿಯಲ್ ಎಸ್ಟೇಟ್ ಬೈಯಿಂಗ್

Commercial Land

General

COMMERCIAL 1 Acre Land Near kunigal Yadiyuru attached to SH 84 Rs 3 Lakhs per Gunta contact 8296944200

ಪ್ರವಾಸ

Travel

10/3/25 ರಿಂದ 15ದಿನಗಳು ರೈಲು ಮತ್ತು ವಿಮಾನದಲ್ಲಿ ಜೈಪುರ, ಜೈಸಲ್ಮೇರ್, ಪಂಚದ್ವಾರಕ ಮಾತೃಗಯಾ, ಪಟೇಲ್ ಪ್ರತಿಮೆ, ನಿಷ್ಕಲಂಕ ಮಹಾದೇವ, ನಾಲ್ಕು ಜ್ಯೋತಿರ್ ಲಿಂಗಗಳ ಪ್ರವಾಸ. ಶ್ರೀ ಗಂಗಾ ಟೂರಿಸ್ಟ್- 9480253807

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 27.04.2025 30.04.2025 29.05.2025 ರಿಂದ 13/16 ದಿನಗಳ ಯುರೋಪ್ ಪ್ರವಾಸ. 07.04.2025 20.04.2025 ರಿಂದ 7/11 ದಿನಗಳ ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್. 22.03.2025 10.04.2025 ರಿಂದ 5 ದಿನಗಳ ದುಬೈ,ಅಬುದಾಬಿ. 21.04.2025 ರಿಂದ 7 ದಿನಗಳ ಭೂತಾನ್. 04.04.2025 28.04.2025 ರಿಂದ 11 ದಿನಗಳ ಕಾಶಿ,ನೇಪಾಳ,ಅಯೋಧ್ಯ. 30.04.2025 16.05.2025 ರಿಂದ 15 ದಿನಗಳ ಚಾರ್‌ಧಾಮ್. 02.04.2025 15.04.2025 ರಿಂದ 12 ದಿನಗಳ ಕಾಶ್ಮೀರ್,ವೈಷ್ಣೋದೇವಿ. 15.04.2025 28.04.2025 ರಿಂದ 12 ದಿನಗಳ ಸಿಮ್ಲಾ,ಕುಲುಮನಾಲಿ ವೈಷ್ಣೋದೇವಿ. 04.04.2025 13.04.2025 ರಿಂದ 8 ದಿನಗಳ ಕಾಶಿ ಗಯಾ,ಪ್ರಯಾಗ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

ಮಹಕುಂಭಮೇಳ 144 ವರ್ಷಕ್ಕೊಮ್ಮೆ ರಿಯಯಿತಿ ದರದಲ್ಲಿ 23/02/2025 6ದಿನ ವಿಮಾನದಲ್ಲಿ ಪ್ರಯೋಗರಾಜ್ ಕಾಶಿ`ಗಯಾ ಅಯೋಧ್ಯಾ.(ಕೆಲವೇ ಸೀಟುಗಳಿವೆ) ಪ್ರತಿ`ತಿಂಗಳು ಅಂಡಮಾನ್ ಹವಳದ್ವೀಪ ''ಶ್ರೀಸಾಯಿ`ರಾಘವೇಂದ್ರ ಟ್ರಾವೆಲ್ಸ್'' 9739847429/ 9845560219

PROPERTY CORNER

COMMERCIAL SPACE AVAILABLE FOR RENT ONLY
1) KALYANA MANTAPA 2) CORPORATE OFFICE 3) GARMENTS 4) EDUCATION INSTITUTION
BUILD AREA OF TOTAL 3 FLOOR - 21000 SQFT
PARKING AREA: 1 ACRE
FACILITIES
1. CAR PARKING
2. ELECTRICITY (85 KV)
3. LIFT
4. 17 A/C ROOMS
5. KITCHEN EQUPMENTS
6. 2000 MEMBERS VESSLS
7. GENERATOR (DG)
8 DINING TABLE SET 400 MEMBER & 600 CUSHION CHAIR
Address: Attach to Outer Ring Road, Near Indian Oil Petrol Bunk, Veerasagara Tumakuru.
Contact Deatails: 99646 18277 / 86608 53006

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಿಕ್ಕಮಗಳೂರು– 577101

(Autonomous Medical Institution, Government of Karnataka)
Phone: 08262 - 295347 Email Address: directorcims2020@gmail.com
ಸಂಖ್ಯೆ:ಸಿಮ್ಸ್/ಸರಬ/ಟೆಂಡರ್/ಪತ್ರಿಕಾ ಪ್ರಕಟಣೆ/ /2024–25 ದಿನಾಂಕ : 04–02–2025

ಇ–ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)

ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಹಾಗೂ ಅರಳಗುಪ್ಪೆ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಗೆ ಅವಶ್ಯವಿರುವ ಈ ಕೆಳಕಂಡ ವಿವಿಧ ಐಟಂಗಳನ್ನು ಸರಬರಾಜು ಮಾಡಲು ಉತ್ಪಾದಕರವರಿಂದ/ ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ–ಲಕೋಟಿ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಮತ್ತಿತ್ತರ ಪೋರ್ಟಲ್ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ https://kppp.kamataka.gov.in ವೆಬ್ ಸೈಟ್ ನಲ್ಲಿ ವೀಕ್ಷಿಸಬಹುದು.

ಕ್ರ.ಸಂ	ವಿವರಗಳು	ಟೆಂಡರ್‌ನ ಅಂದಾಜು ಮೊತ್ತ	ಅರ್ಜಿ ಸಲ್ಲಿಕೆ ಪ್ರಾರಂಭ ದಿನಾಂಕ	ಅರ್ಜಿ ಸಲ್ಲಿಕೆ ಅಂತಿಮ ದಿನಾಂಕ
1	ಸಿಮ್ಸ್ ಸಂಸ್ಥೆಗೆ ಅವಶ್ಯವಿರುವ Ride on automatic scrubber dryer ಸರಬರಾಜು ಪಡೆಯುವ ಬಗ್ಗೆ	48.00 ಲಕ್ಷಗಳು (ಇ.ಎಂ.ಡಿ ರೂ 1,20,000/–)	11.02.2025	27.02.2025
2	ಸಿಮ್ಸ್ ಅರಳಗುಪ್ಪೆ ಮಲ್ಲೇಗೌಡ ಜಿಲ್ಲಾಸ್ಪತ್ರೆಗೆ ಅವಶ್ಯವಿರುವ Anestetia Work Station ಸರಬರಾಜು ಪಡೆಯುವ ಬಗ್ಗೆ	60.00 ಲಕ್ಷಗಳು (ಇ.ಎಂ.ಡಿ ರೂ 1,20,000/–)	11.02.2025	27.02.2025

ಸಹಿ/–ನಿರ್ದೇಶಕರು, ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಿಕ್ಕಮಗಳೂರು

ಸಿಎಸ್‌ಐಆರ್ - ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯ, ಮೈಸೂರು - 570 020, ಭಾರತ

सीएसआईआर – केंद्रीय खाद्य प्रौद्योगिक अनुसंधान संस्थान, मैसूरु - 570 020, भारत
CSIR - Central Food Technological Research Institute, Mysuru - 570 020, India

Recruitment Notice

Date of commencement of Online Applications: 10/02/2025 (Monday) at 10:00 AM
Closing Date for Online Submission of Applications: 14/03/2025 (Friday) at 05:00 PM

CSIR–Central Food Technological Research Institute (CFTRI), Mysuru, a constituent laboratory of Council of Scientific and Industrial Research (CSIR), Ministry of S&T ,Govt. of India, invites online applications from Indian citizens for the following positions:

Advertisement No.	Name of Position	No. of Vacancies & Reservations	Pay Level (as per 7th CPC)	#Age limit
Rec 01/2025	Scientist	34* [UR-14, EWS-3, SC-6, ST-2, OBC,(NCL)-9] {*includes 1 post reserved for PwBD (HH)}	Level-11 (₹ 67,700-2,08,700)	32 Years
	Scientist	01 [UR-PwBD(OH)] (Backlog Vacancy)	Level-11 (₹ 67,700-2,08,700)	42 Years

Upper age limit as on the last date of online application & please see the detailed advertisement for age relaxations

For detailed advertisement, Terms & Conditions and to apply ONLINE please visit official CFTRI website **https://cftri.res.in** under Recruitments or **https://recruitment.cftri.res.in**. All further announcements/details pertaining to this process/updates/corrigendum/ addendum etc. will be published/provided only on CFTRI official website **https://cftri.res.in** from time to time.

Sd/-
Controller of Administration

ತಾಳಿ ಗಿರವಿ ಇಟ್ಟರೂ ಬಾರದ ಕರುಣೆ

ಮೈಕ್ರೊ ಫೈನಾನ್ಸ್ ಕಂಪನಿಯವರಿಂದ ಮನೆಗೆ ಬೀಗ • ಬೀದಿಗೆ ಬಿದ್ದ ಕುಟುಂಬ

ಪ್ರಜಾವಾಣಿ ವಾರ್ತೆ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): '₹5 ಲಕ್ಷ ಸಾಲ ನೀಡಲಾಗಿದೆ. ಈ ಪೈಕಿ ₹2 ಲಕ್ಷ ಮಧ್ಯವರ್ತಿ ಪಾಲಾಗಿದೆ. ಎಲ್ಲಾ ಸಾಲ ಕಟ್ಟಲು ನಮಗೆ ಒತ್ತಡ ಹಾಕಲಾಗುತ್ತಿದೆ. ಮೈಕ್ರೊ ಫೈನಾನ್ಸ್ ಕಂಪನಿಯವರು ಮನೆಗೆ ವಾರದ ಹಿಂದೆ ಬೀಗ ಜಡಿದು, ನೋಟಿಸ್ ಅಂಟಿಸಿದ್ದಾರೆ' ಎಂದು ತಾಲ್ಲೂಕಿನ ಕುಲವಳ್ಳಿ ಗ್ರಾಮದ ದಸ್ತಗೀರಸಾಬ್ ಮುಗಟಸಾಬ್ ಕಾದ್ರೊಳ್ಳಿ ಶನಿವಾರ ಅಳಲು ತೋಡಿಕೊಂಡರು.

'ನಾನು ತೆಗೆದುಕೊಂಡಿದ್ದ ₹3 ಲಕ್ಷ ಸಾಲಕ್ಕೆ, ಈಗಾಗಲೇ ₹3.30 ಲಕ್ಷ ಪಾವತಿಸಿರುವೆ. ₹2 ಲಕ್ಷ ಪಡೆದ ಮಧ್ಯವರ್ತಿಗೆ ಕೇಳಿದರೆ ನನಗೇನೂ ಸಂಬಂಧವಿಲ್ಲ ಎನ್ನುತ್ತಾರೆ. ನಿಗದಿತ ಅವಧಿಗೆ ಸಾಲದ ಕಂತು ಕಟ್ಟಿಲ್ಲ ಎಂದು ನಿಂದಿಸಿ, ಬೈಕ್ ಸಹ ಜಪ್ತಿ ಮಾಡಿದ್ದಾರೆ' ಎಂದರು.

'ನನ್ನ ಕೊರಳಲ್ಲಿದ್ದ ತಾಳಿ ಗಿರವಿ ಇಟ್ಟು ಶುಕ್ರವಾರ ₹2 ಲಕ್ಷ ಹಣ ಒಟ್ಟುಗೂಡಿಸಿ ತುಂಬಲು ಹೋಗಿದ್ದೆವು. ₹2.5 ಲಕ್ಷ ಕಟ್ಟಿದರೆ ಮಾತ್ರ ಮನೆ ಬೀಗ ತೆರೆಯುತ್ತೇವೆ ಎನ್ನುತ್ತಾರೆ. ₹50 ಸಾವಿರ ನಂತರ ಕಟ್ಟುತ್ತೇವೆ ಎಂದರೂ ಕೇಳುತ್ತಿಲ್ಲ' ಎಂದು ಪತ್ನಿ ಶಹನಾಬಿ ಹೇಳಿದರು.

'ಪತಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿ ಒಟ್ಟು 15 ಜನ ಮನೆಯಲ್ಲಿ ವಾಸಿಸುತ್ತೇವೆ. ಮನೆಗೆ ಬೀಗ ಹಾಕಿದ್ದರಿಂದ ಮಂದಿ ಮನೆ, ಊರ ಗುಡಿ ನಮ್ಮ ಮಲಗುವ ಸ್ಥಳವಾಗಿದೆ. ಅಂಗವೈಕಲ್ಯ ಇರುವ ಬಾಲಕಿಯನ್ನು ಹೊತ್ತುಕೊಂಡು ಓಡಾಡುವ ಕೆಟ್ಟ ಪರಿಸ್ಥಿತಿಯನ್ನು ಸಾಲ ಕೊಡಿಸಿದ ಮಧ್ಯವರ್ತಿ ನಮಗೆ ತಂದಿದ್ದಾರೆ' ಎಂದು ದೂರಿದರು.

ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರು ತಾಲ್ಲೂಕಿನ ಕುಲವಳ್ಳಿ ಗ್ರಾಮದಲ್ಲಿ ಬೀಗ ಹಾಕಲಾದ ತಮ್ಮ ಮನೆ ಎದುರು ಕುಳಿತಿರುವ ದಸ್ತಗೀರಸಾಬ್ ಮುಗಟಸಾಬ್ ಕಾದ್ರೊಳ್ಳಿ ಕುಟುಂಬ

'ರಾಜ್ಯಪಾಲರು ಎತ್ತಿದ ಆಕ್ಷೇಪಕ್ಕೆ ಉತ್ತರ'

ಬೆಂಗಳೂರು: 'ಮೈಕ್ರೊ ಫೈನಾನ್ಸ್ ಕಂಪನಿಗಳು, ಲೇವಾದೇವಿದಾರರ ಕಿರುಕುಳದಿಂದ ಸಾಲಗಾರರನ್ನು ರಕ್ಷಿಸುವ ಉದ್ದೇಶದಿಂದ ರೂಪಿಸಿದ್ದ ಸುಗ್ರೀವಾಜ್ಞೆಯನ್ನು ರಾಜ್ಯಪಾಲರು ಹಿಂದಿರುಗಿಸಿದ್ದಾರೆ. ಅವರು ಎತ್ತಿದ ಆಕ್ಷೇಪಗಳಿಗೆ ಸರ್ಕಾರ ಉತ್ತರ ಕೊಡಲಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ತಪ್ಪು ಮಾಡಿದವರಿಗೆ ಜೈಲು ಶಿಕ್ಷೆ, ದಂಡ ವಿಧಿಸುವ ಅಂಶ ಈ ಸುಗ್ರೀವಾಜ್ಞೆಯಲ್ಲಿದೆ. ಯಾವ ದೃಷ್ಟಿಕೋನದಲ್ಲಿ ರಾಜ್ಯಪಾಲರು ಅದನ್ನು ವಾಪಸ್ ಕಳುಹಿಸಿದ್ದಾರೊ ಗೊತ್ತಿಲ್ಲ' ಎಂದರು.

'ಸುಗ್ರೀವಾಜ್ಞೆಯ ಕುರಿತು ವಿಧಾನ ಮಂಡಲದ ಅಧಿವೇಶನದಲ್ಲಿ ಚರ್ಚೆ ಮಾಡುವಂತೆ ಸಲಹೆ ನೀಡಿರುವ ಅವರು, ಕೆಲವು ಅಂಶಗಳ ಸ್ಪಷ್ಟನೆ ಕೇಳಿದ್ದಾರೆ. ಸ್ಪಷ್ಟನೆ ಕೇಳಬಾರದು ಎಂದೇನೂ ಇಲ್ಲ. ಬೇರೆ ರಾಜ್ಯಗಳಲ್ಲೂ ಹೀಗೆ ಆಗುತ್ತಿರುತ್ತದೆ' ಎಂದೂ ಹೇಳಿದರು.

'ಸ್ವಯಂಪ್ರೇರಿತ ದೂರು ದಾಖಲಿಸಿ'

ಕುಕನೂರು (ಕೊಪ್ಪಳ ಜಿಲ್ಲೆ): 'ಖಾಸಗಿ ಲೇವಾದೇವಿಗಳ ಹಾವಳಿಯಿಂದ ಜನ ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದಕ್ಕೆ ಕಡಿವಾಣ ಹಾಕಲು ಸುಗ್ರೀವಾಜ್ಞೆ ಜಾರಿಗೆ ರಾಜ್ಯಪಾಲರ ಒಪ್ಪಿಗೆ ಪಡೆಯುವ ಪ್ರಕ್ರಿಯೆ ಜಾರಿಯಲ್ಲಿದೆ. ಅಲ್ಲಿಯ ತನಕ ಪೊಲೀಸರು ತಮ್ಮ ಅಧಿಕಾರ ಬಳಸಿಕೊಂಡು ಕಿರುಕುಳ ನೀಡುವ ಲೇವಾದೇವಿ ಸಂಸ್ಥೆಗಳ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಬೇಕು' ಎಂದು ಸಹಕಾರ ಖಾತೆ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ಪಟ್ಟಣದಲ್ಲಿ ಶನಿವಾರ ನಡೆದ ಸಹಕಾರ ಜಾಗೃತಿ ಸಮಾವೇಶ ಉದ್ಘಾಟಿಸಿದ ಅವರು, 'ಖಾಸಗಿ ಲೇವಾದೇವಿದಾರರ ಕಿರುಕುಳದಿಂದ ಯಾರಾದರೂ ಆತ್ಮಹತ್ಯೆ ಮಾಡಿಕೊಂಡರೆ ಪೊಲೀಸರು ಈಗಾಗಲೇ ಇರುವ ಕಾನೂನುಗಳನ್ನೇ ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ರಾಜ್ಯದಲ್ಲಿ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಹಕಾರ ಸಂಘಗಳನ್ನು ಆರಂಭಿಸಲಾಗುತ್ತಿದ್ದು, ಆ ಸಂಘದ ಅಧ್ಯಕ್ಷನಿಗೆ ಗ್ರಾಮ ಪಂಚಾಯಿತಿಯ ಸಭೆಯಲ್ಲಿ ಪಾಲ್ಗೊಳ್ಳುವ ಅವಕಾಶ ಕೊಡಲು ಕ್ರಮ ವಹಿಸಲಾಗುವುದು' ಎಂದರು.

'ಸಹಕಾರ ಸಂಘದಲ್ಲಿ ಮೀಸಲಾತಿ ನೀಡುವ ವಿಧೇಯಕವನ್ನು ಆದಷ್ಟು ಬೇಗನೆ ಜಾರಿಗೊಳಿಸಲಾಗುವುದು. ರಾಜ್ಯದ ಹಲವೆಡೆ ಜಿಲ್ಲೆಗಳು ವಿಭಜನೆಯಾಗಿ ಅನೇಕ ವರ್ಷಗಳಾದರೂ ಡಿಸಿಸಿ ಬ್ಯಾಂಕ್‌ಗಳು ವಿಭಜನೆಗೊಂಡಿಲ್ಲ. ಒಂದು ವೇಳೆ ವಿಭಜನೆ ಮಾಡಿದರೆ ಆಗುವ ಸಾಧಕ ಬಾಧಕಗಳ ಬಗ್ಗೆ ರಿಸರ್ವ್ ಬ್ಯಾಂಕ್‌ನ ನಿವೃತ್ತ ಅಧಿಕಾರಿಯಿಂದ ಮಾಹಿತಿ ಪಡೆದು ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

ಕಾಡಾನೆ ದಾಳಿ: ಮಹಿಳೆ ಸಾವು

ಚಿಕ್ಕಮಗಳೂರು: ಕಾಡಾನೆ ದಾಳಿಗೆ ನರಸಿಂಹರಾಜಪುರ ತಾಲ್ಲೂಕಿನ ಕತ್ತಲೇಕಾನ್ ಎಸ್ಟೇಟ್‌ನಲ್ಲಿ ಕೂಲಿ ಕಾರ್ಮಿಕ ಮಹಿಳೆ ಶನಿವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ.

ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ಶಿವಪುರದ ವೆಂಕಟೇಶ ನಾಯ್ಕ ಅವರ ಪತ್ನಿ ವಿನೋದಾ ಬಾಯಿ (39) ಮೃತಪಟ್ಟವರು. ತಮ್ಮ ಕುಟುಂಬದೊಂದಿಗೆ ಕೂಲಿ ಕೆಲಸಕ್ಕಾಗಿ ವಲಸೆ ಬಂದಿದ್ದರು. ಅರಣ್ಯ ಪ್ರದೇಶದ ಬಳಿ ಇರುವ ತೋಟದಲ್ಲಿ ಕಾಫಿ ಹಣ್ಣು ಕೊಯ್ಲು ಕೆಲಸ ಮಾಡುತ್ತಿದ್ದಾಗ ಆನೆ ದಾಳಿ ನಡೆಸಿದೆ. ಆನೆ ತುಳಿದಿದ್ದರಿಂದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು. ಶೃಂಗೇರಿ ಶಾಸಕ ಟಿ.ಡಿ.ರಾಜೇಗೌಡ, ತರೀಕೆರೆ ಶಾಸಕ ಜಿ.ಎಚ್.ಶ್ರೀನಿವಾಸ್ ಕುಟುಂಬದವರಿಗೆ ಸಾಂತ್ವನ ಹೇಳಿದರು. ಮೃತರ ಕುಟುಂಬಕ್ಕೆ ಅರಣ್ಯ ಇಲಾಖೆಯಿಂದ ₹15 ಲಕ್ಷ ಪರಿಹಾರದ ಚೆಕ್ ವಿತರಿಸಲಾಯಿತು.

ಕೇಂದ್ರೀಯ ವಿದ್ಯಾಲಯ, ಡಿ.ಆರ್.ಡಿ.ಒ.
ಶಿಕ್ಷಣ ಇಲಾಖೆಯ ಸಚಿವಾಲಯದ ಅಡಿಯಲ್ಲಿ, ಭಾರತ ಸರ್ಕಾರ.
ಸಿ.ವಿ. ರಾಮನ್ ನಗರ, ಬೆಂಗಳೂರು - 560093.
ದೂರವಾಣಿ : 25243919
ಇ-ಮೇಲ್ ಐಡಿ : kvdrdobangalore@gmail.com, ವೆಬ್‌ಸೈಟ್ : drdobangalore.kvs.ac.in

ಉಲ್ಲೆಖ : ಫೈಲ್ ನಂ. 13082/ವಿ.ಎಂ.ಸಿ./24-25/ಕೆ.ವಿ.ಡಿ.ಆರ್.ಡಿ.ಒ. ದಿನಾಂಕ : 07.02.2025

ವಾಕ್-ಇನ್-ಇಂಟರ್ವ್ಯೂ (2025-26ನೇ ಸಾಲಿನ ಗುತ್ತಿಗೆ ಆಧಾರದ ಮೇಲೆ ಶಿಕ್ಷಕರ ನೇಮಕಾತಿಗೆ)

ಬೆಂಗಳೂರಿನ ಕೇಂದ್ರೀಯ ವಿದ್ಯಾಲಯ ಡಿ.ಆರ್.ಡಿ.ಒ., ಸಿ.ವಿ. ರಾಮನ್ ನಗರ, ಬೆಂಗಳೂರು-560093 ನಲ್ಲಿ ಗುತ್ತಿಗೆ ಆಧಾರದ ಮೇಲೆ ಶಿಕ್ಷಕರ ಆಯ್ಕೆ ಪಟ್ಟಿಯನ್ನು (ಪ್ಯಾನಲ್) ಸಿದ್ಧಪಡಿಸಲು, ಅಭ್ಯರ್ಥಿಗಳ (18 ರಿಂದ 65 ವಯೋಮಾನದವರು) ಸಂದರ್ಶನವನ್ನು ಈ ಕೆಳಗಿನಂತೆ ನಡೆಸಲಾಗುತ್ತದೆ. ಆಯ್ಕೆಯಾದ ಅಭ್ಯರ್ಥಿಗಳ ಸೇವೆಗಳನ್ನು ಅವರು ನೀಡಿದ ಆದ್ಯತೆಗೆ ಅನುಗುಣವಾಗಿ ಮತ್ತು ಅಗತ್ಯವಿರುವಾಗ ಈ ಶಾಲೆಗಳಲ್ಲಿ ತೆಗೆದುಕೊಳ್ಳಲಾಗುತ್ತದೆ. ಎಲ್ಲಾ ಅಭ್ಯರ್ಥಿಗಳು ತಮ್ಮ ಸ್ವಂತ ವೆಚ್ಚದಲ್ಲಿ ಕೇಂದ್ರೀಯ ವಿದ್ಯಾಲಯ, ಡಿ.ಆರ್.ಡಿ.ಒ. ನಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು ಮತ್ತು ಪ್ರಮಾಣ ಪತ್ರಗಳ ಮೂಲ ಮತ್ತು ಜೆರಾಕ್ಸ್ ಹಾಗೂ ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರದೊಂದಿಗೆ ಹಾಜರಾಗಬೇಕು, ಎಲ್ಲಾ ಹುದ್ದೆಗಳ ನೋಂದಣಿಯನ್ನು ಅದೇ ದಿನ ಬೆಳಗ್ಗೆ 09.00 ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ ಮಾಡಲಾಗುವುದು.

ಸಂದರ್ಶನದ ಸ್ಥಳ : ಕೇಂದ್ರೀಯ ವಿದ್ಯಾಲಯ ಡಿ.ಆರ್.ಡಿ.ಒ., ಸಿ.ವಿ. ರಾಮನ್ ನಗರ, ಬೆಂಗಳೂರು - 560093.

ಸಂದರ್ಶನದ ದಿನಾಂಕ	ಸಂದರ್ಶನಕ್ಕಾಗಿ ನೋಂದಣಿ	ಹುದ್ದೆಗಳು / ವಿಷಯಗಳ ವರ್ಗ
04.03.2025 (ಮಂಗಳವಾರ)	ಬೆಳಗ್ಗೆ 9.00 ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ	ಪಿ.ಜಿ.ಟಿ. ಸ್ನಾತಕೊತ್ತರ : ಇಂಗ್ಲಿಷ್, ಹಿಂದಿ, ಗಣಿತ, ಕಂಪ್ಯೂಟರ್ ವಿಜ್ಞಾನ, ಜೀವಶಾಸ್ತ್ರ, ರಸಾಯನಶಾಸ್ತ್ರ, ಭೌತಶಾಸ್ತ್ರ, ಅರ್ಥಶಾಸ್ತ್ರ, ವಾಣಿಜ್ಯ, ಭೂಗೋಳ, ರಾಜ್ಯಶಾಸ್ತ್ರ, ಇತಿಹಾಸ. ಟಿ.ಜಿ.ಟಿ. ಸ್ನಾತಕ ಶಿಕ್ಷಕ : ಇಂಗ್ಲಿಷ್, ಹಿಂದಿ, ಗಣಿತ, ವಿಜ್ಞಾನ, ಸಮಾಜ ಅಧ್ಯಯನ, ಸಂಸ್ಕೃತ. ಪಿ.ಆರ್.ಟಿ. ಪ್ರಾಥಮಿಕ ಶಿಕ್ಷಕ :
06.03.2025 (ಗುರುವಾರ)	ಬೆಳಗ್ಗೆ 9.00 ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ	ಯೋಗ ತರಬೇತುದಾರ, ಕನ್ನಡ ಶಿಕ್ಷಕ, ಸಂಗೀತ ಶಿಕ್ಷಕ, ನೃತ್ಯ ಶಿಕ್ಷಕ, ಕ್ರೀಡಾ ತರಬೇತುದಾರರು, ಕಲೆ ಮತ್ತು ಕರಕುಶಲ ಶಿಕ್ಷಕರು, ಕಂಪ್ಯೂಟರ್ ಬೋಧಕರು, ನರ್ಸ್, ವೈದ್ಯರು, ವಿಶೇಷ ಶಿಕ್ಷಕರು, ಬ್ಯಾಗ್‌ಪೈಪರ್ ಬ್ಯಾಂಡ್ ಶಿಕ್ಷಕರು.

ಗಮನಿಸಿ : ವಿದ್ಯಾರ್ಹತೆ ಮತ್ತು ಇತರೆ ವಿವರಗಳಿಗಾಗಿ ದಯವಿಟ್ಟು ವೆಬ್‌ಸೈಟ್ : www.drdobangalore.kvs.ac.in ಗೆ ಭೇಟಿ ನೀಡಿ, ದೂರವಾಣಿ : 080 25243919.

ಸಹಿ/- ಪ್ರಾಂಶುಪಾಲರು

ನಗರಸಭಾ ಕಾರ್ಯಾಲಯ, ಹುಣಸೂರು
ಮೈಸೂರು ಜಿಲ್ಲೆ - 571105
E-mail : ka.hunsur.cmc@gmail.com Ph:08222-252048
ಸಂಖ್ಯೆ:ಹುನಕಾ/ಆ.ಶಾ/ಪಿ.ಆರ್/2024-25 ದಿನಾಂಕ: 04.02.2025

ಮರು ಟೆಂಡರ್ ಪ್ರಕಟಣೆ

ಪೌರಾಯುಕ್ತರು, ನಗರಸಭೆ, ಹುಣಸೂರು ಇವರು Front end Loder With Bachoe ವಾಹನ ಖರೀದಿಸುವ ಕುರಿತು ಕೆ.ಪಿ.ಪಿ.ಪಿ ಮೂಲಕ ಕರೆಯಲಾಗಿದ್ದ ಟೆಂಡರ್‌ನಲ್ಲಿ ಒಬ್ಬ ಸೇವಾದಾರರು ಮಾತ್ರ ಭಾಗವಹಿಸುವ ಕಾರಣ ಮರು ಟೆಂಡರ್ ಪ್ರಕಟಣೆ ಹೊರಡಿಸಿದ್ದು, ಆಸಕ್ತ ಅಧಿಕೃತ ತಯಾರಿಕೆ ಸಂಸ್ಥೆ ಅಥವಾ ಡೀಲರ್‌ಗಳು ಭಾಗವಹಿಸ ಬಹುದಾಗಿರುತ್ತದೆ. Indent No:DMA/2024-25/IND4124/CALL2 ಹೆಚ್ಚಿನ ವಿವರಗಳಿಗೆ https://kppp.karnataka.gov.in ನಲ್ಲಿ ಪಡೆಯ ಬಹುದಾಗಿರುತ್ತದೆ.

ಸಹಿ/- ಪೌರಾಯುಕ್ತರು, ನಗರಸಭೆ, ಹುಣಸೂರು.
DIPR/DDMYS/1243/KSMCA/864/2024-25

ಕರ್ನಾಟಕ ಸರ್ಕಾರ ಜಿಲ್ಲಾಡಳಿತ ದಾವಣಗೆರೆ
ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ದಾವಣಗೆರೆ.
ಕೊಠಡಿ ಸಂಖ್ಯೆ 46. ಎರಡನೇ ಮಹಡಿ, ಕರೂರು ಕೈಗಾರಿಕಾ ಪ್ರದೇಶ, ಜಿಲ್ಲಾಡಳಿತ ಭವನ. ದಾವಣಗೆರೆ. ಫೋನ್ ನಂಬರ್ 08192-262973
ಇ-ಮೇಲ್:dobcmdavanagere@gmail.com,
ಸಂ/ಹಿಂವಕಇ/ದಾ/ಆಹಾರ ಟೆಂಡರ್/ಸಿಆರ್-166/2024-25 ದಿ: 07.02.2025

ಟೆಂಡರ್ ಪ್ರಕಟಣೆ

2024-25 ಮತ್ತು 2025-26ನೇ ಸಾಲಿಗೆ (02 ವರ್ಷದ ಅವಧಿಗೆ) ದಾವಣಗೆರೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ ಆಶ್ರಮ ಶಾಲೆಗಳಿಗೆ ಆಹಾರ ಪದಾರ್ಥಗಳು ಮತ್ತು ಇತರೆ ಸಾಮಗ್ರಿಗಳ ಪೂರೈಕೆಗಾಗಿ ಇ-ಟೆಂಡರ್ ಆಹ್ವಾನಿಸಲಾಗಿದೆ. ಪ್ರಯುಕ್ತ ನಿಗದಿತ ಇ-ಟೆಂಡರ್ ಬಿಡ್ ನಮೂನೆಗಳನ್ನು ಹಾಗೂ ಹೆಚ್ಚಿನ ಮಾಹಿತಿಯನ್ನು http// KPPP.karnataka.gov.in Online ನಿಂದ ಪಡೆದು ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಕಛೇರಿ ದೂರವಾಣಿ ಸಂಖ್ಯೆ: 08192-262973

1) ಇ-ಟೆಂಡರ್ ನಂ: BCWD/2024-25/IND0111

(1) Tender Reference No and date No:BCWD/HOSTEL.TENDER/CR-64/2024-25 Dt:04.02.2025 **(2)** Approximate Estimated bid value Rs: 3664.00 Lakhs (For 2 years) **(3)** Date and Time for Pre-bid meeting Dt:09-02-2025 11.30 **(4)** Last date & Time for submission of Tender Dt:19-02-2025 17.30 **(5)** Date & Time of opening of technical bid Dt:21-02-2025 11.30 **(6)** Tentative Date & Time of opening of Commercial bid Dt:24-02-2025 11.30 **(7)** EMD Amount Rs 36.64 Lakhs

ವಾಸಾಇ/ಡಿವಿಜಿ/732/ಕೆಎಸ್‌ಎಂಸಿಎ/2024-25

ಸಹಿ/- ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ದಾವಣಗೆರೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (KSOU)

ಮುಕ್ತಗಂಗೋತ್ರಿ, ಮೈಸೂರು - 570006, ಕರ್ನಾಟಕ.
ಕಚೇರಿ ದೂರವಾಣಿ ಸಂಖ್ಯೆ: 0821-2500981, 2519941 / 43 / 48 / 52, ಸಹಾಯವಾಣಿ: 88003 35638 / 86905 44544.
ಇ-ಮೇಲ್: techsupport@ksouportal.com, ಅಂತರ್ಜಾಲ : www.ksoumysuru.ac.in

KARNATAKA STATE OPEN UNIVERSITY — ACCREDITED WITH GRADE A+ NAAC

ಅಧಿಸೂಚನೆ ಸಂಖ್ಯೆ : ಕರಾಮುವಿ/ಪ್ರವಿ/ಎಡಿಎಂ-1/129/2024-25 ದಿನಾಂಕ: 06-02-2025

ಇಂಟರ್ನ್‌ಶಿಪ್ ಮೂಲಕ ಸ್ಟೈಫಂಡ್ ಗಳಿಸುವ ಅವಕಾಶಗಳಿವೆ.

ವಿದ್ಯಾರ್ಥಿಗಳಿಗೆ ಸುವರ್ಣವಕಾಶ
ಎರಡು ಶೈಕ್ಷಣಿಕ ಕಾರ್ಯಕ್ರಮಗಳನ್ನು (ಪ್ರೊಗ್ರಾಂಗಳನ್ನು) ಏಕ ಕಾಲದಲ್ಲಿ ಓದಲು ಅವಕಾಶವಿರುತ್ತದೆ. ಇದರ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬಹುದು.

ನಿಮ್ಮ ಮನೆಯೇ 'ನಿರಂತರ' ಪಾಠ ಶಾಲೆ.

ಯು.ಜಿ.ಸಿ. ಮಾನ್ಯತೆ ಹೊಂದಿದ ಶಿಕ್ಷಣಕ್ರಮಗಳ ಅಧ್ಯಯನ ಅವಕಾಶವನ್ನು ಕ.ರಾ.ಮು.ವಿ. ಮೂಲಕ ಪಡೆಯಿರಿ

2024-25 ರ ಜನವರಿ ಆವೃತ್ತಿಗೆ ನೇರ ಪ್ರವೇಶಾತಿಯನ್ನು ಒಳಗೊಂಡಂತೆ ಪ್ರಥಮ ವರ್ಷದ ಒಡಿಎಲ್ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸ್ನಾತಕ (ಯುಜಿ) ಶಿಕ್ಷಣ ಕಾರ್ಯಕ್ರಮಗಳು
- ಬಿ.ಎ. • ಬಿ.ಕಾಂ.
- ಬಿ.ಲಿಬ್.ಐ.ಎಸ್‌ಸಿ.
- ಬಿ.ಬಿ.ಎ.
- ಬಿ.ಎಸ್.ಡಬ್ಲ್ಯ್ಯು
- ಬಿ.ಇಡಿ. (ಸಿಇಟಿ ಮೂಲಕ)
- ಬಿ.ಎಸ್‌ಸಿ ಜನರಲ್ - ಸಂಯೋಜನೆಗಳು (• PCM • PMCs • BcBZ • CBZ • BcBMi • BcMiFs • CBMi • CZEs • BcZEs • BcMiEs • BcBEs • CBEs • CMiEs) [• P-Physics • C-Chemistry • M-Mathematics • Cs-Computer Science • B-Botany • Mi-Microbiology • Bc-Biochemistry • Z-Zoology • Es-Environmental Science • Fs-Food Science & Nutrition]
- ಬಿ.ಎಸ್‌ಸಿ - ಇನ್‌ಫರ್ಮೇಷನ್ ಟೆಕ್ನಾಲಜಿ (ಬಿ.ಎಸ್‌ಸಿ-ಐಟಿ)
- ಬಿ.ಸಿ.ಎ. - ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ಸ್

ಸ್ನಾತಕೋತ್ತರ (ಪಿಜಿ) ಶಿಕ್ಷಣ ಕಾರ್ಯಕ್ರಮಗಳು:
- **ಎಂ.ಎ.** • ಕನ್ನಡ • ಇಂಗ್ಲಿಷ್ • ಸಂಸ್ಕೃತ • ಉರ್ದು • ಹಿಂದಿ • ತೆಲುಗು • ಶಿಕ್ಷಣ • ಇತಿಹಾಸ • ರಾಜ್ಯಶಾಸ್ತ್ರ • ಅರ್ಥಶಾಸ್ತ್ರ • ಸಾರ್ವಜನಿಕ ಆಡಳಿತ • ಸಮಾಜಶಾಸ್ತ್ರ • ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ • ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ
- **ಎಂ.ಎಸ್.ಡಬ್ಲ್ಯ್ಯು**
- **ಎಂ.ಬಿ.ಎ.** - ಅನ್‌ಲೈನ್ ಪ್ರವೇಶ ಪರೀಕ್ಷೆ ಮೂಲಕ. ಸ್ಪೆಷಲೈಜೇಷನ್: • ಫೈನಾನ್ಸ್ • ಮಾರ್ಕೆಟಿಂಗ್ • ಹೆಚ್‌ಆರ್ • ಆಪರೇಷನ್ಸ್ • ಟೂರಿಸಂ • ಕಾರ್ಪೊರೇಟ್ ಲಾ • ಇನ್‌ಫರ್ಮೇಷನ್ ಟೆಕ್ನಾಲಜಿ • ಆಸ್ಪತ್ರೆ ಮತ್ತು ಆರೋಗ್ಯ ರಕ್ಷಣೆ ನಿರ್ವಹಣೆ.
- **ಎಂ.ಕಾಂ.** ಡ್ಯುಯೆಲ್ ಸ್ಪೆಷಲೈಜೇಷನ್: • ಅಕೌಂಟಿಂಗ್ ಮತ್ತು ಫೈನಾನ್ಸ್/ಹೆಚ್‌ಆರ್‌ಎಂ • ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ ಮತ್ತು ಹೆಚ್‌ಆರ್‌ಎಂ/ಫೈನಾನ್ಸ್
- **ಎಂ.ಸಿ.ಎ.**
- **ಎಂ.ಲಿಬ್.ಐ.ಎಸ್‌ಸಿ.**
- **ಎಂ.ಎಸ್‌ಸಿ.** • ಭೌತಶಾಸ್ತ್ರ • ರಸಾಯನ ಶಾಸ್ತ್ರ • ಗಣಿತ ಶಾಸ್ತ್ರ • ಬಯೋಕೆಮಿಸ್ಟ್ರಿ • ಬಯೋಟೆಕ್ನಾಲಜಿ • ಕ್ಲಿನಿಕಲ್ ನ್ಯೂಟ್ರಿಷನ್ & ಡಯಟೆಟಿಕ್ಸ್ • ಪರಿಸರ ವಿಜ್ಞಾನ • ಭೂಗೋಳ ಶಾಸ್ತ್ರ • ಮೈಕ್ರೋ ಬಯಾಲಜಿ • ಮನಃಶಾಸ್ತ್ರ • ಸಸ್ಯಶಾಸ್ತ್ರ • ಪ್ರಾಣಿಶಾಸ್ತ್ರ • ಫುಡ್ & ನ್ಯೂಟ್ರಿಷನ್ ಸೈನ್ಸ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಸೈನ್ಸ್ • ಡಾಟಾ ಸೈನ್ಸ್ • ಅರ್ಥ್ ಸೈನ್ಸ್ • ಜೀವ ವಿಜ್ಞಾನ

ಪಿಜಿ ಸರ್ಟಿಫಿಕೇಟ್ ಕಾರ್ಯಕ್ರಮಗಳು-(ಪದವಿ ಆಧಾರಿತ) (ಒಂದು ವರ್ಷ)
• ಇಂಗ್ಲಿಷ್ • ಕಮ್ಯುನಿಕೇಟಿವ್ ಇಂಗ್ಲಿಷ್ • ಪತ್ರಿಕೋದ್ಯಮ & ಸಮೂಹ ಸಂವಹನ • ಕುವೆಂಪು ಸಾಹಿತ್ಯ • ಹಣಕಾಸು ನಿರ್ವಹಣೆ • ಮಾನವ ಸಂಪನ್ಮೂಲ ನಿರ್ವಹಣೆ • ಬಿಸಿನೆಸ್ ಲಾ • ಬಿಸಿನೆಸ್ ಅಡ್ಮಿನಿಸ್ಟ್ರೇಷನ್ • ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ • ಅಂಬೇಡ್ಕರ್ ಅಧ್ಯಯನಗಳು • ನ್ಯೂಟ್ರಿಷನ್ & ಡಯಟೆಟಿಕ್ಸ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಅಪ್ಲಿಕೇಷನ್ಸ್.

ಡಿಪ್ಲೋಮ ಶಿಕ್ಷಣ ಕಾರ್ಯಕ್ರಮಗಳು-(10+2 ಆಧಾರಿತ) (ಒಂದು ವರ್ಷ)
• ಕನ್ನಡ • ಪತ್ರಿಕೋದ್ಯಮ • ನ್ಯೂಟ್ರಿಷನ್ & ಹೆಲ್ತ್ ಎಜುಕೇಷನ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಅಪ್ಲಿಕೇಷನ್ಸ್ • ಅರ್ಲಿ ಚೈಲ್ಡ್‌ಹುಡ್ ಕೇರ್ ಅಂಡ್ ಎಜುಕೇಷನ್ • ಭಾಷಾಂತರ ಅಧ್ಯಯನ

ಸರ್ಟಿಫಿಕೇಟ್ ಶಿಕ್ಷಣ ಕಾರ್ಯಕ್ರಮಗಳು (ಆರು ತಿಂಗಳು)
• ಪಂಚಾಯತ್ ರಾಜ್ • ನ್ಯೂಟ್ರಿಷನ್ & ಫುಡ್ • ಮಾಹಿತಿ ಸಂವಹನ ತಂತ್ರಜ್ಞಾನ (ಐಸಿಟಿ) • ಭಾಷಾಂತರ ಅಧ್ಯಯನ

ONLINE PROGRAMS • B.A. • B.Com
• M.A. ♦ Kannada ♦ Hindi ♦ Sanskrit ♦ Economics ♦ English
• M.Com • M.B.A. • M.Sc Mathematics

ಉನ್ನತ ಶಿಕ್ಷಣ ಎಲ್ಲರಿಗೂ, ಎಲ್ಲೆಡೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು NAAC A+ ಮಾನ್ಯತೆ ಪಡೆದಿದೆ, UGC-DEB ಪತ್ರ ಸಂಖ್ಯೆ. F.No.39-2/2023 (DEB-1) ದಿನಾಂಕ: 17-08-2023, F.No.30-30/2023 (DEBIII) ದಿನಾಂಕ: 11-09-2023, ಮತ್ತು ಕರ್ನಾಟಕ ರಾಜ್ಯದಲ್ಲಿ ಅಧಿಕಾರ ಹೊಂದಿರುವ ಏಕೈಕ ಸಾರ್ವಜನಿಕ ವಿಶ್ವವಿದ್ಯಾಲಯವಾಗಿದ್ದು, ಉನ್ನತ ಶಿಕ್ಷಣ ಕಾರ್ಯಕ್ರಮಗಳನ್ನು ದೂರ ಶಿಕ್ಷಣ (ಒ.ಡಿ.ಎಲ್) ಪದ್ಧತಿಯಲ್ಲಿ. AICTE ಮೂಲಕ ಅನುಮೋದಿಸಿದೆ ಎಂಬಿಎ/ಎಂಸಿಎ/ಎಂಎಸ್‌ಸಿ ಡೇಟಾ ಸೈನ್ಸ್ ಪ್ರೋಗ್ರಾಂಗಳು ಅಧಿಸೂಚನೆ ಸಂಖ್ಯೆ: F.No.: ದಕ್ಷಿಣ: ಪಶ್ಚಿಮ/2023-24/1-43337817229, ದಿನಾಂಕ: 10.06.2023, ಅಡಿಯಲ್ಲಿ ಒದಗಿಸುತ್ತಿದೆ.

ವಿಶ್ವವಿದ್ಯಾನಿಲಯವು ಕೆಳಕಂಡ ವಿಶೇಷತೆಗಳನ್ನು ಹೊಂದಿರುತ್ತದೆ :
- ವಿಶಾಲ ಅತ್ಯಾಧುನಿಕ ಹಾಗೂ ಹಸಿರುಮಯ ಕ್ಯಾಂಪಸ್
- ಆಧುನಿಕ ಐಸಿಟಿ ತಂತ್ರಜ್ಞಾನ ಬೆಂಬಲಿತ ಬೋಧನಾ ಸೌಲಭ್ಯಗಳು
- ಅನುಭವಿ ಹಾಗೂ ನುರಿತ ಬೋಧನಾ ಸಿಬ್ಬಂದಿ
- ಸುಸಜ್ಜಿತ ಪ್ರಯೋಗಾಲಯಗಳು
- ಸುಸಜ್ಜಿತ ಗ್ರಂಥಾಲಯ ಹಾಗೂ ಇಂಟರ್ನೆಟ್ ಸೌಲಭ್ಯಗಳು
- ಪ್ರಾದೇಶಿಕ ಕೇಂದ್ರಗಳು ಹಾಗೂ ಕಲಿಕಾರ್ಥಿ ಸಹಾಯ (ಲರ್ನರ್ ಸಪೋರ್ಟ್ ಸೆಂಟರ್) ಕೇಂದ್ರಗಳನ್ನೊಳಗೊಂಡ ಸೇವಾ ವ್ಯವಸ್ಥೆ
- ಗುಣಮಟ್ಟದ ಸ್ವಯಂ ಕಲಿಕಾ ಸಾಮಗ್ರಿಗಳು (ಎಸ್.ಎಲ್.ಎಮ್)
- ವೃತ್ತಿ ಸಂಬಂಧಿತ ಸಲಹೆ ಹಾಗೂ ನೇಮಕಾತಿಯಲ್ಲಿ ನೆರವು

ಪ್ರವೇಶಾತಿ (ಎನ್‌ರೋಲ್ಮೆಂಟ್) ಮಾಹಿತಿ ಹಾಗೂ ವಿಧಾನ

1. ಅರ್ಹತೆಯ ಮಾನದಂಡ ಹಾಗೂ ಶುಲ್ಕದ ವಿವರಗಳನ್ನು ವಿವರಣಾ ಪುಸ್ತಕ (ಪ್ರಾಸ್ಪೆಕ್ಟಸ್) ದಲ್ಲಿ ನಮೂದಿಸಲಾಗಿದೆ. ಅಭ್ಯರ್ಥಿಗಳು ಸಂಬಂಧಿತ ಕಾರ್ಯಕ್ರಮಗಳ ಪ್ರಾಸ್ಪೆಕ್ಟಸ್‌ನ್ನು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು / ಡೌನ್‌ಲೋಡ್ ಮಾಡಿಕೊಳ್ಳಬಹುದು. ಅಭ್ಯರ್ಥಿಗಳು, **ಮೈಸೂರಿನಲ್ಲಿರುವ ಕರಾಮುವಿಯ ಕೇಂದ್ರ ಕಚೇರಿಯಲ್ಲಿ ನೇರವಾಗಿ / ಆನ್‌ಲೈನ್ ಮುಖಾಂತರ, ಅಥವಾ ತಮ್ಮ ಆಯ್ಕೆಯ ಸಮೀಪದ ಪ್ರಾದೇಶಿಕ ಕೇಂದ್ರಗಳಲ್ಲಿ ಮಾತ್ರವೇ ಖುದ್ದಾಗಿ ಪ್ರವೇಶಾತಿಯನ್ನು ಪಡೆಯುವುದು.** ಆನ್‌ಲೈನ್ ಪ್ರವೇಶ ಅರ್ಜಿ ಫಾರಂನ್ನು ಭರ್ತಿ ಮಾಡಲು **KSOU Online Admission Portal** ಗೆ ಭೇಟಿ ನೀಡಿ. ಪ್ರವೇಶಾತಿ ಹಾಗೂ ಇನ್ನಿತರ ಮಾಹಿತಿಗಾಗಿ ಅರ್ಜಿದಾರರು ಕರಾಮುವಿಯ ಅಧಿಕೃತ ವೆಬ್‌ಸೈಟ್: **www.ksoumysuru.ac.in** ನ್ನು ವೀಕ್ಷಿಸುವುದು.
   - ಪ್ರವೇಶಪೂರ್ವ ಸಮಾಲೋಚನೆಗೆ ಮಾತ್ರ ಅರ್ಜಿದಾರರು ತಮ್ಮ ವ್ಯಾಪ್ತಿಯಲ್ಲಿ ಬರುವ ಕರಾಮುವಿಯ ಯಾವುದೇ ಕಲಿಕಾರ್ಥಿ ಸಹಾಯ ಕೇಂದ್ರವನ್ನು ಸಂಪರ್ಕಿಸಬಹುದು.
   - ವಿದ್ಯಾರ್ಥಿಗಳು ಪಾವತಿಸಬೇಕಾದ ನಿಗದಿತ ಶುಲ್ಕವನ್ನು (ವಿವರಗಳು ವೆಬ್‌ಸೈಟ್‌ನಲ್ಲಿ ಲಭ್ಯವಿದೆ) ಮಾತ್ರ ಪಾವತಿಸಬೇಕು. ಹೆಚ್ಚುವರಿ ಪಾವತಿಗೆ ವಿಶ್ವವಿದ್ಯಾನಿಲಯವು ಜವಬ್ದಾರಿಯಾಗುವುದಿಲ್ಲ.
   - ಪ್ರವೇಶಾತಿ ಶುಲ್ಕವನ್ನು ಆನ್‌ಲೈನ್ ವಿಧಾನದ ಮೂಲಕ ಮಾತ್ರ ಪಾವತಿಸತಕ್ಕದ್ದು.
   - ಅಭ್ಯರ್ಥಿಗಳು ಗುರುತಿನ ಚೀಟಿಗಳು ಹಾಗೂ ಲಭ್ಯ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಮೈಸೂರಿನಲ್ಲಿರುವ ಕರಾಮುವಿಯ ಆಡಳಿತ ಕಛೇರಿಯಿಂದ ಅಥವಾ ತಮ್ಮ ಆಯ್ಕೆಯ ಪ್ರಾದೇಶಿಕ ಕೇಂದ್ರದಿಂದ ಪಡೆಯಬಹುದು.
2. ಪ.ಜಾ./ಪ.ಪ. ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ನಿಗಧಿತ ಶುಲ್ಕವನ್ನು ಪಾವತಿಸಿ ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕ ಮರುಭರಿಕೆ ಮಾಡಿಕೊಳ್ಳುವ ಷರತ್ತಿಗೆ ಒಳಪಟ್ಟು ಶುಲ್ಕ ವಿನಾಯಿತಿ ಯೋಜನೆಯಡಿ ಪ್ರವೇಶಾತಿ ಪಡೆಯಬಹುದಾಗಿದೆ. ಪ್ರವೇಶಾತಿಯು ವಿ.ವಿ.ಯ ಸ್ಕಾಲರ್‌ಷಿಪ್ ಘಟಕವು ವಿಧಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
3. ಓಬಿಸಿ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಪೂರ್ಣ ಶುಲ್ಕವನ್ನು ಪಾವತಿಸಿ ಪ್ರವೇಶಾತಿ ಪಡೆದು, ನಂತರ ಸ್ಟೇಟ್ ಸ್ಕಾಲರ್‌ಷಿಪ್ ಪೋರ್ಟಲ್ (SSP) ಮುಖಾಂತರ ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕವನ್ನು ಮರುಭರಿಕೆ ಮಾಡಿಕೊಳ್ಳಬಹುದು.
   - ಬಿಪಿಎಲ್ ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿಗಳು / ಮಿಲಿಟರಿ ಸೇವೆಯಲ್ಲಿರುವ / ಮಾಜಿ ಸೈನಿಕ ವಿದ್ಯಾರ್ಥಿಗಳು / ಆಟೋ / ಕ್ಯಾಬ್ ಚಾಲಕರು ಮತ್ತು ಅವರ ಪತ್ನಿ / ಮಕ್ಕಳಿಗೆ / ಕೆಎಸ್‌ಆರ್‌ಟಿಸಿ / ಬಿಎಂಟಿಸಿ / ಎನ್‌ಡಬ್ಲ್ಯೂಕೆಆರ್‌ಟಿಸಿ / ಕೆಕೆಆರ್‌ಟಿಸಿಯಲ್ಲಿನ ನೌಕರರುಗಳಿಗೆ ಯುಜಿ ಮತ್ತು ಪಿಜಿ ಪದವಿ ಶಿಕ್ಷಣ ಕ್ರಮಗಳಿಗೆ ಬೋಧನಾ ಶುಲ್ಕದಲ್ಲಿ **ಶೇಕಡ 10%ರಷ್ಟು ರಿಯಾಯಿತಿಯನ್ನು** ಪಡೆಯಬಹುದು.
   - **ತೃತೀಯ ಲಿಂಗಕ್ಕೆ** ಸೇರಿದ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ **ವಿನಾಯಿತಿ** ಇರುತ್ತದೆ.
   - ಕೋವಿಡ್-19 ಖಾಯಿಲೆಯಿಂದ ಮೃತಪಟ್ಟ ತಂದೆ / ತಾಯಿಯ ಮಕ್ಕಳಿಗೆ ಸಂಬಂಧಪಟ್ಟ ಇಲಾಖೆಯಿಂದ ಅಗತ್ಯ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಷರತ್ತಿಗೊಳಪಟ್ಟು ಪೂರ್ಣ ಶುಲ್ಕ **ವಿನಾಯಿತಿ** ಇರುತ್ತದೆ.
   - ಸರ್ಕಾರವು ಅಗಿಂದ್ದಾಗ್ಗೆ ನಿಗದಿಪಡಿಸಿರುವ ಹಾಗೂ ಚಾಲ್ತಿಯಲ್ಲಿರುವ ಆದೇಶಗಳನ್ವಯ ದೃಷ್ಠಿ ದೋಷವುಳ್ಳ ಅಭ್ಯರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ ಇರುತ್ತದೆ (**ಬಿ.ಎಡ್. ಮತ್ತು ಎಂ.ಬಿ.ಎ. ಹೊರತುಪಡಿಸಿ**).
4. ಪ್ರಥಮ / ದ್ವಿತಿಯ ಯುಜಿ/ಪಿಜಿ ಶಿಕ್ಷಣ ಕ್ರಮ ಪೂರೈಸಿ ಕಾರಣಾಂತರದಿಂದ ಪದವಿಯನ್ನು ಪೂರ್ಣಗೊಳಿಸಿಕೊಂಡಿಲ್ಲದ ವಿದ್ಯಾರ್ಥಿಗಳು ಕರಾಮುವಿಯ ನಿಯಮಗಳಿಗೆ ಒಳಪಟ್ಟು ದ್ವಿತೀಯ/ತೃತೀಯ ಯುಜಿ/ಪಿಜಿ ಶಿಕ್ಷಣ ಕ್ರಮಗಳಿಗೆ ನೇರ ಪ್ರವೇಶಾತಿ ಪಡೆಯಬಹುದಾಗಿದೆ. ವಿದ್ಯಾರ್ಥಿಗಳು ಈ ಸಂಬಂಧ ಅಂತರ್‌ಜಾಲದಲ್ಲಿ ಪ್ರಕಟಿಸಿರುವ ಸುತ್ತೋಲೆಯನ್ವಯ ಕ್ರಮಗಳನ್ನು ಅನುಸರಿಸುವುದು.
5. **ಬೋಧನಾ ಸಾಮಗ್ರಿಗಳ ಸ್ಟಾಪ್‌ಪ್ರತಿಯುಳ್ಳ ಶಿಕ್ಷಣ ಕ್ರಮಗಳಿಗೆ ಬೋಧನಾ ಶುಲ್ಕದಲ್ಲಿ ಶೇ.10% ರಷ್ಟು ರಿಯಾಯಿತಿ ಇರುತ್ತದೆ.**
6. ಅಧಿಕೃತ ಕಲಿಕಾರ್ಥಿ ಸಹಾಯ ಕೇಂದ್ರಗಳ ವಿವರಗಳು ವಿವಿಯ ಅಂತರ್‌ಜಾಲದಲ್ಲಿ ಲಭ್ಯವಿದ್ದು ಸಮಾಲೋಚನೆಗೆ ಸಂಪರ್ಕಿಸಬಹುದಾಗಿದೆ
   - ಐಟಿಐ ವಿದ್ಯಾರ್ಹತೆ ಹೊಂದಿರುವವರಿಗೆ ಅಪ್ರೆಂಟಿಸ್‌ಶಿಪ್ ಹಾಗೂ ಸ್ಟೈಫೆಂಡ್ ಅವಕಾಶಗಳಿರುತ್ತವೆ.

ಕರಾಮುವಿ ಪ್ರಾದೇಶಿಕ ಕೇಂದ್ರಗಳು

1. **ಮೈಸೂರು (ಕೇಂದ್ರ ಕಚೇರಿ)** : ಪ್ರವೇಶಾತಿ ವಿಭಾಗ, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು-570 006, ದೂ (ಕ): 0821-2500981, ಮೊಬೈಲ್: / 96114 18726 / 81234 69017 / 99453 66062 / 88845 21558 / 98440 10407.
2. **ಬೆಂಗಳೂರು-1 ಪ್ರಾದೇಶಿಕ ಕೇಂದ್ರ** : ಸ್ಯಾಟಲೈಟ್ ಬಸ್ ನಿಲ್ದಾಣ ಕಟ್ಟಡ, 1ನೇ ಮಹಡಿ, ಮೈಸೂರು ರಸ್ತೆ, **ಬಾಪೂಜಿನಗರ,** ಬೆಂಗಳೂರು-560 026. ದೂ: 080-26603664, ಮೊಬೈಲ್: 9844965515 / 98441 26625.
3. **ಬೆಂಗಳೂರು-2 ಪ್ರಾದೇಶಿಕ ಕೇಂದ್ರ** : ಕರಾಮುವಿ ಮಹಿಳಾ ಪ್ರಾದೇಶಿಕ ಕೇಂದ್ರ, ಸರ್ಕಾರಿ ಬಾಲಕಿಯರ ಪಿ.ಯು. ಕಾಲೇಜ್, 4ನೇ ಮೇನ್, 13ನೇ ಕ್ರಾಸ್, ಬೆಸ್ಕಾಂ ಕಚೇರಿ ಹತ್ತಿರ, **ಮಲ್ಲೇಶ್ವರಂ,** ಬೆಂಗಳೂರು-560 003. ದೂ: 080-23448811, ಮೊಬೈಲ್ : 97411 97921 / 94835 17160.
4. **ಬೆಂಗಳೂರು-3 ಪ್ರಾದೇಶಿಕ ಕೇಂದ್ರ** : ಆಕ್ಸ್‌ಫರ್ಡ್ ಎಜುಕೇಷನಲ್ ಟ್ರಸ್ಟ್, ಶ್ರೀನಿವಾಸಪುರ, ಕೋಗಿಲು ಮುಖ್ಯ ರಸ್ತೆ, **ಯಲಹಂಕ**, ಬೆಂಗಳೂರು-560 064, ಮೊಬೈಲ್: 98805 26439 / 90195 26439.
5. **ಬೆಂಗಳೂರು-4 ಪ್ರಾದೇಶಿಕ ಕೇಂದ್ರ:** ನಂ.121, 2ನೇ ಮಹಡಿ, **ಮಡಿವಾಳ,** ಮಡಿವಾಳ ಸಂಚಾರಿ ಪೊಲೀಸ್ ಸ್ಟೇಷನ್ ಹಿಂಭಾಗ, ಹ್ಯಾಪಿಯೆಸ್ಟ್ ಮೈಂಡ್ ಹತ್ತಿರ, ಹೊಸೂರು ಮುಖ್ಯ ರಸ್ತೆ, ಬೆಂಗಳೂರು-560 068. ದೂ: 080-23158888, ಮೊಬೈಲ್ : 8618821417.
6. **ಬೆಂಗಳೂರು-5 ಪ್ರಾದೇಶಿಕ ಕೇಂದ್ರ:** ಸರಕಾರಿ ಪ್ರಥಮ ದರ್ಜೆ ಕಾಲೇಜು ಆವರಣ, **ಕೆ.ಆರ್. ಪುರಂ,** ಬೆಂಗಳೂರು-560 036. ಮೊಬೈಲ್: 87227 88788.
7. **ಬೆಂಗಳೂರು-6 ಪ್ರಾದೇಶಿಕ ಕೇಂದ್ರ:** ಶ್ರೀ ಲಕ್ಷ್ಮೀ ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸ್ ಆವರಣ, ನಂ.4 ಮತ್ತು 5, ಶ್ರೀ ಗಂಧಕಾವಲ್, ಮಾಗಡಿ ಮುಖ್ಯ ರಸ್ತೆ, **ಸುಂಕದಕಟ್ಟೆ,** ಬೆಂಗಳೂರು-560 091. ಮೊಬೈಲ್: 84534 58238 / 98445 56968.
8. **ಬೆಳಗಾಂ ಪ್ರಾದೇಶಿಕ ಕೇಂದ್ರ** : ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಶಿಕ್ಷಣ ಮಹಾವಿದ್ಯಾಲಯ ಆವರಣ, ನೆಹರು ನಗರ, ಬೆಳಗಾಂ-590 010. ಮೊಬೈಲ್: 96634 51169.
9. **ಬಳ್ಳಾರಿ ಪ್ರಾದೇಶಿಕ ಕೇಂದ್ರ** : ಪ್ರಾದೇಶಿಕ ವಿಜ್ಞಾನ ಕೇಂದ್ರದ ಹಿಂಭಾಗ, ಜಿಲ್ಲಾ ಕ್ರೀಡಾಂಗಣದ ಹತ್ತಿರ, ನಲ್ಲಚೆರವು ಪ್ರದೇಶ, ಬಳ್ಳಾರಿ-583 102. ಮೊಬೈಲ್: 78925 97159.
10. **ಚಾಮರಾಜನಗರ ಪ್ರಾದೇಶಿಕ ಕೇಂದ್ರ** : ಕೆ.ಹೆಚ್.ಬಿ. ಕಾಲೋನಿ, ರಾಮಸಮುದ್ರ ಲೇಔಟ್, ಇಮ್ಮಾನ್ಯುಯೆಲ್ ಕ್ರಿಶ್ಚಿಯನ್ ಪಬ್ಲಿಕ್ ಸ್ಕೂಲ್ ಹತ್ತಿರ, ಚಾಮರಾಜನಗರ-571342, ಮೊಬೈಲ್: 99803 02686.
11. **ಚಿಕ್ಕಮಗಳೂರು ಪ್ರಾದೇಶಿಕ ಕೇಂದ್ರ** : ಸಾಯಿಮಂದಿರ ರಸ್ತೆ, ಮಧುವನ ಬಡಾವಣೆ, ಚಿಕ್ಕಮಗಳೂರು-577 102, ಮೊಬೈಲ್: 80887 16236.
12. **ದಾವಣಗೆರೆ ಪ್ರಾದೇಶಿಕ ಕೇಂದ್ರ** : ಜೆ. ಹೆಚ್. ಪಟೇಲ್ ಬಡಾವಣೆ, ಶಾಮನೂರು-ನಾಗನೂರು ರಸ್ತೆ ಹಿಂಭಾಗ, ದಾವಣಗೆರೆ-577 004, ಮೊಬೈಲ್: 99864 58055.
13. **ಧಾರವಾಡ ಪ್ರಾದೇಶಿಕ ಕೇಂದ್ರ** : ಅಮರಗೋಳ 2ನೇ ಹಂತ, ಜಡ್ಜ್ ಕಾಲೋನಿ ಹತ್ತಿರ, ಕಡೆಯ ಬಸ್ ನಿಲ್ದಾಣ, ನವನಗರ, ಹುಬ್ಬಳ್ಳಿ-580025. ದೂ: 0836-2441199, ಮೊಬೈಲ್: 99168 94944.
14. **ಹಾಸನ ಪ್ರಾದೇಶಿಕ ಕೇಂದ್ರ** : ಎಸ್. ಎಂ. ಕೃಷ್ಣ ನಗರ, ಅರಸೀಕೆರೆ ರಸ್ತೆ, ದೊಡ್ಡಪುರ ಅಂಚೆ, ಬಿ. ಟಿ. ಕೊಪ್ಪಲು, ಹಾಸನ-573 118, ಮೊಬೈಲ್: 81978 18807 / 94826 03060.
15. **ಕಲಬುರ್ಗಿ ಪ್ರಾದೇಶಿಕ ಕೇಂದ್ರ** : ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿಶ್ವವಿದ್ಯಾನಿಲಯ ಆವರಣ, ಕಲ್ಬುರ್ಗಿ-585 106, ಮೊಬೈಲ್: 99167 83555.
16. **ಕಾರವಾರ ಪ್ರಾದೇಶಿಕ ಕೇಂದ್ರ** : ಯು.ಎಸ್.ಕೆ.ವಿ ಹಳೆ ಕಟ್ಟಡ, ಮೊದಲನೇ ಮಹಡಿ, ಸವಿತ ಸರ್ಕಲ್ ಮುಖ್ಯ ರಸ್ತೆ, ಕಾರವಾರ-581 301, ಮೊಬೈಲ್: 99006 67916.
17. **ಕೋಲಾರ ಪ್ರಾದೇಶಿಕ ಕೇಂದ್ರ** : ಎಸ್. ಪಿ. ಕಚೇರಿ ಹಿಂಭಾಗ, ಆರ್. ಎಲ್. ಜಾಲಪ್ಪ ಆಸ್ಪತ್ರೆ ಸಮೀಪ, ಕೋಲಾರ-563 101, ಮೊಬೈಲ್: 89702 23247.
18. **ಮಂಡ್ಯ ಪ್ರಾದೇಶಿಕ ಕೇಂದ್ರ** : # ನಂ. 11(ಎ), 'ಇ' ಬ್ಲಾಕ್, ವಿವೇಕಾನಂದ ನಗರ ಲೇಔಟ್, ಕೆರ ಅಂಗಳ, ಸಂತೆಮಾಳ, ಮೇಲುಕೋಟೆ ರಸ್ತೆ, ಮಂಡ್ಯ-571 401. ಮೊಬೈಲ್: 97419 90284.
19. **ಮಂಗಳೂರು ಪ್ರಾದೇಶಿಕ ಕೇಂದ್ರ** : ಕಸ್ಟಮ್ ಕ್ವಾಟರ್ಸ್ ಎದುರು, 4ನೇ ಕ್ರಾಸ್, ದತ್ತನಗರ, ಮಂಗಳೂರು-575 016, ಮೊಬೈಲ್: 99450 58950 / 99721 96692.
20. **ರಾಮನಗರ ಪ್ರಾದೇಶಿಕ ಕೇಂದ್ರ** : ನಂ. 103, 'ಇ' ಬ್ಲಾಕ್, ಶಾಂತಿನಿಕೇತನ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಬಿ.ಎಂ. ರಸ್ತೆ, ವಿವೇಕಾನಂದ ನಗರ, ರಾಮನಗರ-562 159, ಮೊಬೈಲ್: 94486 68880 / 88617 32487.
21. **ಶಿವಮೊಗ್ಗ ಪ್ರಾದೇಶಿಕ ಕೇಂದ್ರ** : ಅಲ್ಕೊಳ ಸರ್ಕಲ್, ಎಲ್.ಐ.ಸಿ. ಕಚೇರಿ ಹತ್ತಿರ, ಸಾಗರ ರಸ್ತೆ, ಶಿವಮೊಗ್ಗ-577 201, ದೂ: 08182-250367, ಮೊಬೈಲ್: 91644 67131.
22. **ತುಮಕೂರು ಪ್ರಾದೇಶಿಕ ಕೇಂದ್ರ** : ಸಿಎ-07, ಟೂಡಾ ಲೇಔಟ್, ರಾಜೀವ್‌ಗಾಂಧಿ ನಗರ, ಮೆಳೆಕೋಟೆ, ಗಂಗಸಂದ್ರ ಮುಖ್ಯ ರಸ್ತೆ, ತುಮಕೂರು-572 105, ದೂ: 0816-2955580, ಮೊಬೈಲ್: 98445 06629.
23. **ಉಡುಪಿ ಪ್ರಾದೇಶಿಕ ಕೇಂದ್ರ** : ಜಿಲ್ಲಾ ಪಂಚಾಯತ್ ಕಚೇರಿ ಹಳೇ ಕಟ್ಟಡ, 2ನೇ ಮಹಡಿ, ಬನ್ನಂಜೆ, ಉಡುಪಿ-576 101, ದೂ: 0820-2522247, ಮೊಬೈಲ್: 99725 26647.
24. **ಬೀದರ್-1 ಪ್ರಾದೇಶಿಕ ಕೇಂದ್ರ** : ಸರ್ಕಾರಿ ಪ್ರ.ದ. ಕಾಲೇಜು, **ನೌಬಾದ್,** ಬೀದರ್-585 402, ದೂ: 08482-232020, ಮೊಬೈಲ್: 99866 96487.
25. **ಬೀದರ್-2 ಪ್ರಾದೇಶಿಕ ಕೇಂದ್ರ** : ಕರ್ನಾಟಕ ಪಬ್ಲಿಕ್ ಸ್ಕೂಲ್, **ಗೊರಟ (ಬಿ) ಗ್ರಾಮ,** ಹಲಸೂರು ತಾ॥. ಬೀದರ್-585 327, ಮೊಬೈಲ್: 99866 96487.
26. **ಬಾಗಲಕೋಟೆ ಪ್ರಾದೇಶಿಕ ಕೇಂದ್ರ** : ಬಿ.ವಿ.ವಿ.ಎಸ್. ಜನಶಿಕ್ಷಣ ಸಂಸ್ಥೆ ಕ್ಯಾಂಪಸ್, ಬಸವೇಶ್ವರ ಸ್ವತಂತ್ರ ಪಿ.ಯು. ಕಾಲೇಜ್ ಪಕ್ಕ, ವಿದ್ಯಗಿರಿ, ಬಾಗಲಕೋಟೆ-587 103, ಮೊಬೈಲ್: 70222 22241 / 88610 40975.
27. **ಮಡಿಕೇರಿ ಪ್ರಾದೇಶಿಕ ಕೇಂದ್ರ:** ಜೂನಿಯರ್ ಕಾಲೇಜು ಕ್ಯಾಂಪಸ್, ಫೀಲ್ಡ್ ಮಾರ್ಷಲ್ ಕಾರ್ಯಪ್ಪ, ಇಂಡೋರ್ ಸ್ಟೇಡಿಯಂ, ಮಡಿಕೇರಿ-571 201, ಮೊಬೈಲ್: 80733 42310 / 91419 38803.
28. **ಕೊಳ್ಳೇಗಾಲ ಪ್ರಾದೇಶಿಕ ಕೇಂದ್ರ:** ಹರಿಚರಣ್ ಆರ್ಕೆಡ್, 2ನೇ ಮಹಡಿ, ಸೌತ್ ಎಕ್ಸ್‌ಟೆನ್‌ಷನ್, ಮಹದೇಶ್ವರ ಕಲ್ಯಾಣ ಮಂಟಪದ ಎದುರು, ಕೊಳ್ಳೇಗಾಲ-571 440. ಮೊಬೈಲ್: 99807 40048.
29. **ಚಿತ್ರದುರ್ಗ ಪ್ರಾದೇಶಿಕ ಕೇಂದ್ರ:** ಡಾನ್ ಬಾಸ್ಕೋ ಪದವಿ ಕಾಲೇಜು ಆವರಣ, ಬಿಸಿಎಂ ಹಾಸ್ಟೆಲ್ ಹತ್ತಿರ, ಶನಿಮಹಾತ್ಮ ದೇವಸ್ಥಾನ ರಸ್ತೆ, ಚಳ್ಳಕೆರೆ ರಸ್ತೆ, ಚಿತ್ರದುರ್ಗ-577501. ಮೊಬೈಲ್: 74066 12788.
30. **ಹಾವೇರಿ ಪ್ರಾದೇಶಿಕ ಕೇಂದ್ರ:** ಶ್ರೀ ಶಿವಲಿಂಗೇಶ್ವರ ವಿದ್ಯಾಪೀಠ, ಹುಕ್ಕೇರಿಮಠ, ಹಾವೇರಿ-581110. ಮೊಬೈಲ್: 97432 76734.
31. **ಚಿಕ್ಕಬಳ್ಳಾಪುರ ಪ್ರಾದೇಶಿಕ ಕೇಂದ್ರ:** ಸರ್ಕಾರಿ ಪ್ರಥಮ ದರ್ಜೆ (ಪುರಸಭೆ) ಕಾಲೇಜು, ಎಂ. ಜಿ. ರಸ್ತೆ, ಚಿಕ್ಕಬಳ್ಳಾಪುರ-562101. ಮೊಬೈಲ್: 91643 00299.
32. **ರಾಯಚೂರು ಪ್ರಾದೇಶಿಕ ಕೇಂದ್ರ:** ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಿಜಲಿಂಗಪ್ಪ ಕಾಲೋನಿ, ವಾಲ್ಮೀಕಿ ಸರ್ಕಲ್ ಹತ್ತಿರ, ಲಿಂಗಸಗೂರು ರಸ್ತೆ, ರಾಯಚೂರು-584101. ಮೊಬೈಲ್: 96866 19555.
33. **ಯಾದಗಿರಿ ಪ್ರಾದೇಶಿಕ ಕೇಂದ್ರ:** ಸರ್ಕಾರಿ ಪದವಿ ಕಾಲೇಜು, ಚಿತ್ತಾಪುರ ರಸ್ತೆ, ಯಾದಗಿರಿ-585202 ಮೊಬೈಲ್: 98800 61361.
34. **ವಿಜಯಪುರ ಪ್ರಾದೇಶಿಕ ಕೇಂದ್ರ** : ವಿಎಸ್‌ಜಿ, ಕಲಾ ಮತ್ತು ವಾಣಿಜ್ಯ ಕಾಲೇಜು ಆವರಣ, ನಂ.680/ಇ, ಆಕಾಶವಾಣಿ ಕೇಂದ್ರದ ಎದುರು, ರಿಂಗ್ ರಸ್ತೆ, ವಿಜಯಪುರ-586 103. ಮೊಬೈಲ್: 94836 28267.
35. **ಕೊಪ್ಪಳ ಪ್ರಾದೇಶಿಕ ಕೇಂದ್ರ** : ನಗರಾಭಿವೃದ್ಧಿ ಪ್ರಾಧಿಕಾರ ಕಾರ್ಯಾಲಯದ ಕಟ್ಟಡ, ಮೊದಲನೇ ಮಹಡಿ, ಗೋವನಕೊಪ್ಪ ಆಸ್ಪತ್ರೆ ಎದುರು, ಹೊಸಪೇಟೆ ರಸ್ತೆ, ಕೊಪ್ಪಳ-583 231, ಮೊಬೈಲ್: 90085 88675 / 87225 88675.
36. **ಗದಗ ಪ್ರಾದೇಶಿಕ ಕೇಂದ್ರ** : ಡಾ॥ ಪಂಡಿತ್ ಪುಟ್ಟರಾಜಗವಾಯಿ, ಐ.ಟಿ.ಐ. ಕಾಲೇಜು, ಎಲ್.ಎಲ್. ಬಿಲ್ಡಿಂಗ್, (ಹಳೆ ಡಿಸಿ ಅಫೀಸ್ ಸರ್ಕಲ್), ಜನರಲ್ ಕಾರ್ಯಪ್ಪ ಸರ್ಕಲ್, ಗದಗ-582 101. ಮೊಬೈಲ್: 86189 29376. / 88842 31220.
37. **ವಿಜಯನಗರ (ಹೊಸಪೇಟೆ) ಪ್ರಾದೇಶಿಕ ಕೇಂದ್ರ** : ಕನ್ನಡ ವಿಶ್ವವಿದ್ಯಾನಿಲಯ, ವಿದ್ಯಾರಣ್ಯ, ಹಂಪಿ, ವಿಜಯನಗರ ಜಿಲ್ಲೆ-583 276, ಮೊಬೈಲ್: 99451 71920.
38. **ಪಿರಿಯಾಪಟ್ಟಣ ಪ್ರಾದೇಶಿಕ ಕೇಂದ್ರ** : ಡಿ.ಪಿ.ಬಿ.ಎಸ್. ಸರ್ಕಾರಿ ಬಾಲಕರ ಪಿಯು ಕಾಲೇಜು ಕ್ಯಾಂಪಸ್ (ಪ್ರೌಢಶಾಲಾ ವಿಭಾಗ), ಬಿ.ಎಂ. ರಸ್ತೆ, ಬೆಟ್ಟದಪುರ ಸರ್ಕಲ್ ಹತ್ತಿರ, ಪಿರಿಯಾಪಟ್ಟಣ ತಾಲ್ಲೂಕು - 571107. ಮೊಬೈಲ್: 99014 23273.

ಪ್ರವೇಶಾತಿಯ ಪ್ರಾರಂಭದ ದಿನಾಂಕ: 10.02.2025

ತರಗತಿ ಹಾಗೂ ಪರೀಕ್ಷೆಗಳನ್ನು ಪ್ರಾದೇಶಿಕ ಕೇಂದ್ರ / ಕಲಿಕೆ ಸಹಾಯ ಕೇಂದ್ರಗಳಲ್ಲಿ ನಡೆಸಲಾಗುವುದು.

ಸಹಿ/-, ಕುಲಸಚಿವರು

ಭಂಡಾರ ಪ್ರಿಯೆ ಗುಡ್ಡದ ಯಲ್ಲಮ್ಮ 9

ಸುಂದರ ಕಲಾ ಮ್ಯೂಸಿಯಂ ಸತ್ವದ ಅಭಯಾರಣ್ಯ 11

ಹೀಗಿದೆ ನಮ್ ಟೀಂ... ಚಿತ್ರಗಳು: ಅನೂಪ್ ರಾಘ ಟಿ.

ರಾಜ್ಯಕ್ಕೊಂದೇ ಕೊಕ್ಕೊ ಕುರುಬೂರು

> ಕೊಕ್ಕೊ ವಿಶ್ವಕಪ್‌ನಲ್ಲಿ ಚೈತ್ರಾ ಮಿಂಚುವಾಗ ತಮ್ಮ ಸೋಷಿಯಲ್ ಮೀಡಿಯಾ ಅಕೌಂಟ್‌ನಲ್ಲಿ ಅಭಿನಂದನೆ ಮತ್ತು ಮೆಚ್ಚುಗೆಯ ಮಹಾಪೂರವನ್ನೇ ಸಚಿವರು, ಶಾಸಕರು, ಸಂಘ–ಸಂಸ್ಥೆಯವರು ಹರಿಸಿದರು. ಆದರೆ ಇಷ್ಟರಿಂದಲೇ ಕುರುಬೂರು ಹೆಣ್ಣುಮಕ್ಕಳು ಕೊಕ್ಕೊ ಆಟದಲ್ಲಿ ಉನ್ನತಿಗೇರಲು ಸಾಧ್ಯವಿಲ್ಲ. ಇಲ್ಲೊಂದು ಕೊಕ್ಕೊ ಅಕಾಡೆಮಿ ಆಗಬೇಕು. ಆಗ ಮಾತ್ರ ಅಭಿನಂದನೆಗೆ ಬೆಲೆ ಬರುತ್ತದೆ.

ಕುಸುಮಾ ಆಯರಹಳ್ಳಿ

ಗೊಬ್ಬಳಿ ಮರದ ಪೋಲ್‌ಗೆ ಅಲ್ಲಿದ್ದ ಹುಡುಗಿಯರೆಲ್ಲ ಕೈಮುಗಿದು ಪ್ರಾರ್ಥನೆ ಸಲ್ಲಿಸಿದರು. ಬಳಿಕ ಕೊಕ್ಕೊ ಅಭ್ಯಾಸಕ್ಕಾಗಿ ಕೋರ್ಟ್‌ಗೆ ನುಗ್ಗಿದರು. ಚಿಗರೆಯಂತೆ ಓಡುತ್ತಿದ್ದವರನ್ನು ಹಿಡಿಯುವ ಗುರಿ ಅವರದು, ಮೀನಿನಂತೆ ಜಾರಿಕೊಳ್ಳುವ ತಂತ್ರ ಇವರದು- ಹೀಗೆ ಓಡುವ, ಹಿಡಿಯುವ ಆಟ ಜೋರಾಗಿಯೇ ನಡೆಯಿತು. ಇಡೀ ಮೈ ಬೆವರಿನಿಂದ ಸ್ನಾನ ಮಾಡಿತ್ತು. ಅವರ ಅಭ್ಯಾಸದ ಬಿಡುವಿನಲ್ಲಿ ಮಾತಿಗೆ ಕುಳಿತೆ.

'ನೀವು ಯಾಕೆ ಆ ಗೊಬ್ಬಳಿ ಮರದ ಪೋಲ್‌ಗೆ ನಮಸ್ಕರಿಸಿದ್ದು' ಕೇಳಿದೆ. 'ನಮಗೆ ಇಂದಿಗೂ ಸರಿಯಾದ ಕೊಕ್ಕೊ ಕೋರ್ಟ್ ಇಲ್ಲ. ಶುರುವಿನಲ್ಲಿ ಶಾಲೆ ಹಿಂದೆ ಇದ್ದ ತೆಂಗಿನತೋಟದಲ್ಲಿ ನಮ್ಮ ಅಭ್ಯಾಸ ನಡೆಯುತ್ತಿತ್ತು. ಆ ಕೋರ್ಟ್ ಹೇಗಿತ್ತು ಅಂದ್ರೆ ಉದ್ದ ಸಾಕಾಗುತ್ತಿತ್ತು, ಆದರೆ ಅಗಲ ಕೇಳಲೇಬೇಡಿ. ಆಗ ನಮಗೆ ಸರಿಯಾಗಿ ಎರಡು ಪೋಲ್‌ಗಳೂ ಇರಲಿಲ್ಲ. ಅಲ್ಲೇ ಇದ್ದ ಗೊಬ್ಬಳಿ ಮರ ಕಡಿದು ಎರಡು ಪೋಲ್‌ಗಳನ್ನು ಮಾಡಿಕೊಂಡೆವು. ವರ್ಷಗಳ ನಂತರ ಒಂದು ಪೋಲ್ ಹಾಳಾಯ್ತು. ಇನ್ನೊಂದನ್ನು ಅಂದಿನಿಂದಲೂ ಇಟ್ಟುಕೊಂಡು ಹೀಗೆ ನಮಸ್ಕರಿಸಿ ಅಭ್ಯಾಸ ಶುರು ಮಾಡುತ್ತೇವೆ' ಎಂದು ಕೋಚ್ ಮಂಜುನಾಥ್ ಹೇಳಿದರು.

ಇದು ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕಿನ ಕುರುಬೂರು ಹೆಣ್ಣುಮಕ್ಕಳ ಕೊಕ್ಕೊ ಅಭ್ಯಾಸದ ಕಥೆ. ಕೊಕ್ಕೊ ವಿಶ್ವಕಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿ 'ಪ್ಲೇಯರ್ ಆಫ್ ದಿ ಮ್ಯಾಚ್' ಪ್ರಶಸ್ತಿ ಗೆದ್ದ ಚೈತ್ರಾ ಇದೇ ಊರಿನವರು. ಇಲ್ಲಿ ನೂರಕ್ಕೂ ಹೆಚ್ಚು ಹೆಣ್ಣುಮಕ್ಕಳು ಕೊಕ್ಕೊಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ. ರಾಜ್ಯ, ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ. ಹೀಗಾಗಿಯೇ ಈ ಊರಿಗೆ 'ಕೊಕ್ಕೊ ಕುರುಬೂರು' ಎನ್ನುವ ಹೆಸರನ್ನು ಜನರೇ ಕೊಟ್ಟಿದ್ದಾರೆ.

ವಿಶ್ವಕಪ್ ಜಯಿಸಿದ ಕಾರಣಕ್ಕಾಗಿ ಚೈತ್ರಾ ಹೆಸರು ಎಲ್ಲೆಡೆ ಕೇಳಿಬರುತ್ತಿದೆ. ಅಚ್ಚರಿಯ ವಿಷಯವೆಂದರೆ ಇದೇ ಹಳ್ಳಿಯ ವಿದ್ಯಾದರ್ಶಿನಿ ಶಾಲೆಯಲ್ಲಿ ನೂರಾರು ಕೊಕ್ಕೊ ಪ್ರತಿಭೆಗಳಿವೆ. ಒಂದೇ ಹಳ್ಳಿಯಲ್ಲಿ ಮನೆ ಮನೆಗೂ ಪ್ರತಿಭಾವಂತ ಆಟಗಾರ್ತಿಯರು ಇರುವುದು ಬಹುಶಃ ಇದೊಂದೇ ಗ್ರಾಮದಲ್ಲಿ ಅನಿಸುತ್ತದೆ.

ಚೈತ್ರಯಾತ್ರೆಗೆ ಮುನ್ನುಡಿ

ವಿದ್ಯಾದರ್ಶಿನಿ ಶಾಲೆಯ ವಿದ್ಯಾರ್ಥಿನಿಯರು ತಾವೇ ಕೊಕ್ಕೊ ತಂಡ ಮಾಡಿಕೊಂಡು ಹೋಬಳಿ ಮಟ್ಟದ ಪಂದ್ಯಾವಳಿಗೆ ತಯಾರಿ ನಡೆಸಿರುತ್ತಾರೆ. ಮಂಜುನಾಥ್ ಎನ್ನುವವರು ಶಾಲೆಗೆ ಹೊಸದಾಗಿ ಗಣಿತದ ಶಿಕ್ಷಕರಾಗಿ ಬಂದಿರುತ್ತಾರೆ. ಮಕ್ಕಳು ಅಭ್ಯಾಸ ಮಾಡುವುದನ್ನು ಸುಮ್ಮನೆ ಗಮನಿಸುತ್ತಿರುತ್ತಾರೆ. ಹೋಬಳಿ ಮಟ್ಟದ ಸ್ಪರ್ಧೆಯಲ್ಲಿ ಸೋತ ಮಕ್ಕಳು ಪೆಚ್ಚು ಮೋರೆ ಹಾಕಿ ಅಳುತ್ತಾ ಬಂದಿರುತ್ತಾರೆ. ಆಗ ಮಂಜುನಾಥ್ ಅವರಿಗೆ ಬೇಸರವಾಗುತ್ತದೆ. 'ಮುಂದಿನ ವರ್ಷ ಖಂಡಿತ ಗೆಲ್ಲುತ್ತೀರಿ, ನಾನು ನಿಮ್ಮನ್ನು ತಯಾರು ಮಾಡುತ್ತೇನೆ' ಎಂದು ಸಮಾಧಾನಿಸುತ್ತಾರೆ. ಮಂಜುನಾಥ್ ಅವರಿಗೆ ಕೊಕ್ಕೊ ಬಗ್ಗೆ ಅಷ್ಟೇನೂ ಗೊತ್ತಿರುವುದಿಲ್ಲ. ಮೊದಲಿಗೆ ಕೊಕ್ಕೊ ಸಂಬಂಧಿಸಿದ ಪುಸ್ತಕಗಳನ್ನು ಅಭ್ಯಾಸ ಮಾಡುತ್ತಾರೆ. ಟಿವಿಯಲ್ಲಿ ಕೊಕ್ಕೊ ಪಂದ್ಯಗಳನ್ನು ನಿರಂತರವಾಗಿ ನೋಡುತ್ತಾ ಪಟ್ಟುಗಳನ್ನು ಪಟ್ಟಿ ಮಾಡಿಕೊಳ್ಳುತ್ತಾರೆ. ಅದನ್ನು ಅನುಸರಿಸಿ ಮಕ್ಕಳನ್ನು ತಯಾರು ಮಾಡುತ್ತಾರೆ. ಆ ವರ್ಷ ರಂಗಸಮುದ್ರವನ್ನು (ಆಗಿನ ಬಲಿಷ್ಠ ತಂಡ) ಕುರುಬೂರು ತಂಡ ಸೋಲಿಸುತ್ತದೆ. 2009ರ ಈ ಗೆಲುವು ತಂಡಕ್ಕೆ ಕಡಲಷ್ಟು ಆತ್ಮವಿಶ್ವಾಸ ತಂದು ಕೊಡುತ್ತದೆ. ಇನ್ನಷ್ಟು ಶ್ರಮ ಹಾಕಿ, ನಿರಂತರ ಅಭ್ಯಾಸ ಮಾಡುತ್ತಾರೆ. ಹೋಬಳಿ, ತಾಲ್ಲೂಕು, ಜಿಲ್ಲಾ ಮಟ್ಟ, ಇಷ್ಟೇ ಏಕೆ ಹೋದಲ್ಲೆಲ್ಲಾ ಕಪ್‌ಗಳು, ಟ್ರೋಫಿಗಳನ್ನು ಗೆದ್ದು ಬರುತ್ತಲೇ ಇರುತ್ತಾರೆ. ಊರಿನ ಜನ 'ಮಕ್ಕಳು ಏನೋ ಆಟ ಆಡ್ಕತವೆ' ಅಂದುಕೊಂಡಿದ್ದರು. ಕಪ್‌ಗಳು, ಟ್ರೋಫಿಗಳನ್ನು ಕಂಡು ಪುಳಕಿತರಾಗಿ 'ಭೇಷ್' ಎಂದು ಬೆನ್ನುತಟ್ಟತೊಡಗಿದರು. ಮಕ್ಕಳ ಬೆಳವಣಿಗೆ ಮೇಲೆ ಹೆಚ್ಚು ನಿಗಾ ಇಟ್ಟು ಉತ್ತೇಜಿಸತೊಡಗಿದರು. ವರ್ಷಗಳು ಕಳೆದಂತೆ ಕುರುಬೂರಿನ ಹುಡುಗಿಯರು ರಾಜ್ಯಮಟ್ಟದ ತಂಡಕ್ಕೂ ಆಯ್ಕೆಯಾದರು.

ಇದು 2010ರಲ್ಲಿ ನಡೆದ ಘಟನೆ. ಕುರುಬೂರಿನ ಮೇಘಾ ಎಂಬ ಆಟಗಾರ್ತಿಯನ್ನು ರಾಷ್ಟ್ರಮಟ್ಟದ ಕೊಕ್ಕೊ ಪಂದ್ಯಾವಳಿಗಾಗಿ ಕರೆತರಲು ಮಂಜುನಾಥ್ ಅವರಿಗೆ ಸೂಚಿಸಲಾಗುತ್ತದೆ. ಅದಾಗಲೇ ಮೇಘಾ, ಲತಾ ಮತ್ತು ನಮ್ರತಾ ದಾವಣಗೆರೆಯ ಅಥ್ಲೆಟಿಕ್ಸ್‌ಗೆ ಹೋಗಿರುತ್ತಾರೆ. 'ರಾಷ್ಟ್ರಮಟ್ಟದಲ್ಲಿ ಆಡುವುದು ಅಪರೂಪದ ಅವಕಾಶ. ಸಾಧ್ಯವಾದರೆ ನಾಳೆಯೇ ಕರೆತನ್ನಿ' ಎಂದಿರುತ್ತಾರೆ ಅವರು. ಆಗ ಮಂಜುನಾಥ್ ರಾತ್ರೋರಾತ್ರಿ ಹೊರಟು, ದಾವಣಗೆರೆ ತಲುಪಿ ಮೇಘಾ ಅವರನ್ನು ಕರೆತಂದು ಬೆಂಗಳೂರಿಗೆ ಬಿಡುತ್ತಾರೆ. ಮೇಘಾ ಆ ವರ್ಷ ಕರ್ನಾಟಕ ತಂಡಕ್ಕಾಗಿ ಆಡುತ್ತಾರೆ. ತಂಡ 'ರನ್ನರ್ ಅಪ್' ಆಗುತ್ತದೆ. ಮೇಘಾ 'ಅತ್ಯುತ್ತಮ ಆಟಗಾರ್ತಿ' ಪ್ರಶಸ್ತಿ ಪಡೆಯುತ್ತಾರೆ. 2016ರಲ್ಲಿ ಮೇಘಾ ಮತ್ತು ವೀಣಾ ದಕ್ಷಿಣ ಏಷಿಯನ್ ರಾಷ್ಟ್ರಗಳ ಕ್ರೀಡಾಕೂಟದಲ್ಲಿ ಆಡಿ, ಚಿನ್ನದ ಪದಕ ತಂದುಕೊಡುತ್ತಾರೆ. ಇದು ಕುರುಬೂರು ತಂಡಕ್ಕೆ ತಾವು ರಾಷ್ಟ್ರಮಟ್ಟದಲ್ಲೂ ಆಡಬಹುದೆಂಬ ಅಪಾರ ವಿಶ್ವಾಸವನ್ನು ಹುಟ್ಟಿಸುತ್ತದೆ. ತುಂಬಾ ಮಕ್ಕಳು ಕೊಕ್ಕೊದಲ್ಲಿ ಆಸಕ್ತಿ ತೋರುತ್ತಾರೆ. ಹೀಗಾಗಿ ಸೀನಿಯರ್ ಮತ್ತು ಜೂನಿಯರ್ ಎರಡು ತಂಡಗಳು ತಯಾರಾಗುತ್ತವೆ.

ಕೊಕ್ಕೊ ಅಭ್ಯಾಸ ನಿರತ ಆಟಗಾರ್ತಿಯರು

2018ರಲ್ಲಿ ಬೆಂಗಳೂರಿನ ವಿಜಯನಗರದಲ್ಲಿ ನಡೆದ ಪಂದ್ಯಾವಳಿಯಲ್ಲಿ ಜೂನಿಯರ್ ಮತ್ತು ಸೀನಿಯರ್ ಎರಡೂ ವಿಭಾಗಗಳಲ್ಲಿಯೂ ಕುರುಬೂರಿನ ಹೆಣ್ಣುಮಕ್ಕಳು ಜಯಭೇರಿ ಬಾರಿಸುತ್ತಾರೆ. ನಗರ ಪ್ರದೇಶಗಳ ಪ್ರತಿಷ್ಠಿತ ಶಾಲೆಗಳ ಮಕ್ಕಳ ಮುಂದೆ ಅಂಗಳವೇ ಇರದೇ ತೆಂಗಿನತೋಟದಲ್ಲಿ ಅಭ್ಯಾಸ ಮಾಡಿದ, ಯಾವ ಸೌಲಭ್ಯವೂ ಇರದ, ಕಪ್ಪುನೆಲದ ಹಳ್ಳಿಯ ಸಾಮಾನ್ಯ ಬಡ ರೈತರ ಮಕ್ಕಳ ಗೆಲುವು ಅಸಾಮಾನ್ಯವೇ ಸರಿ.

ಪೋಷಕರ ಪ್ರೀತಿ–ಪ್ರೋತ್ಸಾಹ

ಟಿ. ನರಸೀಪುರ ತಾಲ್ಲೂಕಿನ ರಂಗಸಮುದ್ರ, ಸೋಸಲೆ ಸೇರಿದಂತೆ ಅನೇಕ ಊರುಗಳಲ್ಲಿ ಬಲಿಷ್ಠ ಕೊಕ್ಕೊ ತಂಡ ಇತ್ತು ಎಂದು ಮಂಜುನಾಥ್ ನೆನಪಿಸಿಕೊಳ್ಳುತ್ತಾರೆ. ಹಾಗಾದರೆ ಟಿ. ನರಸೀಪುರ ಕೊಕ್ಕೊ ನೆಲವೇ? ಅಂದು ಆಡಲು ಮನಸು ಮಾಡಿದ ಹಳ್ಳಿಯ ಹೆಣ್ಣುಮಕ್ಕಳು ಯಾವ್ಯಾವುದೋ ಕಾರಣಕ್ಕೆ ಬಿಟ್ಟುಹೋಗಿರಬಹುದು. ಆದರೆ ಇಂದಿನ ದೊಡ್ಡ ಯಶಸ್ಸಿನ ಹಿಂದೆ ಅವರ ಕೊಡುಗೆಯನ್ನು ಮರೆಯಬಾರದು.

ಇಷ್ಟೇ ಅಲ್ಲ, ತುಂಡು ಬಟ್ಟೆ ಹಾಕಿ, ಕುಕ್ಕರಗಾಲಲ್ಲಿ ಕೂತು ಆಡುವಂಥ ಆಟಕ್ಕೆ ಪೋಷಕರು ನಿಂದನೆಯ ಮಾತುಗಳನ್ನು ಕೇಳಬೇಕಾಯಿತು. ಆದರೂ ಅವುಗಳನ್ನು ನಿರ್ಲಕ್ಷಿಸಿ ತಮ್ಮ ಹೆಣ್ಣುಮಕ್ಕಳನ್ನು ಅಭ್ಯಾಸಕ್ಕೆ ಕಳುಹಿಸಿದ್ದು ಅವರ ಪ್ರಬುದ್ಧ ನಡೆ. ಒಂದು ಗೆಲುವಿನ ಹಿಂದೆ ಇಂತಹ ಅದೆಷ್ಟೋ ಕಾಣದ ಮುಖಗಳಿರುತ್ತವೆ.

ಆವರಿಸಿತು ಕಾರ್ಮೋಡ

ಗೆಲುವಿನ ಯಾತ್ರೆಯಲ್ಲಿ ಯಾವಾಗಲೂ ಸಂಭ್ರಮವೇ ಇರುವುದಿಲ್ಲ. 2018, ಕುರುಬೂರು ತಂಡಕ್ಕೆ ನೋವಿನ ವರ್ಷ. 'ನಿಮ್ಮ ಶಾಲೆ, ನಿಮ್ಮ ಕೋಚ್‌ಗಿಂತ ಹೆಚ್ಚಿನ ಶಕ್ತಿ ಮತ್ತು ಅವಕಾಶವನ್ನು ಕೊಡುತ್ತೇವೆ. ಅಲ್ಲದೇ ನಿಮ್ಮಲ್ಲೊಂದು ಕ್ಲಬ್ ಸಹ ಇಲ್ಲ' ಎಂದು ಕೆಲವರು ಆಟಗಾರ್ತಿಯರ ಮನಸು ಕೆಡಿಸುತ್ತಾರೆ. ಏಕಾಏಕಿ ರಾಜ್ಯ ಮತ್ತು ರಾಷ್ಟ್ರಮಟ್ಟದ ಹದಿನೈದು ಆಟಗಾರ್ತಿಯರು ತಂಡ ಬಿಡುತ್ತಾರೆ. ಸೀನಿಯರ್ ತಂಡದಲ್ಲಿ ಉಳಿದವರು ವೀಣಾ, ಮಂಜುಳಾ ಮತ್ತು ಅಮೂಲ್ಯಾ ಮಾತ್ರ. 'ನಾವಿರುತ್ತೇವೆ. ಜೂನಿಯರ್ ತಂಡವನ್ನು ಇನ್ನಷ್ಟು ಬಲಿಷ್ಠಗೊಳಿಸೋಣ' ಎನ್ನುತ್ತಾರೆ ಅವರು. ಒಂದು ವರ್ಷ ಯಾವ ಪಂದ್ಯಾವಳಿಯಲ್ಲಿಯೂ ಭಾಗವಹಿಸದೆ ಸತತವಾಗಿ ಕಠಿಣ ಅಭ್ಯಾಸ ಮಾಡುತ್ತಾರೆ. ಮತ್ತೆ ಆರಂಭವಾಗುತ್ತದೆ ಚೈತ್ರಯಾತ್ರೆ. 2020ರಲ್ಲಿ ಕುರುಬೂರು ತಂಡ ರಾಜ್ಯ ಮಟ್ಟದ ಪ್ರಶಸ್ತಿ ಗೆಲ್ಲುತ್ತದೆ.

9ನೇ ಪುಟಕ್ಕೆ...

ಕಾಡುಗೊಲ್ಲರ ಮೋಹನ ರಾಗ..

ಅಬ್ದುಲ್ ರಹಿಮಾನ್

ಎಲ್ಲವನ್ನೂ ಕಳೆದುಕೊಂಡು ನಿರಾಶನಾಗಿ, ಭವಿಷ್ಯವು ಗಾಢ ಕತ್ತಲಿನಂತೆ ಅಸ್ಪಷ್ಟವಾಗಿರುವಾಗ, ಎಲ್ಲಿಂದಲೋ ಹಾರಿ ಬಂದು ದಾರಿ ತೋರುವ ಮಿಂಚುಹುಳದಂತೆ ಮೋಹನ್ ಕುಮಾರ್‌ಗೆ ಕಂಡಿದ್ದು ರಾಮನಗರದ ಜಾನಪದ ಲೋಕ. ಬಡತನವನ್ನು ಬೆನ್ನಿಗಂಟಿಸಿಕೊಂಡೇ ಹುಟ್ಟಿ, ಬೆಳೆದ ಮೋಹನ್ ಅವರಿಗೆ ಆಟೊಮೊಬೈಲ್ ಡಿಪ್ಲೊಮಾದ ಪಾಠಗಳು ಅರ್ಥವಾಗಲೇ ಇಲ್ಲ. ಅತ್ತ ಡಿಪ್ಲೊಮಾ ಕಲಿಕೆ ಮುಂದುವರಿಸಲೂ ಆಗದೇ, ಇತ್ತ ಮನೆಗೆ ಮರಳಲೂ ಆಗದ ಸ್ಥಿತಿ. ಆಗ ಅವರಿಗೆ ಹೊಸ ಬಾಳ್ವೆ ನೀಡಿದ್ದು ಜಾನಪದ ಲೋಕ. ಅಲ್ಲಿಗೆ ನೀಡಿದ ಮೊದಲ ಭೇಟಿ ಬದುಕಿಗೆ ಹೊಸ ಮುನ್ನುಡಿ ಬರೆಯಿತು. ಅಲ್ಲಿನ ಒಂದೊಂದು ಚಿತ್ರ ನೋಡಿದಾಗಲೂ ಕಣ್ಣಮುಂದೆ ಬಾಲ್ಯ ಕುಣಿದಾಡತೊಡಗಿತು. ಭವಿಷ್ಯ ಹಾದು ಹೋಯಿತು. ಅಲ್ಲಿ ಪಡೆದ ಸರ್ಟಿಫಿಕೇಟ್ ಕೋರ್ಸ್, ಕಾಡುಗೊಲ್ಲರ ಹಟ್ಟಿಯ ಯುವಕನನ್ನು ವಿಶ್ವವಿದ್ಯಾಲಯವೊಂದರ ಸಿಂಡಿಕೇಟ್ ಸದಸ್ಯನಾಗುವಷ್ಟರ ಮಟ್ಟಿಗೆ ಬದುಕಿನ ದಿಕ್ಕನ್ನೇ ಬದಲಾಯಿಸಿತು.

ಮೋಹನ್ ಕುಮಾರ್ ತುಮಕೂರು ತಾಲ್ಲೂಕಿನ ತಂಬುಗನಹಟ್ಟಿಯವರು. ಹಟ್ಟಿಯ ಸಂಪ್ರದಾಯದಂತೆ ಹುಟ್ಟಿದ ಕೂಡಲೇ ತಾಯಿಯ ಜೊತೆ ಎರಡು ತಿಂಗಳು ಮನೆಯಿಂದ ಹೊರಗಿರಬೇಕಾಯಿತು. ಅನಾರೋಗ್ಯಕ್ಕೀಡಾಗಿ ಬದುಕುವುದೇ ಇಲ್ಲ ಎಂಬಂತಿದ್ದ ಮಗುವನ್ನು, ತಾಯಿ ದೊಡ್ಡಮ್ಮ ಅದ್ಯಾವುದೋ ಗಿಡಮೂಲಿಕೆಯನ್ನು ಹಾಲಿನಲ್ಲಿ ಬೆರೆಸಿಕೊಟ್ಟು ಜೀವ ಉಳಿಸಿದರಂತೆ. ಹಟ್ಟಿಯಲ್ಲಿ ಅಮ್ಮನ ಹಾಡುಗಳನ್ನು ಕೇಳಿ ಬೆಳೆದ ಮೋಹನ್, ಶಾಲೆಯಲ್ಲಿ ಜನಪದಗೀತೆ ಸ್ಪರ್ಧೆಯಲ್ಲಿ ಬಹುಮಾನ ತನ್ನದಾಗಿಸಿಕೊಳ್ಳುತ್ತಿದ್ದರು. ರಾಗಿ ಬೀಸುವಾಗ, ಕಡಲೆ ಬಿಡಿಸುತ್ತಿದ್ದಾಗ ಅಜ್ಜಿ ಕೆಂಗಮ್ಮ ಹಾಡುತ್ತಿದ್ದ ಪದಗಳು, ಕೃಷಿ ಕೆಲಸ ಮಾಡುವಾಗ, ಹಬ್ಬ ಹರಿದಿನಗಳಲ್ಲಿ, ಶುಭ ಸಮಾರಂಭಗಳಲ್ಲಿ, ಜಾತ್ರೆ ವೇಳೆಯಲ್ಲಿ ಹಾಡುತ್ತಿದ್ದ ಪದಗಳೆಲ್ಲಾ 10ನೇ ತರಗತಿ ವೇಳೆಗೆ ಮೋಹನ್ ನಾಲಿಗೆಯಲ್ಲಿದ್ದವು.

'ಕರ್ನಾಟಕದಲ್ಲಿ ಕಾಡುಗೊಲ್ಲ ಸಮುದಾಯದ ಜನಸಂಖ್ಯೆ ಸುಮಾರು 6.5 ಲಕ್ಷ. ತುಮಕೂರು ಹಾಗೂ ಚಿತ್ರದುರ್ಗ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹಟ್ಟಿಯಲ್ಲಿ ಹುಟ್ಟಿನಿಂದ ಸಾವಿನವರೆಗೂ ಪ್ರತಿಯೊಂದು ಆಚರಣೆಗೂ ಹಾಡುಗಳಿವೆ. 'ಸೂತಕ, ಸಂತಸ, ನೋವು, ನಲಿವು... ಹೀಗೆ ಎಲ್ಲವನ್ನೂ ಹಾಡಿನಲ್ಲೇ ಅಭಿವ್ಯಕ್ತಪಡಿಸುವ ವಿಶಿಷ್ಟ ಸಂಪ್ರದಾಯ ನಮ್ಮದು. ಬಾಲ್ಯದಲ್ಲಿ ಅಜ್ಜಿ ಹಾಗೂ ಅಮ್ಮ ಹಾಡುತ್ತಿದ್ದ ಪದಗಳು ನನಗೆ ಕುತೂಹಲ ಹುಟ್ಟಿಸುತ್ತಿದ್ದವು. ನಮ್ಮ ಪೂರ್ವಿಕರ ಸಾಹಸಗಳನ್ನು ಪ್ರತಿಬಿಂಬಿಸುವ, ಅವರನ್ನು ಹೊಗಳುವ ಕಥೆಗಳನ್ನು ಹಾಡಿನ ರೂಪದಲ್ಲಿ ಹೇಳುತ್ತಿದ್ದರು. ಅವೆಲ್ಲವೂ ತಲೆತಲಾಂತರದಿಂದ ಬಾಯಿಂದ ಬಾಯಿಗೆ ಬಂದವು. ಅವ್ಯಾವುವೂ ಲಿಖಿತ ರೂಪದಲ್ಲಿ ಇರಲಿಲ್ಲ. ಹೀಗಾಗಿ ಅವುಗಳನ್ನು ದಾಖಲೆ ಮಾಡಬೇಕು ಎಂದು ನಿರ್ಧರಿಸಿ ಕಾರ್ಯಪ್ರವೃತ್ತನಾದೆ' ಎನ್ನುತ್ತಾರೆ ಮೋಹನ್.

2008ರಲ್ಲಿ 'ಜಾನಪದ ಲೋಕ'ಕ್ಕೆ ಸೇರಿ ಅಲ್ಲಿ ತಜ್ಞರಾದ ಟಿ. ಗೋವಿಂದರಾಜು ಹಾಗೂ ಕುರುವ ಬಸವರಾಜು ಅವರಿಂದ ತರಬೇತಿ ಪಡೆದು ಜಾನಪದ ಅಧ್ಯಯನದಲ್ಲಿ ಪರಿಣತಿ ಪಡೆದರು. ಕ್ಷೇತ್ರ ಕಾರ್ಯ ಆರಂಭಿಸಿದ ಮೋಹನ್, ತನ್ನ ಸಮುದಾಯದ ಹಾಡು, ಒಗಟು, ಗಾದೆ, ಸೊಲ್ಲು, ಸೋಬಾನೆ ಹಾಗೂ ಕೋಲಾಟದ ಪದಗಳು, ಸಂಪ್ರದಾಯ, ಆಚರಣೆಗಳನ್ನು ದಾಖಲು ಮಾಡಲು ಪ್ರಾರಂಭಿಸಿದರು. ಶಿರಾ ತಾಲ್ಲೂಕು ಒಂದರಲ್ಲೇ ಸಾವಿರಕ್ಕೂ ಅಧಿಕ ಮನೆಗಳಿಗೆ ಭೇಟಿ ನೀಡಿ ಹಾಡುಗಳನ್ನು ಸಂಗ್ರಹಿಸಿದ್ದಾರೆ. ತೀರಾ ಅಂತರ್ಮುಖಿಗಳಾದ ಕಾಡುಗೊಲ್ಲ ಸಮುದಾಯದ ಜನರ ಮನವೊಲಿಸಿ, ಅವರಿಂದ ಪದಗಳನ್ನು ಹಾಡಿಸಿ, ಹಾಡುವ ಸಂದರ್ಭಕ್ಕೆ ಕಾದು ಅವುಗಳನ್ನು ದಾಖಲಿಸಿದ್ದಾರೆ. ಟೇಪ್, ವಾಯ್ಸ್, ವಿಡಿಯೊ ರೆಕಾರ್ಡರ್‌ನಲ್ಲಿ ಅವುಗಳನ್ನು ದಾಖಲಿಸಿಕೊಂಡು ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ.

ಕುರಿಗಳ ಜೊತೆಗೆ ಪದ ಹಾಡುತ್ತಾ ಹೆಜ್ಜೆ ಹಾಕುತ್ತಿರುವ ಮೋಹನ್ ಕುಮಾರ್

> ಅಜ್ಜಿ, ಅವ್ವ ಹಾಡುತ್ತಿದ್ದ ನೂರಾರು ಪದಗಳು ಚಿಕ್ಕಂದಿನಲ್ಲೇ ಮೋಹನ್ ಕುಮಾರ್ ಎದೆಯೊಳಗೆ ಇಳಿದಿದ್ದವು. ಅವುಗಳೊಂದಿಗೇ ಬೆಳೆದ ಇವರು ಈಗ ತಮ್ಮದೇ ಕಾಡುಗೊಲ್ಲರ ಜನಪದವನ್ನು ಸಂಗ್ರಹಿಸಿ ದಾಖಲಿಸುವ ದೊಡ್ಡ ಕೆಲಸವನ್ನು ಮಾಡಿದ್ದಾರೆ

2010ರಲ್ಲಿ ಸಾಣೇಹಳ್ಳಿಯಲ್ಲಿ ಅವರು ರಂಗಭೂಮಿಯಲ್ಲಿ ಡಿಪ್ಲೊಮೊ ಮುಗಿಸಿದರು. ಗೊ.ರು ಚನ್ನಬಸಪ್ಪನವರು ಅಧ್ಯಕ್ಷರಾಗಿದ್ದ ವೇಳೆ ಜಾನಪದ ಅಕಾಡೆಮಿಯ 'ಜಾನಪದ ನಿಘಂಟು' ಯೋಜನೆಗೆ ತುಮಕೂರು ಜಿಲ್ಲಾ ಸಂಗ್ರಹಕಾರರಾಗಿ ಕೆಲಸ ಮಾಡಿದರು. ಜಾನಪದ ವಿವಿ ರಚನೆಯಲ್ಲೂ ಕೆಲಸ ಮಾಡಿದ್ದ ಮೋಹನ್, 2010 ರಿಂದ 2017ರಲ್ಲಿ ಅಲ್ಲಿಯೇ ನೌಕರರಾಗಿ ಕೆಲಸ ಮಾಡಿದರು. 'ಜಾನಪದ ವಿಶ್ವವಿದ್ಯಾಲಯದಲ್ಲಿ ಟೇಬಲ್, ಕುರ್ಚಿಗಳನ್ನು ಸ್ವಚ್ಛ ಮಾಡಿದ್ದೇನೆ. ಶೌಚಾಲಯಗಳನ್ನೂ ಶುಚಿ ಮಾಡಿದ್ದೇನೆ. ಅಲ್ಲಿನ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಲೇ ಅಧ್ಯಯನವನ್ನೂ ಮುಂದುವರಿಸಿದೆ. ಈ ನಡುವೆ ಹಟ್ಟಿಗಳಿಗೆ ಭೇಟಿ ನೀಡುವ ಕೆಲಸ ನಡೆದೇ ಇತ್ತು. ನನ್ನ ಕೆಲಸ ಗುರುತಿಸಿದ ವಿವಿ, ಕಾಡುಗೊಲ್ಲರ ಕೋಲಾಟದ ಹಾಗೂ ಬೆಡಗಿನ ಪದಗಳ ಬಗ್ಗೆ ಬರೆದ ಪುಸ್ತಕವನ್ನು ಪ್ರಸಾರಂಗ ಪ್ರಕಟಿಸಿತು. 2024ರಲ್ಲಿ ಅದೇ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯನಾದೆ' ಎಂದು ಮೋಹನ್ ಹೆಮ್ಮೆಯಿಂದ ಹೇಳಿಕೊಂಡರು.

ಹದಿನೇಳು ವರ್ಷಗಳಿಂದ ಕಾಡುಗೊಲ್ಲ ಬುಡಕಟ್ಟು ಸಮುದಾಯದ ಸಾವಿರಾರು ಮೂಲ ಜನಪದ ಗೀತೆಗಳನ್ನು ಸಂಗ್ರಹಿಸಿ ಅದಕ್ಕೊಂದು ಜೀವಕೊಟ್ಟಿದ್ದಾರೆ. ಇದಕ್ಕಾಗಿ ಕಾಲ, ಕಾಲು ಸವೆಸಿದ್ದಾರೆ. ಧಾರವಾಡದ ಬಾಲವಿಕಾಸ ಅಕಾಡೆಮಿಗೆ 70ಕ್ಕೂ ಅಧಿಕ ಮಕ್ಕಳ ಆಟಗಳನ್ನು ಸಂಗ್ರಹ ಮಾಡಿಕೊಟ್ಟಿದ್ದಾರೆ. ರಾಜ್ಯದ ವಿವಿಧ ರಂಗಾಯಣದ ವಿದ್ಯಾರ್ಥಿಗಳಿಗೆ ಕಾಡುಗೊಲ್ಲ ಸಮುದಾಯದ ಹಾಡುಗಳ ತರಬೇತಿ ನೀಡಿದ್ದಾರೆ. ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಸಂಸ್ಥೆಯ ಕಲಿ-ಕಲಿಸು ಯೋಜನೆಯ ಸಂಪನ್ಮೂಲ ವ್ಯಕ್ತಿಯಾಗಿ ರಾಜ್ಯದ ಸರ್ಕಾರಿ ಶಾಲೆಯ ಸಾವಿರಾರು ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಬುಡಕಟ್ಟು ಸಂಸ್ಕೃತಿಯ ಬಗ್ಗೆ ತರಬೇತಿ ನೀಡಿದ್ದಾರೆ. ಕಾಡುಗೊಲ್ಲ ಬುಡಕಟ್ಟು ಸಂಸ್ಕೃತಿ ಕುರಿತು ಅಧ್ಯಯನ ಮಾಡಿ ಅನಕ್ಷರಸ್ಥ ಕಲಾವಿದರ ಮೂಲ ಹಾಡುಗಳನ್ನು ದಾಖಲಿಸಿ, ಆ ಸಮುದಾಯದ ಬಗ್ಗೆ ಸಂಶೋಧನಾತ್ಮಕ ಕೃತಿಗಳನ್ನು ರಚಿಸಿದ್ದಾರೆ.

ಸಿನಿಮಾದಲ್ಲೂ ನಟನೆ: ಶಿವರಾಜ್ ಕುಮಾರ್ ಅವರು ಅಭಿನಯಿಸಿದ 'ವೇದ' ಸಿನಿಮಾದ 'ಜುಂಜಪ್ಪ' ಹಾಡಿಗೆ ಧ್ವನಿ ನೀಡಿದ್ದಲ್ಲದೆ, ಹೆಜ್ಜೆ ಹಾಕಿದ್ದಾರೆ. 'ಅಂತರ್ಜಲ' ಹಾಗೂ 'ಕೋಳಿ ಎಸ್ರು' ಸಿನಿಮಾಗಳಿಗೆ ಕಂಠ ನೀಡಿದ್ದಾರೆ. ಕರ್ನಾಟಕ ಪ್ರಿಮಿಯರ್ ಲೀಗ್‌ನಲ್ಲಿ ಚಿಯರ್ ಲೀಡರ್ಸ್‌ಗೆ ಬದಲಾಗಿ ಜನಪದ ಕಲೆಯನ್ನು ಪರಿಚಯಿಸಿದ ಕೀರ್ತಿಯೂ ಮೋಹನ್‌ಗೆ ಸಲ್ಲಬೇಕು. ಜಾಲತಾಣಗಳಲ್ಲಿ ಅವರು ಹಾಕುವ ತಮ್ಮ ಸಮುದಾಯ ಹಾಡುಗಳಿಗೆ ಅಪಾರ ಅಭಿಮಾನಿಗಳ ಬಳಗವೇ ಇದೆ. ಇವರ ಹಾಡುಗಳು ಕೆಲವರಿಗೆ ಹೊಸ ಸಂಸ್ಕೃತಿಯನ್ನು ಪರಿಚಯ ಮಾಡಿಕೊಟ್ಟರೆ, ಇನ್ನು ಕೆಲವರಿಗೆ ಸಾಂತ್ವನದ ನುಡಿಗಳಾಗಿವೆ.

9ನೇ ಪುಟಕ್ಕೆ...

ವಲಸೆ ಹಕ್ಕಿಗಳ ಹಾಡುಪಾಡು

ಶಶಿಕಾಂತ್ ಎಚ್. ಮಜಗಿ

ಋತುಗಳಿಗೆ ತಕ್ಕಂತೆ ಭೂಮಿಯ ಮೇಲ್ಮೈ ಮತ್ತು ವಾತಾವರಣ ಬದಲಾಗುತ್ತದೆ. ಆ ಬದಲಾವಣೆಗೆ ಹೊಂದಿಕೊಳ್ಳುವ ಅಗತ್ಯ ಹಕ್ಕಿಗಳಿಗೆ ಇರುತ್ತದೆ. ಒಂದು ವೇಳೆ ಹೊಂದಿಕೊಳ್ಳುವುದು ಅಸಾಧ್ಯವಾದಾಗ ಅವು ವಲಸೆ ಹೋಗುತ್ತವೆ. ಈ ಮಹಾ ವಲಸೆ ಆಹಾರಕ್ಕಾಗಿ, ಆಶ್ರಯಕ್ಕಾಗಿ ಅಥವಾ ಸಂತಾನಾಭಿವೃದ್ಧಿಗಾಗಿ ನಡೆಯುತ್ತದೆ. ಅದು ಅವುಗಳ ಅಳಿವು–ಉಳಿವಿನ ಸಮಯ ಕೂಡ ಹೌದು. ಈ ಅನಿವಾರ್ಯ ದೀರ್ಘ ಪಯಣಕ್ಕೆ ಹಲವು ದಿನಗಳ ಮತ್ತು ತಿಂಗಳುಗಳ ಪೂರ್ವ ತಯಾರಿ ನಡೆಯುತ್ತದೆ. ಅದು ಪೂರ್ವ ನಿರ್ಧರಿತ ಕೂಡ. ಈ ತಯಾರಿ ಪ್ರಕ್ರಿಯೆಯಲ್ಲಿ ಚಯಾಪಚಯದಲ್ಲಿ ಬದಲಾವಣೆ, ಶಕ್ತಿಯನ್ನು ಕೊಬ್ಬಿನರೂಪದಲ್ಲಿ ಶೇಖರಿಸುವುದರ ಮುಖಾಂತರ ಹಿಡಿದಿಡುವುದು, ಇರುಳು ಪ್ರಯಾಣದ ಸಮಯದಲ್ಲಿ ನಿದ್ರೆಯನ್ನು ನಿಯಂತ್ರಿಸುವುದು, ಗರಿಗಳನ್ನು ಕಾಪಾಡಿಕೊಳ್ಳುವುದು...

ಒಟ್ಟು ಎರಡು ಸಾವಿರ ಪ್ರಭೇದದ ಹಕ್ಕಿಗಳಿವೆ. ಆರ್ಕ್ಟಿಕ್ ಟೆರ್ನ್ ಪಕ್ಷಿ ಆರ್ಕ್ಟಿಕ್ ಖಂಡದಿಂದ ಅಂಟಾರ್ಕ್ಟಿಕ್ ಖಂಡದ ಅತ್ಯಂತ ದೂರದ ವಲಸೆಗೆ ಹೆಸರುವಾಸಿ. ಮಾಂಕ್ಸ ಶಿಯರ್‌ವಾಟರ್ ಪಕ್ಷಿ 14 ಸಾವಿರ ಕಿಲೋಮೀಟರ್ ದೂರಕ್ಕೆ ವಲಸೆ ಹೋಗುತ್ತದೆ. ವಲಸೆಗೆ ತಯಾರಾಗಲು ದೀರ್ಘಕಾಲದ ದಿನ, ಆಹಾರದ ಲಭ್ಯತೆ ಮತ್ತು ಚಳಿಯ ವಾತಾವರಣ ಇತ್ಯಾದಿಗಳು ಕಾರಣ. ವಲಸೆ ಸಮಯದಲ್ಲಿ ಸೌರಮಂಡಲದ ಸಂಕೇತಗಳನ್ನು, ಸೂರ್ಯ, ಚಂದ್ರ, ಭೂಮಿಯ ಆಯಸ್ಕಾಂತೀಯ ಗುಣ ಮತ್ತು ಮನಸಿನ ನಕ್ಷೆಯನ್ನು ಆಧಾರವಾಗಿ ಇಟ್ಟುಕೊಂಡು ವಲಸೆ ಹೋಗುತ್ತವೆ.

ಹಕ್ಕಿಗಳು ಸ್ವಚ್ಛಂದವಾಗಿರಲು ಮನುಷ್ಯನ ಸ್ವಾರ್ಥ, ಬೇಟೆ, ವಾತಾವರಣ ಬದಲಾವಣೆ, ನಗರೀಕರಣ ತಡೆಯೊಡ್ಡಿವೆ. ದುರಾಸೆಗೆ ಕಾಡುಗಳನ್ನೆಲ್ಲ ನಗರ, ಪಟ್ಟಣಗಳ ರೂಪದಲ್ಲಿ ಬೆಂಗಾಡುಗಳಾಗಿ ಪರಿವರ್ತನೆಯಾಗುತ್ತಿದೆ. ಅದನ್ನೇ ಮನುಷ್ಯ ತನ್ನ ಅಭಿವೃದ್ಧಿ, ನಾಗರಿಕತೆಯೆಂದು ಸಂಭ್ರಮಿಸುತ್ತಿರುವುದು ದುರಂತ ಮತ್ತು ಅವಿವೇಕ.

ನಾನು ಚಿಕ್ಕವನಿದ್ದಾಗ ಗುಬ್ಬಿಗಳು, ಕಾಗೆಗಳು ಅಧಿಕ ಸಂಖ್ಯೆಯಲ್ಲಿ ಕಾಣುತ್ತಿದ್ದವು. ಮೂರು ದಶಕಗಳಲ್ಲಿ ಗುಬ್ಬಿ ಮತ್ತು ಕಾಗೆಗಳ ಸಂಖ್ಯೆಯೂ ಕ್ಷೀಣಿಸಿದೆ. ಬದಲಾಗಿ ಬೆಳ್ಳಕ್ಕಿಗಳು (ಈಗ್ರೆಟ್ಸ್), ಮೈನಾ, ಲ್ಯಾಪ್‌ವಿಂಗ್‌ಗಳು, ನವಿಲುಗಳು, ಗ್ರೀನ್ ಬೀ ಈಟರ್‌ಗಳ ಸಂಖ್ಯೆ ಗಮನಾರ್ಹವಾಗಿ ಏರಿಕೆಯಾಗಿದೆ. ಇದು ಬದಲಾಗುತ್ತಿರುವ ವಾತಾವರಣದ ಕುರುಹು ಮತ್ತು ಏರಿಕೆಯಾಗಿರುವ ಹಕ್ಕಿಗಳ ಹೊಂದಿಕೊಳ್ಳುವಿಕೆಯ ಗುಣ ಕಾರಣ. ಗ್ರೇ ಹೆರಾನ್, ಈಗ್ರೆಟ್ಸ್, ಬಾರ್ ಹೆಡೆಡ್ ಗೀಸ್, ಪೆಂಟೆಡ್ ಸ್ಟಾರ್ಕ್, ಐಬಿಸ್‌ಗಳು, ಸ್ಪಾಟ್ ಬಿಲ್ಲ್‌ಡ್ ಪೆಲಿಕಾನ್‌ಗಳು, ಸೈಬೆರಿಯಾ ಮತ್ತು ಇತರ ಪ್ರದೇಶಗಳಿಂದ ಕರ್ನಾಟಕವನ್ನೊಳಗೊಂಡಂತೆ ಭಾರತಕ್ಕೆ ವಲಸೆ ಬರುತ್ತವೆ.

ಪಕ್ಷಿಗಳು ಮುಖ್ಯವಾಗಿ ಪರಾಗಸ್ಪರ್ಶ, ಕೀಟಗಳನ್ನು ನಿಯಂತ್ರಿಸಲು ಮತ್ತು ಆಹಾರ ಸರಪಳಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಒಬ್ಸರ್ವರ್ ರಿಸರ್ಚ್ ಫೌಂಡೇಶನ್ 2023ರ ಸ್ಟೇಟ್ ಆಫ್ ಇಂಡಿಯನ್ ಬರ್ಡ್ಸ್ ವರದಿ ಪ್ರಕಾರ ಭೌತಿಕ ಮೂಲ ಸೌಕರ್ಯಗಳು, ವಾತಾವರಣ ಬದಲಾವಣೆ, ಮಣ್ಣಿನ ಸವಕಳಿ ಕಾರಣಗಳಿಂದ 942 ಜಾತಿಯ ಪಕ್ಷಿಗಳಲ್ಲಿ 142 ಜಾತಿಯ ಪಕ್ಷಿಗಳ ಸಂಖ್ಯೆ ಕ್ಷೀಣಗೊಳ್ಳುತ್ತಿದೆ. ಅದರಲ್ಲಿ ಮುಖ್ಯವಾಗಿರುವುದು ಗ್ರೇಟ್ ಇಂಡಿಯನ್ ಬಸ್ಟರ್ಡ್(ಹೆಬ್ಬಕ) ಮತ್ತು ವೈಟ್ ಬೇಲ್ಲಿಡ್ ಹೆರಾನ್. ಮತ್ತೊಂದೆಡೆ 28 ಜಾತಿಯ ಪಕ್ಷಿಗಳ ಸಂಖ್ಯೆ ಅಧಿಕಗೊಂಡಿವೆ. ಅದರಲ್ಲಿ ಇಂಡಿಯನ್ ಪಿಫೌಲ್, ನವಿಲು,


ರಂಗನತಿಟ್ಟು ಪಕ್ಷಿಧಾಮದಲ್ಲಿ ಸೈಬೀರಿಯನ್ ಕ್ರೇನ್ಸ್

ಪಾರಿವಾಳ, ಕೋಗಿಲೆ, ಈಗ್ರೆಟ್ಸ್, ಗ್ರೀನ್ ಬೀ ಈರ್ಸ್.

ಅಕ್ಟೋಬರ್‌ನಿಂದ ಫೆಬ್ರುವರಿ ಕೊನೆ ವಾರದವರೆಗೆ ಪಕ್ಷಿಗಳು ಸೈಬೀರಿಯಾದಿಂದ ತಮ್ಮ ಅಗತ್ಯಗಳನ್ನು ಪೂರೈಸಲು ವಲಸೆ ಹೋಗುತ್ತವೆ. ಸೈಬೀರಿಯಾ ಎಂಬ ಭೌಗೋಳಿಕ ಪ್ರದೇಶವು ರಷ್ಯಾದ ಬಹುಪಾಲು ಪ್ರದೇಶ. ಉತ್ತರದ ಖಜಕಿಸ್ಥಾನವನ್ನು ಒಳಗೊಂಡಂತೆ, ಪಶ್ಚಿಮಕ್ಕೆ ಉತ್ತರ ಏಷ್ಯಾ ಮತ್ತು ಉರ್ಲ ಪರ್ವತಗಳು, ಪೂರ್ವಕ್ಕೆ ಪೆಸಿಫಿಕ್ ಸಾಗರ, ದಕ್ಷಿಣದ ಆರ್ಕ್ಟಿಕ್ ಸಾಗರದಿಂದ ಉತ್ತರ ಮತ್ತು ಮಧ್ಯಭಾಗದ ಖಜಕಿಸ್ಥಾನ ಪರ್ವತ ಶ್ರೇಣಿಗಳು, ಮಂಗೋಲಿಯಾ ಮತ್ತು ಚೀನಾ ದೇಶದ ಗಡಿ ಪ್ರದೇಶಗಳು ಒಟ್ಟಾರೆ 13,488,500 ಚದರ ಕಿಲೋಮೀಟರ್. ಸೈಬೀರಿಯಾ ಹೆಸರು 'ತತಾರ' ಎಂಬ ಹೆಸರಿನಿಂದ ಪಡೆಯಲಾಗಿದೆ. 'ಸೈಬೀರಿಯಾ' ಎಂದರೆ ಮಲಗಿರುವ ಭೂಮಿ.

ಇದು ತನ್ನ ದೀರ್ಘಕಾಲದ ಹಿಮರಹಿತ ಚಳಿಗಾಲಕ್ಕೆ ಕುಖ್ಯಾತಿ ಪಡೆದಿದೆ. ಸಾಕಾ ಪ್ರದೇಶದಲ್ಲಿ -68 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇದುವರೆಗೆ ದಾಖಲಾದ ಅತ್ಯಂತ ಕಡಿಮೆ ಉಷ್ಣಾಂಶ. ಪೂರ್ವಕ್ಕೆ ಅತ್ಯಂತ ಕ್ರೂರವಾಗಿರುತ್ತದೆ. ಬಹುಪಾಲು ಹಸಿರು, ಪೂರ್ವ ಮತ್ತು ಪಶ್ಚಿಮಕ್ಕೆ ಹರಡಿಕೊಂಡಿದೆ. ಟಂಡ್ರಾ ಪ್ರದೇಶ ಉತ್ತರಕ್ಕೆ ಚಾಚಿಕೊಂಡಿದೆ. ಜೌಗು ಕಾಡುಗಳು, ತೈಗಾ ಪ್ರದೇಶಗಳು ಬಹುತೇಕ ಈಶಾನ್ಯ ಪ್ರದೇಶಕ್ಕೆ ಹೊಂದಿಕೊಡಿವೆ. ಇಲ್ಲಿ ಕಲ್ಲಿದ್ದಲು, ಪೆಟ್ರೋಲ್, ನೈಸರ್ಗಿಕ ಅನಿಲಗಳು, ವಜ್ರ, ಕಬ್ಬಿಣದ ಅದಿರು ಮತ್ತು ಚಿನ್ನ ಹೇರಳವಾಗಿ ಸಿಗುತ್ತವೆ. ಇನ್ನು ನೈಸರ್ಗಿಕವಾಗಿ ಸಂಪದ್ಭರಿತವಾದ ಪ್ರದೇಶವಾದರೂ ಚಳಿಗಾಲದಲ್ಲಿ ಮಾತ್ರ ಪಕ್ಷಿಗಳಿಗೆ ಅಕ್ಷರಶಃ ಹಿಮರಹಿತ ಚಳಿಯ ಬೆಂಗಾಡು ಮಾತ್ರ.

ಬ್ಲೂಟೈಲ್ಡ್ ಬೀ ಈಟರ್

9ನೇ ಪುಟಕ್ಕೆ...

ಭಂಡಾರ ಪ್ರಿಯೆ ಗುಡ್ಡದ ಯಲ್ಲಮ್ಮ

ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ ಜಿಲ್ಲೆ ಸವದತ್ತಿ ಯಲ್ಲಮ್ಮನ ಗುಡ್ಡದಲ್ಲಿರುವ ಯಲ್ಲಮ್ಮ ದೇವಿಗೆ ಜನರು ಚಿನ್ನ, ಬೆಳ್ಳಿ ಆಭರಣ, ಸೀರೆ, ಖಣ, ಬಳೆಗಳೊಂದಿಗೆ, ಕುಂಕುಮ–ಭಂಡಾರವನ್ನೂ ಅರ್ಪಿಸಿ ಭಕ್ತಿ ಮೆರೆಯುತ್ತಾರೆ. ಕೆಲವರು ‘ಉಧೋ ಉಧೋ ಯಲ್ಲಮ್ಮ ನಿನ್ಹಾಲ್ಕ ಉಧೋ...’ ಎಂದು ಜಯಘೋಷ ಮೊಳಗಿಸುತ್ತ ದೇಗುಲದ ಮೇಲೆ ಭಂಡಾರ ಎರಚುತ್ತಾರೆ. ಇನ್ನೂ ಕೆಲವರು ಸಂಗೀತ ಹಚ್ಚಿ ಕುಣಿಯುತ್ತ ಭಂಡಾರದ ಓಕುಳಿಯಲ್ಲಿ ಮಿಂದೇಳುತ್ತಾರೆ. ಗುಡ್ಡಕ್ಕೆ ಬರುವ ಭಕ್ತರ ಹಣೆಗೆ ಭಂಡಾರ ಹಚ್ಚುತ್ತ, ದೇವಿ ನಾಮಸ್ಮರಣೆ ಮಾಡುತ್ತ ಜೋಗತಿಯರು ಸಂಭ್ರಮಿಸುತ್ತಾರೆ.

ಒಂದೂವರೆ ತಿಂಗಳಲ್ಲೇ ಗುಡ್ಡದಲ್ಲಿ ಸುಮಾರು 400 ಟನ್‌ಗಿಂತಲೂ ಅಧಿಕ ಪ್ರಮಾಣದ ಕುಂಕುಮ–ಭಂಡಾರ ಮಾರಾಟವಾಗುತ್ತದೆ. ಮಲಪ್ರಭೆ ತಟದಲ್ಲಿ ಭಂಡಾರದ ಹೊಳೆಯೇ ಹರಿಯುತ್ತದೆ. ಇಡೀ ಗುಡ್ಡದ ಪರಿಸರ ಹೊಂಬಣ್ಣಕ್ಕೆ ತಿರುಗಿರುತ್ತದೆ.

> ಯಲ್ಲಮ್ಮನಗುಡ್ಡದಲ್ಲಿ ಬನದ ಹುಣ್ಣಿಮೆಯಂದು(ಜ.13ರಂದು) ಆರಂಭವಾದ ಜಾತ್ರೆ ಮಹಾಶಿವರಾತ್ರಿ ಅಮಾವಾಸ್ಯೆಯವರೆಗೂ (ಫೆ.26ರವರೆಗೂ) ನಡೆಯುತ್ತದೆ. ಕರ್ನಾಟಕ, ಮಹಾರಾಷ್ಟ್ರ, ಗೋವಾ, ತಮಿಳುನಾಡು, ಆಂಧ್ರ ಪ್ರದೇಶ, ತೆಲಂಗಾಣ ರಾಜ್ಯಗಳಿಂದ ಲಕ್ಷಾಂತರ ಭಕ್ತರು ಯಲ್ಲಮ್ಮನ ಸನ್ನಿಧಾನಕ್ಕೆ ಆಗಮಿಸುತ್ತಾರೆ.

ರಾಯಬಾಗ ತಾಲ್ಲೂಕಿನ ಚಿಂಚಲಿಯ ಮಾಯಕ್ಕದೇವಿ, ಕೊಕಟನೂರಿನ ಯಲ್ಲಮ್ಮ ದೇವಿ, ರಾಮದುರ್ಗ ತಾಲ್ಲೂಕಿನ ಗೊಡಚಿಯ ವೀರಭದ್ರೇಶ್ವರ, ಕೊಪ್ಪಳ ಜಿಲ್ಲೆಯ ಹುಲಿಗೆಮ್ಮ ದೇವಿ ಮೊದಲಾದ ದೇವಸ್ಥಾನಗಳ ಅಂಗಳದಲ್ಲೂ ಕುಂಕುಮ–ಭಂಡಾರ ಮಾರಾಟವಾಗುತ್ತದೆ. ಆದರೆ, ಸವದತ್ತಿಯಲ್ಲೇ ಭಂಡಾರದ ಮಾರಾಟದ ಭರಾಟೆ ಬಲು ಜೋರು.

ಗುಡ್ಡವನ್ನು ಸುತ್ತು ಹಾಕಿದರೆ ಸಾಕು, ಸಾಲು ಸಾಲಾಗಿ ಕುಂಕುಮ–ಭಂಡಾರ ಮಾರಾಟದ ಅಂಗಡಿಗಳು ಕಣ್ಣಿಗೆ ಬೀಳುತ್ತವೆ. ಟೇಬಲ್‌ಗಳ ಮೇಲೆ ಒಪ್ಪವಾಗಿ ಕುಂಕುಮ–ಭಂಡಾರ ಪೇರಿಸಿ ಇಟ್ಟಿರುತ್ತಾರೆ. ನೂರಕ್ಕೂ ಅಧಿಕ ಅಂಗಡಿಯವರಿಗೆ ವರ್ಷವಿಡೀ ಕುಂಕುಮ ಭಂಡಾರ ಮಾರಾಟವೇ ಕಾಯಕ. ಉಳಿದವರು ಇವೆರಡು ಹುಣ್ಣಿಮೆಗಳಲ್ಲಷ್ಟೇ ಗುಡ್ಡಕ್ಕೆ ಬಂದು ಕುಂಕುಮ–ಭಂಡಾರ ಮಾರುತ್ತಾರೆ. ₹20 ಪ್ಯಾಕೆಟ್‌ನಿಂದ ಹಿಡಿದು ಕೆ.ಜಿ.ಗಟ್ಟಲೇ ಕುಂಕುಮ ಭಂಡಾರ ಮಾರಾಟವಾಗುವುದು ಇಲ್ಲಿನ ವೈಶಿಷ್ಟ್ಯ. ಈ ಕಾಯಕದಲ್ಲೇ ಬದುಕು ಕಟ್ಟಿಕೊಂಡವರಲ್ಲಿ ಹಿಂದೂಗಳಲ್ಲಷ್ಟೇ ಅಲ್ಲದೆ ಮುಸ್ಲಿಮರೂ ಇದ್ದಾರೆ.

ಯಲ್ಲಮ್ಮ ದೇವಸ್ಥಾನದ ಬಳಿ ಇರುವ ಕುಂಕುಮ–ಭಂಡಾರ ಮಾರಾಟದ ಅಂಗಡಿಗಳು

ಚಿತ್ರಗಳು: ಇಮಾಮ್‌ಹುಸೇನ್ ಗೂಡುನವರ

‘ಐತಿಹಾಸಿಕ, ಧಾರ್ಮಿಕ ಮತ್ತು ಪೌರಾಣಿಕ ಇತಿಹಾಸವುಳ್ಳ ಯಲ್ಲಮ್ಮ ದೇವಿಗೆ ಎಲ್ಲ ಸಮುದಾಯಗಳ ಭಕ್ತರಿದ್ದಾರೆ. ಅವರು ವಿಶೇಷ ಪೂಜೆಯೊಂದಿಗೆ ಪರಡಿ ತುಂಬಿ ನೈವೇದ್ಯ ಸಮರ್ಪಿಸುತ್ತಾರೆ. ಉಡಿ ತುಂಬುತ್ತಾರೆ. ‘ಕುಂಕುಮ–ಭಂಡಾರ ಅರ್ಪಿಸಿದರೆ ದೇವಿ ಪ್ರತ್ಯಕ್ಷವಾಗಿ ಆಶೀರ್ವದಿಸುತ್ತಾಳೆ’ ಎಂಬ ನಂಬಿಕೆ ಹಲವು ದಶಕಗಳಿಂದಲೂ ಇದೆ. ಹಾಗಾಗಿ ಭಕ್ತರು ತಪ್ಪದೆ ಇದನ್ನು ಅರ್ಪಿಸುತ್ತಾರೆ’ ಎಂದು ಯಲ್ಲಮ್ಮ ದೇವಸ್ಥಾನದ ಅರ್ಚಕ ಪಿ. ರಾಜಶೇಖರಯ್ಯ ಹೇಳುತ್ತಾರೆ.

ವರ್ಷವಿಡೀ ಬಳಕೆ

‘ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯಲ್ಲಿ ಕೇಮ್ ಎನ್ನುವ ಊರಿದೆ. ಅಲ್ಲಿ ಕುಂಕುಮ–ಭಂಡಾರ ತಯಾರಿಸುವ ದೊಡ್ಡ ದೊಡ್ಡ ಕಾರ್ಖಾನೆಗಳೇ ಇವೆ. ಅಲ್ಲಿಂದ ಪ್ರತಿವರ್ಷ ಕುಂಕುಮ–ಭಂಡಾರ ತರಿಸಿ ಮಾರುತ್ತೇವೆ. ಹಿಂದಿನಿಂದಲೂ ಇದೇ ಕೆಲಸ ಅವಲಂಬಿಸಿ ಬದುಕಿನ ಬಂಡಿ ದೂಡುತ್ತಿದ್ದೇವೆ’ ಎನ್ನುತ್ತ ಭಕ್ತರ ಕೈಚೀಲದಲ್ಲಿ ಭಂಡಾರದ ಪ್ಯಾಕೆಟ್‌ಗಳನ್ನು ಹಾಕಿದರು ವ್ಯಾಪಾರಿ ಸಂತೋಷ ಕುಂಕುಮಗಾರ.

ಗುಣಮಟ್ಟದ ಕುಂಕುಮ–ಭಂಡಾರದ ದರ ಕೆ.ಜಿ.ಗೆ ₹200 ಇದ್ದರೆ, ಸಾಮಾನ್ಯ ದರ್ಜೆಯ ಉತ್ಪನ್ನಗಳ ದರ ಕೆ.ಜಿ.ಗೆ ₹100 ಇದೆ. ಇಲ್ಲಿ ಖರೀದಿಸಿದ ಭಂಡಾರವನ್ನು ಸ್ಥಳೀಯವಾಗಿಯೂ ಧಾರ್ಮಿಕ ಕಾರ್ಯಕ್ಕೆ ಬಳಸುತ್ತಾರೆ. ನಂತರ ದೇವಸ್ಥಾನದಲ್ಲಿ ಪೂಜಿಸಿ ತಮ್ಮೂರಿಗೆ ಒಯ್ದು, ವರ್ಷವಿಡೀ ನಿತ್ಯ ಬಳಕೆ ಮಾಡುತ್ತಾರೆ. ಎರಡೂ ಹುಣ್ಣಿಮೆಯಲ್ಲಷ್ಟೇ 400 ಟನ್‌ಗಳಷ್ಟು ಕುಂಕುಮ–ಭಂಡಾರ ಗುಡ್ಡಕ್ಕೆ ಬರುತ್ತದೆ.

‘ಗುಡ್ಡದಲ್ಲಿ ವರ್ಷದ ಹನ್ನೆರಡು ಹುಣ್ಣಿಮೆಗಳಂದು ಜಾತ್ರೆ ನಡೆಯುತ್ತದೆ. ಪ್ರತೀ ದಿನ ತಪ್ಪದೇ ಭಕ್ತರು ಬರುತ್ತಾರೆ. ಹಾಗಾಗಿ ವರ್ಷವಿಡೀ ವ್ಯಾಪಾರವಿರುತ್ತದೆ. ಆದರೆ, ಈ 45 ದಿನಗಳಲ್ಲಿ ಸ್ವಲ್ಪ ಹೆಚ್ಚು’ ಎನ್ನುತ್ತಾರೆ ಮತ್ತೊಬ್ಬ ವ್ಯಾಪಾರಿ ವಿನಾಯಕ ಕುಂಕುಮಗಾರ.

ಕುಂಕುಮಕ್ಕೆ ಹೋಲಿಸಿದರೆ, ಭಂಡಾರದ ವ್ಯಾಪಾರವೇ ಹೆಚ್ಚು. ಶೇ 20ರಷ್ಟು ಕುಂಕುಮ ಮಾರಿದರೆ, ಶೇ 80ರಷ್ಟು ಭಂಡಾರ ಮಾರಾಟವಾಗುತ್ತದೆ. ಕೆಲವರು ಅಂಗಡಿಗಳಲ್ಲೇ ಇವುಗಳನ್ನು ಮಾರಿದರೆ, ಕೆಲವರು ರಸ್ತೆಬದಿಯೇ ಕುಳಿತು ವ್ಯಾಪಾರ ಮಾಡುತ್ತಾರೆ.

‘ನಮ್ಮ ಬದುಕಿಗೆ ಯಲ್ಲಮ್ಮನ ಗುಡ್ಡವೇ ಆಸರೆ. ಕುಂಕುಮ–ಭಂಡಾರ ಮಾರಾಟದಿಂದ ಬರುವ ಆದಾಯದಲ್ಲೇ ಜೀವನ ಸಾಗಿಸುತ್ತಿದ್ದೇವೆ’ ಎನ್ನುತ್ತಾರೆ ವ್ಯಾಪಾರಿ ಮಂಜುನಾಥ ಮರಡ್ಡಿ.

ಯಲ್ಲಮ್ಮನಿಗೆ ಇಷ್ಟವಾದ ವಸ್ತುಗಳಲ್ಲಿ ಕುಂಕುಮ–ಭಂಡಾರವೂ ಒಂದು. ಕುಂಕುಮ ಮುತ್ತೈದೆತನದ ಸಂಕೇತವೂ ಹೌದು. ಹಾಗಾಗಿ ಗುಡ್ಡಕ್ಕೆ ಬಂದಾಗ ಅಮ್ಮನನ್ನು ಪೂಜಿಸಿ, ಊರಿಗೆ ಹೋಗುವಾಗ ಕುಂಕುಮ–ಭಂಡಾರ ಒಯ್ಯುತ್ತೇವೆ ಎನ್ನುವುದು ಮಹಿಳೆಯರ ಅಭಿಪ್ರಾಯ.

ಜನರಲ್ಲಿರುವ ಇಂಥ ನಂಬಿಕೆಯೇ ಯಲ್ಲಮ್ಮನ ಜಾತ್ರೆಯನ್ನು ಕುಂಕುಮ–ಭಂಡಾರದ ಜಾತ್ರೆ ಎನ್ನುವಂತೆ ಮಾಡಿದೆ. ❖

ಯಲ್ಲಮ್ಮನಗುಡ್ಡದಲ್ಲಿ ಕುಂಕುಮ–ಭಂಡಾರ ವ್ಯಾಪಾರಿ

ಯಲ್ಲಮ್ಮನ ಗುಡ್ಡದಲ್ಲಿ ಭಂಡಾರದ ಓಕುಳಿಯಲ್ಲಿ ಮಿಂದೆದ್ದ ಭಕ್ತರು

ಕಥೆ — ಚೀಮನಹಳ್ಳಿ ರಮೇಶ ಬಾಬು ಅವರ **ಕೇರಿಗಳು** — ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ — https://www.prajavani.net/short-story

ಕವನ — ಸವಿತಾ ನಾಗಭೂಷಣ ಅವರ **ತಕರಾರು** — ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ — https://www.prajavani.net/poetry

ಸಾದರ ಸ್ವೀಕಾರ — ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ–ಮೇಲ್‌ಗೆ ಕಳುಹಿಸಿ bhanuvara@prajavani.co.in

---

ಕಾಡುಗೊಲ್ಲರ ಮೋಹನ ರಾಗ..

ನೀವೂ ಹಾಡು ಹಾಡ್ತೀರಾ?

8ನೇ ಪುಟದಿಂದ...

‘ನಿಮ್ಮ ಹಾಡು ಕೇಳಿ ನೋವು ಮರೆತೆವು ಎಂದು ಕರೆ ಮಾಡಿದವರು ತುಂಬಾ ಮಂದಿ’ ಎನ್ನುವಾಗ ಮೋಹನ್ ಮಾತಲ್ಲಿ ಸಾರ್ಥಕತೆಯ ಭಾವವಿತ್ತು.

ಸಮುದಾಯದ ಮೌಢ್ಯ ತೊಡೆಯುವ ಪ್ರಯತ್ನ

ಕಾಡುಗೊಲ್ಲ ಸಮುದಾಯ ಪಾಲಿಸುತ್ತಿರುವ ಮೌಢ್ಯದ ಬಗ್ಗೆ ಅರಿವು ಮೂಡಿಸುವ ಕೆಲಸವನ್ನೂ ಮೋಹನ್ ಮಾಡುತ್ತಿದ್ದಾರೆ. ಋತುಮತಿಯಾದರೆ ಮನೆಯಿಂದ ಹೊರಗಿಡುವ, ಹೆರಿಗೆಯಾದರೆ ಮಗುವಿನೊಂದಿಗೆ ಎರಡು ತಿಂಗಳು ಮನೆಯಿಂದ ಹೊರಗೆ ಇರಿಸುವ ಸಂಪ್ರದಾಯದ ವಿರುದ್ಧ ಜಾಗೃತಿ ಅಭಿಯಾನ ಮಾಡುತ್ತಿದ್ದಾರೆ. ಸಮುದಾಯದ ಮಕ್ಕಳನ್ನು ಶಿಕ್ಷಣಕ್ಕೆ ಪ್ರೇರೇಪಿಸುವ, ಅವರಲ್ಲಿ ವೈಜ್ಞಾನಿಕ ಚಿಂತನೆಗಳನ್ನು ಬಿತ್ತುವ ಕೆಲಸವನ್ನು ಟ್ರಸ್ಟ್ ಮೂಲಕ ಮಾಡುತ್ತಿದ್ದಾರೆ. ಸಮುದಾಯದ ಮುಗ್ಧ ಜನರು ಈ ಬದಲಾವಣೆಗೆ ನಿಧಾನವಾಗಿ ಹೊಂದಿಕೊಳ್ಳುತ್ತಿದ್ದಾರೆ. ಅವರಲ್ಲಿಯೂ ಜಾಗೃತಿ ಮೂಡುತ್ತಿದೆ ಎಂದು ಮೋಹನ್ ವಿವರಿಸಿದರು. ಕತ್ತಲೆಯಲ್ಲೇ ಬದುಕುತ್ತಿರುವ ಕಾಡುಗೊಲ್ಲ ಸಮುದಾಯಕ್ಕೆ ಮೋಹನ ರಾಗ ಬೆಳಕನ್ನು ತರಲಿ. ❖

ವಲಸೆ ಹಕ್ಕಿಗಳ...

ಫ್ಲೆಮಿಂಗೋ ಹಕ್ಕಿಗಳ ವಲಸೆ

8ನೇ ಪುಟದಿಂದ...

ಪಕ್ಷಿಗಳಿಂದ ಮನುಷ್ಯ ಹಾರಾಡಲು ರೆಕ್ಕೆ ಇರುವ ವಿಮಾನವನ್ನು ಕಂಡುಹಿಡಿದಿದ್ದಾನೆ. ಮಾನವನ ಎಷ್ಟೋ ಆವಿಷ್ಕಾರಗಳಿಗೆ ಸ್ಫೂರ್ತಿ ಮತ್ತು ಸಾಕ್ಷಿ ಇವುಗಳು. ಪಕ್ಷಿಗಳ ತೀಕ್ಷ್ಣನೋಟ, ಸಮೂಹವಾಗಿ ಹಾರಾಡುವಾಗ ಯಾವುದೇ ದೋಷಗಳಿಲ್ಲದ, ಅಪಘಾತಗಳಾಗದೆ ಸಾಧಿಸುವ ಸಮನ್ವಯತೆ ಮತ್ತು ಸಮೂಹ ನಾಯಕತ್ವದ ಗುಣಗಳು, ವಲಸೆಗೆ ತಯಾರಾಗುವ ಆತ್ಮವಿಶ್ವಾಸ, ಅನಿರೀಕ್ಷಿತವಾಗಿ ಬದಲಾಗುವ ವಾತಾವರಣಕ್ಕೆ ಹೊಂದಿಕೊಳ್ಳುವ ಪರಿ ಅದ್ಭುತ. ಹಮ್ಮಿಂಗ್ ಪಕ್ಷಿ ಆಕಾಶದಲ್ಲಿ ಅಲುಗಾಡದೆ ನಿಲ್ಲುವ ಪರಿ ಹೆಲಿಕಾಪ್ಟರ್ ನಾಂದಿಯ ಯೋಚನೆ. ಜಪಾನ್ ದೇಶದ ಬುಲೆಟ್ ರೈಲುಗಳ ಮುಂಭಾಗದ ವಿನ್ಯಾಸಕ್ಕೂ ಹಕ್ಕಿಗಳ ಕೊಕ್ಕಿನ ವಿನ್ಯಾಸವೇ ಸ್ಫೂರ್ತಿಯಾಗಿದೆ. ಹಕ್ಕಿಗಳು ನೀರಿನಲ್ಲಿ ಮುಳುಗಿ ನೀರನ್ನು ಕಲಕದೆ ಮೇಲೆ ಬರುವ ರೀತಿಯ ತಂತ್ರಜ್ಞಾನ ಇದರಲ್ಲಿ ಅಡಗಿದೆ. ಭೂಮಿಯ ಮೇಲಿರುವ, ನೀರಿನೊಳಗಿನ ಪ್ರಾಣಿ, ಮೀನುಗಳನ್ನು ಹಿಡಿಯಲು ಹದ್ದು ತನ್ನ ವೇಗವನ್ನು ಕಡಿಮೆ ಮಾಡದೇ ಚಲನೆಯಲ್ಲಿಯೇ ಶಿಕಾರಿ ಮಾಡುತ್ತದೆ. ಇದರಿಂದ ಶಕ್ತಿಯ ನಾಶವಾಗುವುದಿಲ್ಲ. ಇದೂ ಬುಲೆಟ್ ರೈಲಿನ ತಂತ್ರಜ್ಞಾನಕ್ಕೆ ಮಾದರಿ. ಹೀಗೆ ಅನೇಕ ವಿಷಯಗಳನ್ನು ಪಕ್ಷಿಗಳಿಂದ ಎರವಲು ಪಡೆಯುವ ಮನುಷ್ಯ, ಈ ಭೂಮಂಡಲದ ಸಕಲ ಜೀವರಾಶಿಗಳೂ ಒಂದೇ ಎಂದು ತಿಳಿದು ಸಮಷ್ಟಿ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕಿದೆ. ❖

...ಕೊಕ್ಕೊ ಕುರುಬೂರು

8ನೇ ಪುಟದಿಂದ...

2023ರಲ್ಲಿ ತಂಡದ ಮೋನಿಕಾ ಅಂತರರಾಷ್ಟ್ರೀಯ ಮಟ್ಟದಲ್ಲಿ ಆಡುತ್ತಾರೆ. ಆ ವರ್ಷ ಭಾರತದ ಕೊಕ್ಕೊ ತಂಡ ಏಷಿಯನ್ ಚಾಂಪಿಯನ್‌ಶಿಪ್ ಗೆಲ್ಲುತ್ತದೆ. ಮೋನಿಕಾಗೆ ಚಿನ್ನದ ಪದಕ ದಕ್ಕುತ್ತದೆ. ಆಗ ಜೂನಿಯರ್ ತಂಡದಲ್ಲಿದ್ದ ಚೈತ್ರಾ ಈಗ 2025ರ ವಿಶ್ವಕಪ್‌ನಲ್ಲಿ ‘ಪ್ಲೇಯರ್ ಆಫ್ ದಿ ಮ್ಯಾಚ್’ ಆಗುತ್ತಾರೆ. ಅಂದು ಮಂಜುನಾಥ್ ಜೊತೆಗೆ ನಿಂತು ತಂಡವನ್ನು ತಯಾರು ಮಾಡಿದ್ದ ಅಮೂಲ್ಯಾ ಅದೇ ವಿಶ್ವಕಪ್ ಮ್ಯಾಚ್‌ನ ತಾಂತ್ರಿಕ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಇದು ಎಂಥ ಅದ್ಭುತ ಸ್ಫೂರ್ತಿಯ ಕಥನ!

ಪ್ರಗತಿಪರ ಕೃಷಿಕ ಕೈಲಾಸಮೂರ್ತಿ, ‘ಊರಲ್ಲಿ ಸರಿಯಾದ ಕೋರ್ಟ್ ಇಲ್ಲ. ದಾನಿಗಳು ಕೊಟ್ಟ ಹಣದಲ್ಲಿ ಬಟ್ಟೆ, ಶೂಗಳನ್ನು ಕೊಂಡುಕೊಳ್ಳುತ್ತಾರೆ. ಹಳ್ಳಿಗಾಡಿನ ಇಂಥ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ಸರ್ಕಾರ ಸೂಕ್ತ ಮೂಲಸೌಲಭ್ಯಗಳನ್ನು ಕೊಡಬೇಕು’ ಎನ್ನುತ್ತಾರೆ.

ಮಂಜುನಾಥ ಮೇಷ್ಟ್ರಿಗೆ ಬೇರೆಡೆ ಅವಕಾಶವಿದ್ದರೂ ಶಾಲೆ ಬಿಟ್ಟು ಹೋಗಿಲ್ಲ. ‘ನನ್ನದೇನಿದೆ? ಆ ಮಕ್ಕಳು ಕಷ್ಟಪಡ್ತಿದ್ದಾರೆ’ ಅನ್ನುತ್ತಾರೆ. ಒಬ್ಬ ಶಿಕ್ಷಕ ಮನಸು ಮಾಡಿದರೆ ಮಕ್ಕಳನ್ನು ಯಾವ ಎತ್ತರಕ್ಕೆ ಕೊಂಡೊಯ್ಯಬಹುದು ಎಂಬುದಕ್ಕೆ ಮಂಜುನಾಥ್ ಅವರೇ ಸಾಕ್ಷಿ. ಮಕ್ಕಳು ಆಟದ ಜೊತೆ ಪಠ್ಯದಲ್ಲೂ ಹಿಂದೆ ಬೀಳದಂತೆ ಅವರು ನೋಡಿಕೊಳ್ಳುತ್ತಿದ್ದಾರೆ. ಈಗಾಗಲೇ ಕೆಲ ಹೆಣ್ಣುಮಕ್ಕಳು ಕೊಕ್ಕೊ ಕಾರಣಕ್ಕೆ ಕ್ರೀಡಾ ಕೋಟಾದಡಿ ಸರ್ಕಾರಿ ನೌಕರಿ ಪಡೆದುಕೊಂಡಿದ್ದಾರೆ. ಒಂದು ವೇಳೆ ಮಂಜುನಾಥ್ ಈ ಶಾಲೆಯ ಶಿಕ್ಷಕರಾಗದೇ ಹೋಗಿದ್ದರೆ ಕುರುಬೂರಿನಲ್ಲಿ ಇಷ್ಟೊಂದು ಚಾಂಪಿಯನ್‌ಗಳು ಹುಟ್ಟುತ್ತಿರಲಿಲ್ಲ. ಅವರ ಪ್ರತಿಭೆ ಬೆಳಕಿಗೆ ಬರುತ್ತಿರಲಿಲ್ಲ. ಅನೇಕ ಮಿತಿಗಳೊಂದಿಗೆ ಇಷ್ಟೆಲ್ಲವನ್ನೂ ಸಾಧಿಸುವುದು ಅವರಿಗೆ ಸಾಧ್ಯವಾಗುವುದಾದರೆ ಅದು ಇನ್ನೂ ಅನೇಕ ಶಿಕ್ಷಕರಿಗೆ, ಶಿಕ್ಷಣ ಸಂಸ್ಥೆಗಳಿಗೆ ಮಾದರಿಯಾಗಬೇಕಲ್ಲವೇ?

‘ಕುರುಬೂರು ನೆಲದ ಮಣ್ಣಿಗೆ ಒಂದು ಶಕ್ತಿ ಇದೆ’ ಅನ್ನುತ್ತಾರೆ ಮಂಜುನಾಥ್. ಅದು ನಿಜ ಎನ್ನುವುದು ಈಗಾಗಲೇ ಸಾಬೀತಾಗಿದೆ. ಆದ್ದರಿಂದ ಕುರುಬೂರಿನಲ್ಲಿ ಕೊಕ್ಕೊ ಅಕಾಡೆಮಿ ಸ್ಥಾಪನೆ ಆಗಬೇಕು. ಈ ನಿಟ್ಟಿನಲ್ಲಿ ಸರ್ಕಾರ ಇಲ್ಲಿನ ಮಕ್ಕಳ ಸಾಧನೆಯನ್ನು ಗುರುತಿಸಬೇಕು. ಒಂದು ವೇಳೆ ಗುರುತಿಸದಿದ್ದರೂ ಆ ಮಣ್ಣಿನ ಹೆಣ್ಣುಮಕ್ಕಳು ಆಟ ನಿಲ್ಲಿಸುವುದಿಲ್ಲ ಅನ್ನುವುದು ಬೇರೆ ಮಾತು. ❖

ತರಬೇತಿಗೂ ಮುನ್ನ ಪೋಲ್‌ಗೆ ಆಟಗಾರ್ತಿಯರ ಪೂಜೆ

ಸಾಧನೆಯ ಸಾಕ್ಷಿ...

ಮುನ್ನೋಟ 09-02-2025 ರಿಂದ 15-02-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ನಿಮ್ಮ ನಡವಳಿಕೆಯನ್ನು ಬದಲಾವಣೆ ಮಾಡಿಕೊಂಡು ಜನಬೆಂಬಲ ಪಡೆಯುವಿರಿ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ನಿಮ್ಮ ಕೆಲಸಗಳಿಗಾಗಿ ಬಂಧುಗಳನ್ನು ಒಲೈಸುವಿರಿ. ಆಸ್ತಿವ್ಯವಹಾರವನ್ನು ವೃತ್ತಿಯಾಗಿ ಮಾಡಿಕೊಂಡವರಿಗೆ ಲಾಭವಿದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಬರುವ ಸಾಧ್ಯತೆಗಳಿವೆ. ನರಸಂಬಂಧಿ ದೋಷಗಳು ನಿಮ್ಮಲ್ಲಿ ಕಾಣಿಸಬಹುದು. ಹಿರಿಯರಿಂದ ಹೆಚ್ಚು ಅನುಕೂಲವಾಗುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಬಹಳ ಗೌರವಯುತವಾಗಿ ನಡೆದುಕೊಳ್ಳುವಿರಿ. ಆದಾಯವು ತಕ್ಕ ಮಟ್ಟಿಗೆ ಇರುತ್ತದೆ. ಚುರುಕಾದ ನಡವಳಿಕೆಯಿಂದ ಎಲ್ಲರ ಗಮನ ಸೆಳೆಯುವಿರಿ. ಹಿರಿಯರು ತಮ್ಮ ವ್ಯವಹಾರಗಳಲ್ಲಿ ಅವಕಾಶ ಕೊಡುವರು. ವಿದ್ಯಾರ್ಥಿಗಳಿಗೆ ಈಗ ಹೆಚ್ಚು ಕಷ್ಟಪಡಬೇಕಾದ ಸಂದರ್ಭವಿರುತ್ತದೆ. ಪ್ರಸೂತಿ ತಜ್ಞರಿಗೆ ಮತ್ತು ಮೂಳೆ ವೈದ್ಯರಿಗೆ ಹೆಚ್ಚು ಬೇಡಿಕೆ ಇರುತ್ತದೆ. ಸಂಸಾರಕ್ಕಾಗಿ ಸಂಗಾತಿಯು ಹೆಚ್ಚು ಸಹಕಾರ ನೀಡುವರು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಮುಗುಳ್ನಗುತ್ತಲೇ ಬಂಧುಗಳಿಗೆ ಹೇಳಬೇಕಾದ್ದನ್ನು ಸರಿಯಾಗಿ ತಿಳಿಸುವಿರಿ. ಆದಾಯ ಸ್ವಲ್ಪ ಕಡಿಮೆ ಇದ್ದರೂ ಕೃಷಿಯಿಂದ ಆದಾಯ ಹೆಚ್ಚುತ್ತದೆ. ಬಂಧುಗಳು ನಿಮ್ಮ ವ್ಯವಹಾರಗಳಿಗೆ ಅಡ್ಡಿ ಮಾಡುವರು, ಹಾಗಾಗಿ ಅವರನ್ನು ವ್ಯವಹಾರಗಳಲ್ಲಿ ಸೇರಿಸಿಕೊಳ್ಳಬೇಡಿ. ಕೃಷಿ ಭೂಮಿ ಅಭಿವೃದ್ಧಿ ಮಾಡುವವರಿಗೆ ಲಾಭವಿದೆ. ವಿದೇಶದಲ್ಲಿ ಓದುತ್ತಿರುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ನೀವು ಉಲ್ಲಾಸ ಕಳೆದುಕೊಂಡು ಚಿಂತೆಗೀಡಾದಂತೆ ಇರುವಿರಿ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ನಿಮ್ಮ ಒಳ್ಳೆಯ ಕೆಲಸಗಳಿಗೆ ಬಂಧುಗಳಿಂದ ಸಹಕಾರ ದೊರೆಯುತ್ತದೆ. ಹಿರಿಯರಿಗೆ ವಿದೇಶದಲ್ಲಿರುವ ಮಕ್ಕಳಿಂದ ಧನಸಹಾಯ ದೊರೆಯಬಹುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ಇರುತ್ತದೆ. ಆಯುರ್ವೇದ ಪಂಡಿತರಿಗೆ ಬೇಡಿಕೆ ಹೆಚ್ಚಾಗುವ ಸಾಧ್ಯತೆಗಳಿವೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ನಿಮ್ಮದೇ ನಿರ್ಧಾರಗಳಲ್ಲಿ ನೀವು ಸೋಲುವಿರಿ. ಆದಾಯವು ಈಗ ಕಡಿಮೆ ಇರುತ್ತದೆ. ನಿಮ್ಮ ಚಟುವಟಿಕೆಗಳಿಗೆ ಮಹಿಳೆಯರಿಂದ ತೊಂದರೆ ಬರಬಹುದು. ಆಸ್ತಿ ವ್ಯವಹಾರ ಮಾಡುವವರ ಲಾಭ ಬಹಳ ಹೆಚ್ಚುವ ಸಾಧ್ಯತೆಗಳಿವೆ. ವಿದ್ಯಾರ್ಥಿಗಳಿಗೆ ನಿರೀಕ್ಷೆಯ ಹತ್ತಿರದ ಫಲಿತಾಂಶ ಬರಬಹುದು. ಉದ್ಯೋಗದಲ್ಲಿ ಅಭಿವೃದ್ಧಿ ಬರುವ ಸೂಚನೆ ಇದೆ. ಸಂಗಾತಿಯು ಕುಟುಂಬಕ್ಕಾಗಿ ಅತಿ ಹೆಚ್ಚು ಶ್ರಮಪಡುವರು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಒತ್ತಡದಲ್ಲಿ ಕೆಲಸ ಮಾಡಬೇಕಾದ ಅನಿವಾರ್ಯ ನಿಮಗೆ ಎದುರಾಗುತ್ತದೆ. ಈಗ ಆದಾಯವು ನಿಮ್ಮ ಖರ್ಚನ್ನು ತೂಗಿಸುತ್ತದೆ. ಶ್ರಮಪಟ್ಟು ಕೆಲಸ ಮಾಡಿದಲ್ಲಿ ಉದ್ಯೋಗದಲ್ಲಿ ಮೇಲೆ ಬರಬಹುದು. ಸಹಕಾರದಿಂದ ಆಸ್ತಿ ಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶವಿರುತ್ತದೆ. ಮಕ್ಕಳ ಬಗ್ಗೆ ಒಳ್ಳೆಯ ವಾರ್ತೆಗಳು ಕೇಳಿ ಬರುತ್ತವೆ. ಹಳೆಯ ಕಾಯಿಲೆ ನಿಮ್ಮನ್ನು ಕಾಡಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ನಿಮ್ಮ ಅತಿಯಾಸೆ ನಿಮ್ಮನ್ನು ಸಾಲಗಾರರನ್ನಾಗಿ ಮಾಡಬಹುದು. ಹಿರಿಯರ ಆಸ್ತಿಯಿಂದ ಆದಾಯ ಬರುತ್ತದೆ. ತಂದೆಯ ಹೆಸರಿನಿಂದ ನಿಮ್ಮ ಕೆಲಸಗಳಿಗೆ ಸಹಕಾರ ಪಡೆಯಬಹುದು. ಸರ್ಕಾರಿ ಜಮೀನುಗಳ ವ್ಯವಹಾರ ಮಾಡುವವರಿಗೆ ಆದಾಯವಿರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶವಿರುವುದಿಲ್ಲ. ಮಹಿಳೆಯರ ಜೊತೆಗಿನ ವ್ಯವಹಾರಗಳು ನಷ್ಟಕ್ಕೆ ಕಾರಣವಾಗುವುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ನಿಮ್ಮ ಪ್ರಯತ್ನದಲ್ಲಿ ಸ್ವಲ್ಪ ವ್ಯತ್ಯಾಸಗಳಿದ್ದರೂ ಫಲ ಇದ್ದೇ ಇರುತ್ತದೆ. ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪಬಹುದು. ಹಿರಿಯರು ನಿಮ್ಮ ವ್ಯವಹಾರಗಳಲ್ಲಿ ಸಹಕರಿಸಿ ಮುಂದುವರಿಸುವರು. ಈಗ ವಿದೇಶದಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಗಳಿಕೆಯ ಅವಕಾಶಗಳು ದೊರೆಯುತ್ತವೆ. ಸಂಗಾತಿಯಿಂದ ಸಾಕಷ್ಟು ಧನಸಹಾಯ ದೊರೆಯುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಅತಿಯಾಗಿ ಹಣಕಾಸಿನ ವ್ಯವಹಾರ ಖಂಡಿತ ಬೇಡ. ನಿಮಗೆ ಸಿಗಬೇಕಾದ ಸರ್ಕಾರಿ ಹಣ ಖಂಡಿತ ಸಿಗುತ್ತದೆ. ಸಾಲ ಸೌಲಭ್ಯಗಳು ಸರಾಗವಾಗಿ ದೊರಕುತ್ತವೆ. ಆದಾಯವು ಸ್ವಲ್ಪ ಉತ್ತಮವಾಗಿರುತ್ತದೆ. ಕೆಲವೊಮ್ಮೆ ನಿಮ್ಮ ವರ್ತನೆಯು ಶತ್ರುಗಳಿಗೆ ಭಯ ಹುಟ್ಟಿಸುತ್ತದೆ. ವಿದೇಶಕ್ಕೆ ಆಭರಣಗಳನ್ನು ರಫ್ತು ಮಾಡುವವರಿಗೆ ಲಾಭವಿರುತ್ತದೆ. ಸಂಗಾತಿಯ ಸಲಹೆಯಂತೆ ಮಾಡಿದ ಕೃಷಿ ವ್ಯವಹಾರಗಳಲ್ಲಿ ಲಾಭವಿರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಬಹಳ ವ್ಯವಹಾರ ಚತುರರಾಗಿರುವಿರಿ. ಆದಾಯವು ಕಡಿಮೆ ಇದ್ದರೂ ಅದನ್ನು ನಿಭಾಯಿಸುವ ಕಲೆ ನಿಮ್ಮಲ್ಲಿ ಇರುತ್ತದೆ. ನಿಮ್ಮ ಎದುರಾಳಿಗಳ ನಡುವೆಯೂ ಆದಾಯವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡುವಿರಿ. ಭೂ ವ್ಯವಹಾರಗಳಲ್ಲಿ ನಿರೀಕ್ಷಿತ ಫಲಿತಾಂಶವಿರುವುದಿಲ್ಲ. ವಿದ್ಯಾರ್ಥಿಗಳಿಗೆ ಉತ್ತಮ ವಿದ್ಯೆ ಒದಗುವ ಸಂದರ್ಭವಿದೆ. ಶೀತ ಅಥವಾ ಉಷ್ಣ ವ್ಯತ್ಯಾಸದಿಂದ ದೇಹದಲ್ಲಿ ಸ್ವಲ್ಪ ವ್ಯತ್ಯಾಸಗಳಾಗಬಹುದು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ವೃತ್ತಿಯಲ್ಲಿರುವವರಿಗೆ ವೃತ್ತಿಯ ಒತ್ತಡ ಹೆಚ್ಚಾಗಬಹುದು. ವಿದೇಶಿ ಹಣ ವ್ಯವಹಾರ ಮಾಡುವವರಿಗೆ ಆದಾಯವಿರುತ್ತದೆ. ನಿಮ್ಮ ಕೆಲಸಗಳಿಗೆ ಬಂಧುಗಳ ವಿರೋಧ ಕಾಣಬಹುದು. ಭೂ ಸಂಬಂಧಿತ ಹಣದ ವ್ಯವಹಾರಗಳಲ್ಲಿ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶವಿರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಜನರೊಂದಿಗೆ ಹೇಗೆ ವ್ಯವಹರಿಸಬೇಕೆಂದು ಅರಿತು ನಡೆಯುವುದು ಒಳ್ಳೆಯದು. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ನಿಮ್ಮ ಕೆಲವು ಕೆಲಸಗಳಿಗೆ ಮಾತ್ರ ಹಿರಿಯರ ಬೆಂಬಲ ದೊರೆಯುತ್ತದೆ. ಕೃಷಿಯಿಂದ ಮತ್ತು ಹೈನುಗಾರಿಕೆಯಿಂದ ಉತ್ತಮ ಆದಾಯ ನಿರೀಕ್ಷೆ ಮಾಡಬಹುದು. ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶವಿರುತ್ತದೆ. ನರರೋಗ ತಜ್ಞರಿಗೆ ಬಹಳ ಬೇಡಿಕೆ ಬರುತ್ತದೆ.

ಪದಬಂಧ 2878



ಮೇಲಿನಿಂದ ಕೆಳಕ್ಕೆ

1. ನದಿಯ ಕೂಡಲಿನಲ್ಲಿ ಮಾಡುವ ಪವಿತ್ರ ಜಳಕ 5
2. ಕರದಲ್ಲಿ ಬರುವ ದೋಹೆಗಳ ಸಂತ 3
3. ಆಕರ್ಷಣೆಯ ಸೆಳೆತ 2
4. ನವಿರಾಗಿ ಮೋಸ ಮಾಡುವವ 5
6. ಮುರುಕು ಧರ್ಮ ಶಾಲೆಯಲ್ಲಿ ಕನಸು ಕಂಡವ 3
7. ಅಯೋಧ್ಯೆಯಲ್ಲಿ ಸರಸರನೆ ಹರಿಯುವ ನದಿ 3
8. ಅಂಕುರಿಸುವ ರಾಜವಂಶ 3
10. ಭಾಷೆಯ ಬರವಣಿಗೆಗೆ ಅಕ್ಷರ ಸೃಷ್ಟಿಸಿದವ 4
11. ಮೂರಳತೆಯ ಆನೆ 2
13. ಇಸ್ಪಿಟಾಟದ ಅಡಿಯಾಳು 3
14. ನಿಷ್ಕರುಣೆಯಲ್ಲ ಅನುಕಂಪವಿರುವವ 4
16. ಒಂಭತ್ತನೆಯ ಸ್ಥಾನ 3
17. ಪ್ರಾಚೀನ ನಾಲ್ಕು ಶಾಸ್ತ್ರಗಳು ವಿಶ್ವಕ್ಕೆ ನೀಡಿದ ಒಸಗೆ 5
18. ಅಂತರ್ಯ ತಲೆಕೆಳಗಾದಾಗ ಮಾಡುವ ನಮಸ್ಕಾರ 2
20. ಅಂಗೈಯಲ್ಲಿ ಬೆರತು ಲೀನವಾಗು 3
21. ಪುಟ್ಟದಾದ ಹಗುರವಾದ ಕವಿಯ ಪದ್ಯ 5
23. ಕತೆ ಕಟ್ಟಡದ ಮೂಲ ರಚನೆ 3
24. ಹಿಂದಿಯವನು ಕೊಡುವ ಶುಲ್ಕ 3
25. ರಾಗ ಉಕ್ಕಿಸುವ ಫಾಸ್ಫರಸ್ 3
26. ಆಂಗ್ಲರಿಂದ ನಮಗೆ ಬಂದ ಹಣ 2

ಎಡದಿಂದ ಬಲಕ್ಕೆ

1. ಕಾರ್ಯಕ್ರಮಕ್ಕೆ ಚಾಲನೆ ಕೊಡುವವ 4
3. ರಾಗಗಳಲ್ಲಿ ಮನಮೋಹಕವಾದದ್ದು 3
5. ಬೀಗ ತೆಗೆಯುವ ಅಳಿಯನ ತಾಯಿ 3
7. ಹಸ ತಪ್ಪಿಸ್ಕೊಂಡು ಹಿಂದುಮುಂದಾಗಿ ಜೊತೆಯಿರಬಹುದು 2
8. ಇದು ಇಹಕ್ಕೆ ಸೇರಿದುದಲ್ಲ 2
9. ದ್ವಾಪರವಾದ ಮೇಲೆ ಬಂದ ತಿಳಿವಳಿಕೆಯ ಕಾಲ 4
12. ಸದಾ ಹಸನ್ಮುಖಿಯಾದ ಮಗು 5
15. ಮಂದಿಯ ತಂದೆ 3
17. ತೆಲುಗಿನ ಈ ಯೋಗಿ ಕವಿ ಸರ್ವಜ್ಞನಂತೆ 3
19. ಪುರಸ್ಕಾರಕ್ಕೆ ತಯಾರಿಸುವ ಅಮೂಲ್ಯ ಹರಳಿನ ಪದ್ಮ 5
22. ಮಹಾನ್ ಸಂತರು 4
25. ರಂಗನಾಥನನ್ನು ಮುದ್ದಿನಿಂದ ಕರೆಯುವಾಗ ಕಟ್ಟುವ ಬಣ್ಣ 2
26. ಮನೆಮನೆಗೂ ಇರಬೇಕಾದ ವೃಕ್ಷ 2
27. ಮಜದಲ್ಲಿ ‘ನೋ’ ಎನ್ನುವ ಮಾನಸ ಪುತ್ರ 3
28. ಕೌರವರ ಕುತಂತ್ರ ಮಾವ 3
29. ಕಂತೆಯಲ್ಲಿ ಬಿಗಿದ ಘಟನೆ 4

ಪದಬಂಧ ಉತ್ತರ -2877

ಮೇಲಿಂದ ಕೆಳಕ್ಕೆ

1. ಮನೋವೇದನೆ 2.ಭಜನೆ 3.ಭಾರತ 4.ಜಗನ್ಮೋಹನ 6.ಗಳಿಕೆ 7.ಶೀರ್ಷಿಕೆ 9.ಚಿರ 10.ವಿಸ 12.ವಿದೂಷಿ 14.ಲಕ್ಷಣ 15.ಜನಸಾಗರ 16.ಘೋರ 17.ಸುವ್ರತ 18.ಕಲೀಫ 19.ಕದ 20.ರುದ್ರಪ್ರಯಾಗ 23.ಜಾಪತ್ರೆ 24.ಲಕ್ಷ್ಮೀಶ

ಎಡದಿಂದ ಬಲಕ್ಕೆ

1. ಮಹಾಕುಂಭ 3.ಭಾರದ್ವಾಜ 5.ನೆಗಡಿಶೀತ 8.ದಧೀಚಿ 10.ವಿವಾಹ 11.ರವಿಕೆ 13.ಕೆಲಸ 16.ಘೋಷಿಸು 18.ಕಣಕ 21.ನಕಾರ 22.ದರಿದ್ರ 23.ಜಾತಕಫಲ 25.ರಥಯಾತ್ರೆ 26.ಶರವೇಗ

ಸಂಗೀತ ಲೋಕದ ನಾದನಿಧಿ ಪರ್ವತೀಕರ

ಸಚಿನ್ ದೇಸಾಯಿ

ಸಹೃದಯರೇ..

'ನಾನು ನನ್ನ ವಾದ್ಯವನ್ನು ಹೊಂದಿಸಿಕೊಳ್ಳುತ್ತಿದ್ದೇನೆ. ನೀವು ಕೂಡ ನಿಮ್ಮ ದೇಹವೆಂಬ ವಾದ್ಯವನ್ನು ಹೊಂದಿಸಿಕೊಳ್ಳಿ. ನನ್ನ ಎದುರು ನೆರೆದಿರುವ ನೀವೇ ವಾದ್ಯ. ನನ್ನ ಮೂಲಕ ನಿಮ್ಮನ್ನು ನುಡಿಸಲು ಅವನಿಗೆ (ಭಗವಂತನಿಗೆ) ಅವಕಾಶ ಕೊಡಿ. ನಾದದ ಅಲೆಯಲ್ಲಿ ಎಲ್ಲರೂ ಅವನಿಗೆ ಶರಣಾಗಿ...'

ಬದರಿನಾಥ ಕ್ಷೇತ್ರದಲ್ಲಿ 70ರ ದಶಕದಲ್ಲಿ ಸಂತರೊಬ್ಬರು ಈ ಸಾಲುಗಳನ್ನು ಹೇಳಿ ವೀಣಾವಾದನ ಆರಂಭಿಸುತ್ತಿದ್ದರು. ಕೊರೆವ ಚಳಿಯಲ್ಲೂ ಅರೆಬೆತ್ತಲಾಗಿ ಕುಳಿತು ಅವರು ನುಡಿಸುತ್ತಿದ್ದ ವೀಣೆ ಅಲ್ಲಿದ್ದವರ ಅಂತರಂಗಕ್ಕೆ ದೈವಿಸ್ಪರ್ಶದ ಅನುಭವ ನೀಡುತ್ತಿತ್ತು.

ಈ ಘಟನೆಯನ್ನು ಪ್ರಸಿದ್ಧ ಯೋಗಗುರು ಸ್ವಾಮಿ ರಾಮ್, 'ಲಿವಿಂಗ್ ವಿತ್ ಹಿಮಾಲಯನ್ ಮಾಸ್ಟರ್ಸ್' ಕೃತಿಯಲ್ಲಿ ದಾಖಲಿಸಿದ್ದಾರೆ. ಈ ಕೃತಿ ಹದಿನೆಂಟು ಬಾರಿ ಮುದ್ರಣಗೊಂಡಿದೆ. ಅಲ್ಲಿ ವೀಣೆ ನುಡಿಸುತ್ತಿದ್ದ ವ್ಯಕ್ತಿ ಬೇರೆ ಯಾರೂ ಅಲ್ಲ; ಅಪ್ಪಟ ಕನ್ನಡಿಗ ದತ್ತಾತ್ರೇಯ ಪರ್ವತೀಕರ.

1958ರಲ್ಲಿ ಭಾರತಕ್ಕೆ ಬಂದಿದ್ದ ಬ್ರಿಟನ್ ಚಲನಚಿತ್ರ ನಿರ್ಮಾಪಕ ಲೆಸ್ಲಿ ಶೆಫರ್ಡ್, ಋಷಿಕೇಶದಲ್ಲಿ ಒಬ್ಬ ಸಾಧುವನ್ನು ಭೇಟಿಯಾದರು. ಅವರಿಂದ ಸಂಗೀತ ಕಲಿತು 'ಎ ಪೋರ್ಟ್ರೇಟ್ ಆಫ್ ಎನ್ ಇಂಡಿಯನ್ ಮ್ಯೂಜಿಸಿಯನ್' ಎಂಬ ಲೇಖನ ಬರೆದರು. ಲೇಖನದಲ್ಲಿ 'ಅಪಾರ ಸಂಗೀತ ಜ್ಞಾನ ಹೊಂದಿದ ಸಾಧುವೊಬ್ಬರು ದೇವಸ್ಥಾನಗಳಲ್ಲಿ ಅನಾಥರಂತೆ ಬದುಕುವುದನ್ನು ಕಂಡು ಆಶ್ಚರ್ಯಗೊಂಡೆ. ಇದು ಭಾರತದ ಶ್ರೀಮಂತಿಕೆ' ಎಂದು ಉಲ್ಲೇಖಿಸಿದ್ದರು. ಲೆಸ್ಲಿ ಉಲ್ಲೇಖಿಸಿದ ಸಾಧು ಕೂಡ ದತ್ತಾತ್ರೇಯ ಪರ್ವತೀಕರ.

> ವೀಣಾವಾದನದ ಮೂಲಕ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಪ್ರಪಂಚಕ್ಕೆ ಅದ್ವಿತೀಯ ಕೊಡುಗೆ ಸಲ್ಲಿಸಿದ ಶ್ರೇಷ್ಠ ಸ್ವರಸಾಧಕ ದತ್ತಾತ್ರೇಯ ಪರ್ವತೀಕರ. ಇವರು ನುಡಿಸಿದ ಕೆಲವು ರಾಗಗಳು 'ಯುನೆಸ್ಕೋ ಕಲೆಕ್ಷನ್ ಆಫ್ ಟ್ರೆಡಿಷನಲ್ ಮ್ಯೂಸಿಕ್ ಆಫ್ ದಿ ವರ್ಲ್ಡ್'ನಲ್ಲಿ ದಾಖಲಾಗಿವೆ.

ಫ್ರೆಂಚ್ ದೇಶದ ಇತಿಹಾಸಕಾರ, ಸಂಗೀತಜ್ಞ ಅಲೆನ್ ಡೇನಿಯಲ್ ಭಾರತ ಪ್ರವಾಸ ಕೈಗೊಂಡಾಗ ಕಾಶಿಯಲ್ಲಿ ಋಷಿಸದೃಶ ವ್ಯಕ್ತಿ ವೀಣೆ ನುಡಿಸುವುದನ್ನು ಕಂಡು ಆಕರ್ಷಿತರಾದರು. ಅವರು ನುಡಿಸಿದ ಕೆಲವು ರಾಗಗಳನ್ನು ರೆಕಾರ್ಡ್ ಮಾಡಿಕೊಂಡರು. 1960ರಲ್ಲಿ ಯುರೋಪ್‌ಗೆ ತೆರಳಿದ ಡೇನಿಯಲ್ ಯುನೆಸ್ಕೋದ ಅಂತರರಾಷ್ಟ್ರೀಯ ಸಂಗೀತ ಪರಿಷತ್ ಸಲಹೆಗಾರರಾಗಿ ಆಯ್ಕೆಯಾದಾಗ ಕಾಶಿಯಲ್ಲಿ ರೆಕಾರ್ಡ್ ಮಾಡಿಕೊಂಡ ರಾಗಗಳನ್ನು 'ಯುನೆಸ್ಕೋ ಕಲೆಕ್ಷನ್ ಆಫ್ ಟ್ರೆಡಿಷನಲ್ ಮ್ಯೂಸಿಕ್ ಆಫ್ ದಿ ವರ್ಲ್ಡ್' ನಲ್ಲಿ ದಾಖಲಿಸಿದರು. ಅಂದು ದಾಖಲಿಸಿದ ರಾಗಗಳನ್ನು ಅಮೆರಿಕದ ನ್ಯೂಯಾರ್ಕ್ ಎಥಿಕ್ ಫೋಕ್‌ವೇಸ್ ಲೈಬ್ರರಿಯಲ್ಲಿ ಇಂದಿಗೂ ಕೇಳಬಹುದಾಗಿದೆ. ಡೇನಿಯಲ್ ಮುಂದೆ ವೀಣೆ ನುಡಿಸಿದವರು ಕೂಡ ದತ್ತಾತ್ರೇಯ ಪರ್ವತೀಕರ.

ಇಂಥ ಅಪರೂಪದ ಸಂಗೀತ ಸಾಧನೆಗೆ ಸಾಕ್ಷಿಯಾದ ವೀಣಾವಾದಕ ದತ್ತಾತ್ರೇಯ ಪರ್ವತೀಕರ ಎಲೆ ಮರೆಯ ಕಾಯಿಯಾಗಿಯೇ ಉಳಿದು ಇತಿಹಾಸ ಪುಟ ಸೇರಿದ್ದಾರೆ.

ಪರ್ವತೀಕರ ಮೂಲತಃ ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ ಪಟ್ಟಣದವರು. ನಾದನಂದ ಬಾಪು ಎಂಬ ಗುರುವಿನ ಬಳಿ ಸಿತಾರ್ ಹಾಗೂ ವೀಣಾವಾದನ ಕಲಿತದ್ದು ಹೈದರಾಬಾದ್‌ನಲ್ಲಿ. ಬಿಎಸ್ಸಿ ಪದವೀಧರರಾಗಿದ್ದ ಪರ್ವತೀಕರ, ಗಣಿತದ ಅನೇಕ ಸೂತ್ರಗಳಿಗೆ ಅನುಗುಣವಾಗಿ ಸ್ವರಗಳನ್ನು ಜೋಡಿಸಿ ಸಂಶೋಧನೆ ನಡೆಸಿದ್ದಾರೆ. ಸಿತಾರ್, ಸ್ವರಮಂಡಲ ಹಾಗೂ ವಿಚಿತ್ರ ವೀಣೆಯ ಉತ್ತಮ ಅಂಶಗಳನ್ನು ಆಯ್ದುಕೊಂಡ 1961ರಲ್ಲಿ ಹೊಸ ವೀಣೆಯನ್ನು ತಾವೇ ರೂಪಿಸಿ ಅದನ್ನು ದತ್ತ ವೀಣೆ ಎಂದು ಕರೆದಿದ್ದರು. ಈ ವೀಣೆಯ ತಂತಿಗಳ ರಚನೆ ಬಗ್ಗೆ ಭೌತವಿಜ್ಞಾನಿ ಸರ್ ಸಿ.ವಿ. ರಾಮನ್ ಅವರೊಂದಿಗೂ ಚರ್ಚಿಸಿದ್ದರು. ದೆಹಲಿಯ ಸಂಗೀತ ನಾಟಕ ಅಕಾಡೆಮಿ ಕಚೇರಿಯಲ್ಲಿ ಇಂದಿಗೂ ದತ್ತ ವೀಣೆಯನ್ನು ನೋಡಬಹುದು.

ನಮ್ಮ ದೇಶದ ಮೊದಲ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಅವರಿಗೂ ವೀಣಾವಾದನ ಕಲಿಸಿದ್ದಾರೆ. ಮತ್ತೊಬ್ಬ ರಾಷ್ಟ್ರಪತಿ ವಿ.ವಿ.ಗಿರಿ ಅವರು ಪರ್ವತೀಕರ ಅವರಿಗೆ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ರಾಯಭಾರಿಯಾಗಿ ವಿದೇಶಗಳಲ್ಲೂ ವೀಣೆ ನುಡಿಸುವಂತೆ ಆಹ್ವಾನ ನೀಡಿದ್ದರು. ಸಂಪ್ರದಾಯಸ್ಥ ಕುಟುಂಬದಲ್ಲಿ ಬೆಳೆದಿದ್ದ ಪರ್ವತೀಕರ ವಿದೇಶ ಪ್ರವಾಸವನ್ನು ನಯವಾಗಿ ತಿರಸ್ಕರಿಸಿದರು. ನಂತರ ದೆಹಲಿಯಲ್ಲಿ 'ಸ್ಪುಟ್ನಿಕ್ ವಿಂಗ್ ಪ್ರೋಗ್ರಾಮ್' ಎಂಬ ಕಾರ್ಯಕ್ರಮದಲ್ಲಿ ಪರ್ವತೀಕರ ಅವರ ವೀಣಾವಾದನ ನಡೆಯಿತು. ಈ ಕಾರ್ಯಕ್ರಮ 24 ದೇಶಗಳಲ್ಲಿ ಪ್ರಸಾರವಾಯಿತು.

ಮುಂಬೈನಲ್ಲಿ ಪಂಪಾ ಪಿಕ್ಚರ್ಸ್ ಲಿಮಿಟೆಡ್ ಎಂಬ ಚಲನಚಿತ್ರ ಕಂಪನಿ ಆರಂಭಿಸಿದ್ದ ಶಾಂತೇಶ ಪಾಟೀಲ, 'ಚಂದ್ರಹಾಸ' ಎಂಬ ಚಲನಚಿತ್ರ ನಿರ್ಮಿಸಲು ಮುಂದಾಗಿದ್ದರು. ಈ ಚಿತ್ರದ ಸಂಗೀತ ನಿರ್ದೇಶನಕ್ಕೂ ಪರ್ವತೀಕರ ಅವರಿಗೆ ಅವಕಾಶ ಬಂದಿತ್ತು. ಇದನ್ನೂ ತಿರಸ್ಕರಿಸಿದ್ದರು. ಪರ್ವತೀಕರ ಅವರ ಸಂಗೀತದ ಉದ್ದೇಶವೇ ಬೇರೆಯಾಗಿತ್ತು.

ದತ್ತಾತ್ರೇಯ ಪರ್ವತೀಕರ

1951ರಲ್ಲಿ ಕಾಂಗ್ರೆಸ್ ಆಫ್ ವರ್ಲ್ಡ್ ಎಂಬೆಸಿಯಲ್ಲಿ, 1961ರಲ್ಲಿ ಪ್ರಧಾನಿ ಜವಾಹರ್‌ಲಾಲ್ ನೆಹರು ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೌಹಾರ್ದ ಸಮ್ಮೇಳನದಲ್ಲೂ ಪರ್ವತೀಕರ ವೀಣೆ ನುಡಿಸಿದ್ದಾರೆ. ಪರ್ವತೀಕರ ಅವರ ವೀಣಾವಾದನಕ್ಕೆ ಪಂಡಿತ್ ಭೀಮಸೇನ್ ಜೋಶಿ, ಪಂಡಿತ್ ರವಿಶಂಕರ್ ಕೂಡ ತಲೆದೂಗಿದ್ದಾರೆ.

ಭಕ್ತಿ ಸಾಹಿತ್ಯ ಕ್ಷೇತ್ರದಲ್ಲೂ ಕೊಡುಗೆ ಸಲ್ಲಿಸಿದ ಪರ್ವತೀಕರ ಅವರ ಅನೇಕ ಕೃತಿಗಳು ಉತ್ತರ ಪ್ರದೇಶದ ಹಾತ್‌ರಸ ಪ್ರೆಸ್‌ನಲ್ಲಿ ಮುದ್ರಣಗೊಂಡಿವೆ. ಇವರು ರಚಿಸಿದ ಒಂದು ಕೃತಿಗೆ ಖ್ಯಾತ ಗಾಯಕಿ ಲತಾ ಮಂಗೇಶ್ಕರ್ ಧ್ವನಿ ನೀಡಿದ್ದಾರೆ.

ಪರ್ವತೀಕರ ಅವರ ವೀಣಾವಾದನ ಪರಂಪರೆ ಉತ್ತರಾಖಂಡ, ಉತ್ತರ ಪ್ರದೇಶದ ಹಲವೆಡೆ ಇಂದಿಗೂ ಮುಂದುವರಿದಿದೆ. ಇವರ ಹೆಸರಿನಲ್ಲಿ ಮಥುರಾ, ವೃಂದಾವನಗಳಲ್ಲಿ ಸಂಗೀತ ಶಾಲೆಗಳಿವೆ. ಅಮೆರಿಕದ ಹುನುಲುಲು ದ್ವೀಪದಿಂದ 1976ರಲ್ಲಿ ಭಾರತಕ್ಕೆ ಬಂದು ಪರ್ವತೀಕರ ಅವರಿಂದ ವೀಣೆ, ಧ್ಯಾನವನ್ನು ಕಲಿತ ಲೀಸಾ ಚೋಕ್ ಎಂಬ ಮಹಿಳೆ ಇಂದಿಗೂ ಅಮೆರಿಕದಲ್ಲಿ ಪರ್ವತೀಕರ ಅವರ ಸಂಗೀತ, ಧ್ಯಾನ, ಯೋಗ ಪರಂಪರೆಯನ್ನು ಮುಂದುವರಿಸಿದ್ದಾರೆ.

1975ರಲ್ಲಿ ಭಾರತಕ್ಕೆ ಬಂದಿದ್ದ ಜಪಾನಿನ ಕೋರೊ ಇಟೋ ಕೂಡ ಪರ್ವತೀಕರ ಅವರಿಂದ ವೀಣಾ ವಾದನ ಕಲಿತವರು. ಇವರು ಕೂಡ ಜಪಾನ್‌ನಲ್ಲಿ ಸಿತಾರ್ ಶಿಕ್ಷಣ ನೀಡುತ್ತಿದ್ದಾರೆ. ಪರ್ವತೀಕರ ಅವರ ಶಿಷ್ಯ, ಉತ್ತರಾಖಂಡದ ದಿನೇಶ್ ಡಿಯುಂಡಿ ಮೂವತ್ತಕ್ಕೂ ಹೆಚ್ಚು ವರ್ಷಗಳಿಂದ ಜಪಾನ್‌ನಲ್ಲಿ ಸಂಗೀತ ಶಿಕ್ಷಕರಾಗಿದ್ದಾರೆ.

ಭಕ್ತಿ ಸಂಗೀತ ಪ್ರಸಾರ ಮತ್ತು ಅಧ್ಯಾತ್ಮ ಶಿಕ್ಷಣ ನೀಡುವ ಉದ್ದೇಶದಿಂದ 1968ರಲ್ಲಿ ಪರ್ವತೀಕರ ದೆಹಲಿಯಲ್ಲಿ 'ಶ್ರೀ ರಾಘವೇಂದ್ರ ಸ್ವಾಮಿ ಮಿಷನ್' ಸಂಸ್ಥೆ ಆರಂಭಿಸಿದ್ದರು. ಈ ಸಂಸ್ಥೆ ಕಚೇರಿ ಪ್ರಸ್ತುತ ಬೆಂಗಳೂರಿನ ಇಂದಿರಾನಗರದ ರಾಘವೇಂದ್ರ ಸ್ವಾಮಿ ಮಠದಲ್ಲಿದೆ. ಇದೇ ಸಂಸ್ಥೆಯಿಂದ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ₹10 ಲಕ್ಷ ನೀಡಲಾಗಿದ್ದು, ಡಿ.ಆರ್.ಪರ್ವತೀಕರ ಅವರ ಹೆಸರಿನಲ್ಲಿ ದತ್ತಿನಿಧಿ ಸ್ಥಾಪಿಸಲಾಗಿದೆ.

ದತ್ತಾತ್ರೇಯ ಪರ್ವತೀಕರ ಅವರ ಸಂಗೀತ ಸಾಧನೆ ಮೇಲೆ ಅವರ ವಂಶಸ್ಥರೇ ಆದ ರಾಜೇಂದ್ರ ಪರ್ವತೀಕರ ಈಚೆಗೆ ಹೊರತಂದ 'ಬದರಿಧಾಮದ ತಪೋನಿಧಿ' ಕೃತಿ ಸಾಕಷ್ಟು ಬೆಳಕು ಚೆಲ್ಲಿದೆ. ಉತ್ತರ ಭಾರತದ ಚಳಿಯಲ್ಲಿ ಹೆಪ್ಪುಗಟ್ಟಿದ್ದ ನಾದಯೋಗಿಯ ಸ್ವರಸಾಧನೆಗೆ ಹಿಡಿದ ಕೈಗನ್ನಡಿಯಾಗಿದೆ. ಈ ಕೃತಿ ಇಂಗ್ಲಿಷಿಗೂ ಭಾಷಾಂತರವಾಗುತ್ತಿದೆ. ❖

ಮೊದಲ ಓದು

ಅಭಿವೃದ್ಧಿಯ ಬೀಜ ಮಂತ್ರ ಅವಕಾಶ

ಡಾ. ಆರ್. ಬಾಲಸುಬ್ರಹ್ಮಣ್ಯಂ ವೃತ್ತಿಯಿಂದ ವೈದ್ಯರು. ಸಾರ್ವಜನಿಕ ಆರೋಗ್ಯ ಮತ್ತು ಬುಡಕಟ್ಟು ಸಮುದಾಯದ ಕಾಳಜಿಯ ಕೆಲಸವನ್ನು ಮಾಡುತ್ತಿದ್ದಾರೆ. ಅಧ್ಯಾಪನ, ವ್ಯಕ್ತಿತ್ವ ವಿಕಸನ ತರಬೇತಿ, ಬರಹ, ಗಿರಿಜನರ ಬದುಕಿನ ಅಧ್ಯಯನ ಅವರ ಹವ್ಯಾಸ.

ಇಂಗ್ಲಿಷ್‌ನಲ್ಲಿ ಅವರು ಬರೆದ 'ಅಭಿವೃದ್ಧಿಯ ಕಥೆಗಳು' ಎಂಬ ಲೇಖನಗಳನ್ನು ಡಾ. ಬಸವರಾಜು ಆರ್. ಶ್ರೇಷ್ಠ ಕನ್ನಡಕ್ಕೆ ಅನುವಾದಿಸಿದ್ದಾರೆ. ಇದು 14 ಲೇಖನಗಳನ್ನು ಒಳಗೊಂಡ ಪುಟ್ಟ ಕೃತಿ. ಲೇಖಕರು ತಮ್ಮ ಅನುಭವಕ್ಕೆ ದಕ್ಕಿದ ಮಹತ್ವದ ಘಟನೆಗಳನ್ನು ಆಧರಿಸಿ ಲೇಖನಗಳನ್ನು ರೂಪಿಸಿದ್ದಾರೆ.

ವೈದ್ಯಕೀಯ ವಿದ್ಯಾರ್ಥಿ ಆಗಿದ್ದಾಗ ಒಬ್ಬ ರೋಗಿಯ ಸಾವಿನಿಂದ 'ಅಂತರಾಳದ ಉತ್ತೇಜನ' ಬರಹ ಹುಟ್ಟಿದೆ. ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರ ಚೀಟಿ ರೋಗಿಗೆ ತಲುಪಿದವೇ ವಿನಃ ಚಿಕಿತ್ಸೆ ತಲುಪಲಿಲ್ಲ. ಆ ಘಟನೆಯಿಂದ ವಿಚಲಿತರಾದ ಲೇಖಕರು ಅದಕ್ಕೆ ಉತ್ತರವನ್ನು ಸ್ವಾಮಿ ವಿವೇಕಾನಂದರ ಚಿಂತನೆಯಲ್ಲಿ ಹುಡುಕಲು ಆರಂಭಿಸುತ್ತಾರೆ. ಅಂಧ ಹುಡುಗಿಯೊಬ್ಬಳು ವಿಶ್ವಾಸದ ಮೂಲ ನಂಬಿಕೆ ಎಂಬ ಸತ್ಯವನ್ನು ಅನುಭವಕ್ಕೆ ತಂದ ಬಗೆಯನ್ನು 'ನಂಬಿ ಕೆಟ್ಟವರಿಲ್ಲವೋ ತಮ್ಮಯ್ಯ, ನಂಬದೇ ಅನ್ಯಮಾರ್ಗವಿಲ್ಲವೋ' ಬರಹದಲ್ಲಿ ನಿರೂಪಿಸಿದ್ದಾರೆ. ಟ್ಯಾಕ್ಸಿ ಚಾಲಕರ ಜೊತೆ ನಡೆಸಿದ ಸಂವಾದದಿಂದ 'ಒಂದು ಸಮತಟ್ಟಾದ ಅಖಾಡವನ್ನು ಸೇಷ್ಟಿಸಬೇಕಿದೆ...' ಮತ್ತು 'ಅಭಿವೃದ್ಧಿಯ ದಾರಿ ಯಾವುದು' ಎರಡು ಬರಹಗಳು ಅವತರಿಸಿವೆ. ಇವು ಬಡತನದಿಂದ ಹೊರಬರುವ ಅವಕಾಶವನ್ನು ವ್ಯವಸ್ಥೆ ಸೃಷ್ಟಿಸಬೇಕು ಎನ್ನುವ ಅಭಿಮತವನ್ನು ವ್ಯಕ್ತಪಡಿಸುತ್ತವೆ.

ಗಿರಿಜನರ ಪ್ರಕೃತಿ ಪ್ರೀತಿ, ವರ್ತಮಾನದ ನೆಲೆಯಲ್ಲಿ ಬದುಕಬೇಕು ಎನ್ನುವ ವಾಸ್ತವ ಪ್ರಜ್ಞೆ, ಜೇನಿನ ರಕ್ಷಣೆಯಲ್ಲಿ ಜೇನುಕುರುಬರು ವಹಿಸುವ ಕಾಳಜಿ ಮತ್ತು ಅವರ ಕೌಶಲಗಳನ್ನು ಸ್ಮರಿಸಿದ್ದಾರೆ. ಕೆಲವು ಸಂದರ್ಭದಲ್ಲಿ ಲೇಖಕರಿಗೆ ಉಂಟಾದ ಅಚ್ಚರಿಯ ಅನುಭವವನ್ನೂ ದಾಖಲಿಸಿದ್ದಾರೆ. ಕೋವಿಡ್ ಸಂದರ್ಭ ಮತ್ತು ಅದರ ನಂತರದ ಬದುಕಿನ ತಲ್ಲಣಗಳು ಇಲ್ಲಿ ಕಥೆಯಾಗಿ ಅರಳಿವೆ. ❖

ಪು: 78
₹190



ಅಭಿವೃದ್ಧಿಯ ಕಥೆಗಳು
ಸಮುದಾಯದ ಸಮುತ್ಥಾನ
ಇಂಗ್ಲಿಷ್ ಮೂಲ: ಡಾ. ಆರ್. ಬಾಲಸುಬ್ರಹ್ಮಣ್ಯಂ
ಕನ್ನಡಕ್ಕೆ: ಡಾ. ಬಸವರಾಜು ಆರ್. ಶ್ರೇಷ್ಠ
ಪ್ರ: ಗ್ರಾಸ್‌ರೂಟ್ಸ್ ರಿಸರ್ಚ್ ಅಂಡ್ ಅಡ್ವೊಕಸಿ ಮೂವ್‌ಮೆಂಟ್ (ಗ್ರಾಮ್), ಮೈಸೂರು
ಸಂ:graam@graam.org.in

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಕುರಿಗೊಲೆ

ಕುರಿಗೊಲೆ (ನಾ). (ಆಲಂ) ಅಸಹಾಯ ಸ್ಥಿತಿಯಲ್ಲಿರುವವರ ಕೊಲೆ; ಭೀಕರವಾದ ಕೊಲೆ; ಕಗ್ಗೊಲೆ.

ರಾಮರಾವಣರ ಯುದ್ಧದಲ್ಲಿ ರಾವಣನು ತಾಮತಾಸ್ತ್ರ ಪ್ರಯೋಗಿಸುವನು. ಅದು ವಾನರರ ಪ್ರಾಣಗಳನ್ನು ಹೀರಿ ದುರ್ಮರಣ ತರಲು, ವಾನರರು ಕೆಟ್ಟು ಓಡುವರು. ಆಂಜನೇಯ, ನಳ, ನೀಲರು ಅವರನ್ನು ತಡೆಯುತ್ತಿರಲು ಸುಗ್ರೀವನನ್ನುದ್ದೇಶಿಸಿ ರಾಮನು ಹೇಳುವ ನುಡಿಯಲ್ಲಿ ಕುವೆಂಪು ಅವರು 'ಕುರಿಗೊಲೆ' ಎಂಬ ಪದವನ್ನು ಆಲಂಕಾರಿಕವಾಗಿ ಹೀಗೆ ಪ್ರಯೋಗಿಸಿದ್ದಾರೆ.

'ಹನುಮ ಮೈಂದಾದಿ
ಕಲಿಗಳಿಂದೀ ಮಹಾ ದೈತ್ಯ ರಣರುದ್ರನಂ
ಕೆಣಕಿ ಬಾಳ್ವೆರಸಿ ಪಿಂತಿರುಗಲರಿಯರ್ ಕಣಾ!
ಮತ್ತೇತಕಿತರರಂ ನೂಂಕುತಿರ್ಪರು ಬರಿದೆ
ಕುರಿಗೊಲೆಗೆ?' (4.8 . 191-94)

ಬಾನಲೆವರು

ಬಾನಲೆವರು (ನಾ). ಆಕಾಶದಲ್ಲಿ ಸಂಚರಿಸುವವರು; ದೇವತೆಗಳು

ಕುವೆಂಪು ಅವರು ಆಕಾಶದಲ್ಲಿ ಸಂಚರಿಸುವ ದೇವತೆಗಳನ್ನು ತಮ್ಮ 'ಉದಯರವಿ' ಮನೆಯ ತೋಟಕ್ಕೆ ಬರಲು ಹೀಗೆ ಆಹ್ವಾನಿಸಿದ್ದಾರೆ:

'ಬನ್ನಿ, ಓ ಬಾನಲೆವರೆ, ನಮ್ಮ ತೋಟಕೆ,
ನಂದನವನೆ ಮೀರಿಸುವೀ ದಿವ್ಯ ನೋಟಕೆ.'
(ಸೌಂದರ್ಯಯಾಜಿ : ಅನಿಕೇತನ)

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಕಾಲ್ಕಿತ್ತ ಪಿಗ್ಗಿ ಬ್ಯಾಂಕ್!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಗುಂಡ ಪಿಗ್ಗಿ ಬ್ಯಾಂಕ್‌ನಲ್ಲಿ ಹಣ ಕೂಡಿಡುವ ಅಭ್ಯಾಸ ಇಟ್ಟುಕೊಂಡಿದ್ದ. ಪ್ರತಿದಿನ ತನಗೆ ಸಿಕ್ಕ ಚಿಲ್ಲರೆ ಕಾಸನ್ನು ಕೂಡಿಡುತ್ತಾ ಇದ್ದ. ದಿನ ಉರುಳಿದಂತೆ ಪಿಗ್ಗಿ ಬ್ಯಾಂಕ್ ಭರ್ತಿಯಾಗುತ್ತಾ ಬಂತು. ಒಂದು ದಿನ ಗುಂಡ ಚಿಲ್ಲರೆಯನ್ನು ಹಾಕುತ್ತಿರುವಾಗಲೇ ಪಿಗ್ಗಿ ಬ್ಯಾಂಕ್‌ಗೆ ಜೀವ ಬಂದು, ಅದು ಅಲ್ಲಿಂದ ಕಾಲ್ಕಿತ್ತಿತು. ಗುಂಡ ಇದನ್ನು ಕಂಡು ಅವಾಕ್ಕಾದ.

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಮಗು	+	ಲಾರಿ	+	ಗಿ	=	
2	ಮನೆ	+	ಕರು	+	ಲ್ವ	=	
3	ನಲಿ	+	ಕಸ	+	ಹಿ	=	
4	ಮರ	+	ಕಡಿ	+	ದ	=	
5	ಹುಳಿ	+	ಸುರಿ	+	ಗೊ	=	

ಹಣ್ಣಿನ ಹಾಡು

ಹಣ್ಣು ಬೇಕೇನ್ರಿ ಹಣ್ಣು
ತಂದು ಕೊಡತಿನಿ ತಿನ್ನು
||ಹಣ್ಣು ಬೇಕೇನ್ರಿ||
ಮಾವ ತಿನ್ನೂದು ಮಾವಿನ ಹಣ್ಣು
ಅತ್ತಿ ತಿನ್ನೂದು ಅತ್ತಿ ಹಣ್ಣು
ಕಾಕಾ ತಿನ್ನೋದು ಕಾಕಿ ಹಣ್ಣು
ಚಿಕ್ಕವ್ವ ತಿನ್ನೂದು ಚಿಕ್ಕು ಹಣ್ಣು
||ಹಣ್ಣು ಬೇಕೇನ್ರಿ||
ಪಾರವ್ವ ತಿನ್ನೂದು ಪ್ಯಾರಲಹಣ್ಣು
ನೀಲವ್ವ ತಿನ್ನೂದು ನೀರಲಹಣ್ಣು
ಪಾಪಣ್ಣ ತಿನ್ನೂದು ಪಪ್ಪಾಯಿಹಣ್ಣು
ಬಾಳಣ್ಣ ತಿನ್ನೂದು ಬಾಳೆ ಹಣ್ಣು
||ಹಣ್ಣು ಬೇಕೇನ್ರಿ||
ಅಂಜು ತಿನ್ನೂದು ಅಂಜೂರ ಹಣ್ಣು
ಮಂಜವ್ವ ತಿನ್ನೂದು ಮೋಸಂಬಿಹಣ್ಣು
ಅಜ್ಜಯ್ಯ ತಿನ್ನೂದು ಖಜ್ಜೂರ ಹಣ್ಣು
ಶೇಖಪ್ಪ ತಿನ್ನೂದು ಸೇಬು ಹಣ್ಣು
||ಹಣ್ಣು ಬೇಕೇನ್ರಿ||
ಕಲ್ಲಪ್ಪ ತಿನ್ನೂದು ಕಲ್ಲಂಗಡಿಹಣ್ಣು
ಬೋರಪ್ಪ ತಿನ್ನೂದು ಬೋರೆಹಣ್ಣು
ಗೂಳವ್ವ ತಿನ್ನೂದು ದಾಳಿಂಬೆಹಣ್ಣು
ಕಾಳವ್ವ ತಿನ್ನೂದು ಕವಳಿ ಹಣ್ಣು
||ಹಣ್ಣು ಬೇಕೇನ್ರಿ||
ದಾಕ್ಷಾಯಿಣಿ ತಿನ್ನೂದು ದ್ರಾಕ್ಷಿಹಣ್ಣು
ಸೀತವ್ವ ತಿನ್ನೂದು ಸೀತಾಫಲಹಣ್ಣು
ಪರಪ್ಪ ತಿನ್ನೂದು ಪೈನಾಪಲ್ಲು
ಕರಿಯಪ್ಪ ತಿನ್ನೂದ ಕಿತ್ತಲಿ ಹಣ್ಣು
||ಹಣ್ಣು ಬೇಕೇನ್ರಿ||

ಮೋಜಿನ ENGLISH

A to Z ಬರುವ ವಾಕ್ಯ

1. The quick brown fox jumps over the lazy dog

ಒತ್ತಕ್ಷರ ಆಟ

ಳ	ಕೆ	ಅ	ರ	ಹೆ
ಳ	ಹ	ಬೆ	ಹ	ರಿ
ನೆ	ಎ	ಗೆ	ಲು	ಲು
ಮು	ಚೊ	ಬ	ಡ	ಲ

ಇಲ್ಲಿ ಕೊಟ್ಟಿರುವ 'ಚ್ಚ' ಒತ್ತಕ್ಷರಕ್ಕೆ ಅಕ್ಷರ ಪಟ್ಟಿಯಿಂದ ಎರಡು ಅಕ್ಷರ ಆಯ್ಕೆ ಮಾಡಿಕೊಂಡು ಹಿಂದೊಂದು ಮುಂದೊಂದು ಅಕ್ಷರ ತುಂಬಿ ಅರ್ಥಬದ್ಧ ಪದ ಮಾಡಿ.

1		ಚ್ಚ	
2		ಚ್ಚ	
3		ಚ್ಚ	
4		ಚ್ಚ	
5		ಚ್ಚ	
6		ಚ್ಚ	
7		ಚ್ಚ	
8		ಚ್ಚ	
9		ಚ್ಚ	
10		ಚ್ಚ	

ನಾಲಿಗೆ ತೊಡರು

Kittu bought some butter, but the butter was bitter, now kittu bought some better butter to make bitter butter better.

ಪದಶೋಧ

ಇಲ್ಲಿ ಕೊಟ್ಟಿರುವ ಪದಗಳಲ್ಲಿ ಓರ್ವ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿಯ ಹೆಸರು ಹುಡುಕಿ

1.ಪಂಜರದ ಗಿಳಿ
2.ಸದೃಢ ಶರೀರ
3.ಬಲವಾದ ಶಕ್ತಿ
4.ಸಾಮಾಜಿಕ ಕಾರ್ಯ
5.ನಮ್ಮ ಕರ್ನಾಟಕ
6.ತಾಯಿಯ ಒಡಲು

ಉತ್ತರ: ....

ಕಳೆದ ಸಂಚಿಕೆಯ ಸರಿ ಉತ್ತರಗಳು

1 ಪದಸಂಕಲನ: 1.ತೆರಿಗೆಕಟ್ಟು 2.ಗುರಿಸಾಧಿಸು 3.ಶಿವಮಂದಿರ 4.ಹಯವದನ 5.ಕರಿಆಕಳು
1 ಪುಟಾಣಿ ಪದಬಂಧ 1.ಸಮಾಚಾರ 2.ಯಜಮಾನ 3.ಮಮಕಾರ 4.ಸಮಾಗಮ 5.ಅಪವಾದ 6.ಸಮಾನತೆ 7.ನಮಸ್ಕಾರ 8.ಮಹಾದ್ವಾರ 9.ಸುಹಾಸಿನಿ 10.ಉದಾಸೀನ
ಮೋಜಿನ ಇಂಗ್ಲಿಷ್: 1.MARCH 2.MONDAY 3.MORE 4.DICTIONARY 5.MELON 6.ADMIERER 7.DEALER

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಪ್ರಯಾಗ್ ಬಿ.
ಕೋಲಾರ

ಅನನ್ಯ
ತುಮಕೂರು

ಅಭಿಮನ್ಯು
ಬೆಂಗಳೂರು

ಚಾರ್ವಿಕ್ ಆರ್.ಎಂ.
ಮೈಸೂರು

ರಿತ್ವಿಕ್ ಎಸ್. ಯು.
ತುಮಕೂರು

ಚಿರಂತಗೌಡ ಎಚ್.
ಬೆಂಗಳೂರು

ಸುಂದರ ಕಲಾ ಮ್ಯೂಸಿಯಂ ಸತ್ಯದ ಅಭಯಾರಣ್ಯ

ಶೇಖರ್ ಗೌಳೇರ್

ಥಾಯ್ಲೆಂಡ್, ಪಟ್ಟಾಯ ಪ್ರವಾಸ ಮುಗಿಸಿ ಭಾರತಕ್ಕೆ ಹಿಂದಿರುಗುವ ದಿನವದು. ನಮ್ಮ ವಿಮಾನ ಬ್ಯಾಂಕಾಕ್‌ನಿಂದ ಮಧ್ಯಾಹ್ನ ಹೊರಡುವುದಿತ್ತು. ಅರ್ಧದಿನ ಹೇಗೆ ಕಳೆಯಬೇಕು ಎಂದು ಯೋಚಿಸುತ್ತಿದ್ದಾಗ ಹತ್ತಿರದಲ್ಲೇ ವಿಶಿಷ್ಟವಾದ 'ದಿ ಸ್ಯಾಂಕ್ಚುರಿ ಆಫ್ ಟ್ರೂತ್' ಮ್ಯೂಸಿಯಂ ಇರುವುದು ಗೊತ್ತಾಯಿತು. ಅದು ನಾವು ತಂಗಿದ್ದ ಹೋಟೆಲ್‌ನಿಂದ ತುಂಬಾ ಸನಿಹದಲ್ಲೇ ಇತ್ತು. ಅಲ್ಲಿಗೆ ಹೋಗಲು ನಿರ್ಧರಿಸಿದೆವು.

ಅದೋ ನೆಲ ನೀರು ನೀಲಾಗಸಗಳ ಸಂಗಮ. ಅಲ್ಲಿ ಎಚ್‌ಎಂಎಸ್ ಬೀಗಲ್‌ನಂಥ ಬೃಹತ್ ಹಡಗೊಂದು ಲಂಗರು ಹಾಕಿ ನಿಂತಂತೆ ಭಾಸವಾಗುತಿತ್ತು. ಹಿಂದೆ ಕಡಲು ಹರಡಿಕೊಂಡಿದೆ. ಹತ್ತಿರ ಹೋಗಿ ನೋಡಿದರೆ ಅದು ಹಡಗಲ್ಲ, ರಾಜ ಮಹಾರಾಜರ ಅರಮನೆ ಮೀರಿಸುವಂಥ ವೈಭವದ ಕಟ್ಟಡ! ಹೌದು ಸಂಪೂರ್ಣ ಮರದ ದಿಮ್ಮಿಗಳಿಂದ ಕೆತ್ತನೆಯ ಕುಸುರಿ ಕೆಲಸದಿಂದ ಅರಳುತ್ತಿರುವ ಶ್ರೇಷ್ಠ ಸುಂದರ ಕಲಾ ಮ್ಯೂಸಿಯಂ.

ಅಲ್ಲಿ ಮರದ ಮೆಟ್ಟಿಲುಗಳಿದ್ದವು. ಹೆಲ್ಮೆಟ್ ಧರಿಸಿ ಹೆಜ್ಜೆ ಇರಿಸಿದೆವು. ಪಕ್ಷಿಗಳ ಕಲರವ, ಹಸುರಿನ ಉದ್ಯಾನ, ತಿಳಿನೀರ ಸರೋವರ ಮುದ ನೀಡುತ್ತಿದ್ದವು. ಸಮುದ್ರತೀರದಲ್ಲಿ ಅದ್ಭುತವಾದ ಕಲಾ ಮ್ಯೂಸಿಯಂ ಅತ್ಯಾಕರ್ಷಕವಾಗಿ ಕಾಣಿಸುತ್ತಿತ್ತು. ಅಲ್ಲಿ ಪರಿಣತ ಕಲಾಕಾರರು ಉಳಿ, ಚಾಣ, ಬಾಚಿ ಹಿಡಿದು ಕೆತ್ತನೆಯಲ್ಲಿ ತೊಡಗಿದ್ದರು. ಥಾಯ್ಲೆಂಡ್, ಕಾಂಬೋಡಿಯಾ ಹಾಗೂ ಮಯನ್ಮಾರ್ ದೇಶಗಳ ಬಡಗಿಗಳು ದಶಕಗಳಿಂದ ಅಲ್ಲಿ ಕೆಲಸ ಮಾಡುತ್ತಿದ್ದರು. 'ದಿ ಸ್ಯಾಂಕ್ಚುರಿ ಆಫ್ ಟ್ರೂತ್' ಎಂದರೆ 'ಸತ್ಯದ ಅಭಯಾರಣ್ಯ'. ಮರದ ಕಲಾ ಮ್ಯೂಸಿಯಂ ಜಗತ್ತಿನಲ್ಲಿಯೇ ಅತಿ ಭವ್ಯ ಹಾಗೂ ಅಪರೂಪದ್ದು. ಬೌದ್ಧ, ಜೈನ, ಕ್ರೈಸ್ತ ಹಾಗೂ ಹಿಂದೂ ಧರ್ಮದ ನೂರಾರು ದೇವಾನು ದೇವತೆಗಳು ಅಲ್ಲಿ ಜೀವ ಪಡೆದಿದ್ದಾರೆ. ಇದು ದೇವಸ್ಥಾನ-ಕಳಸ-ಗೋಪುರಾಕೃತಿಗಳ ಸಮ್ಮಿಶ್ರಣ.



ದಿ ಸ್ಯಾಂಕ್ಚುರಿ ಆಫ್ ಟ್ರೂತ್‌ನ ಹೊರನೋಟ

ಈ ಕಲಾ ಮ್ಯೂಸಿಯಂನಲ್ಲಿ ಹುಟ್ಟು, ಸಾವು, ಕುಟುಂಬ ಪ್ರೀತಿ, ದೈವ, ನಾಗರಿಕತೆ, ಸರಳ ಜೀವನ ಹಾಗೂ ಮೋಕ್ಷವೆಂಬ ಏಳು ಸತ್ಯಗಳು ಕೆತ್ತನೆಯ ರೂಪ ಪಡೆದು ಅನಾವರಣಗೊಂಡಿದೆ. ಧಾರ್ಮಿಕ, ಆಧ್ಯಾತ್ಮಿಕ ಹಾಗೂ ವಾಸ್ತವ ಕಲಾಕೃತಿಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ಎಲ್ಲವೂ ಅರಿವಿಗೆ ಬರುತ್ತವೆ.

ಚೀನಾ ವ್ಯಾಪಾರಿಯ ಕನಸು

ಜಗತ್ತಿನಲ್ಲಿಯೇ ಅತೀ ಎತ್ತರದ ಮರದ ಕಲಾ ಮ್ಯೂಸಿಯಂ ಇದು. 105 ಮೀಟರ್ ಎತ್ತರ, 100 ಮೀಟರ್ ಅಗಲ ಹಾಗೂ 2,115 ಚದರ ಮೀಟರ್ ವಿಸ್ತೀರ್ಣ (ಒಳಾಂಗಣ)ದ ಈ ಕಟ್ಟಡ ಚತುರ್ಭುಜ ವಿನ್ಯಾಸದಲ್ಲಿ ರೂಪುಗೊಂಡಿದೆ. ಅಚ್ಚರಿಗೊಳಿಸುವ ಈ ಮ್ಯೂಸಿಯಂಗೆ ರೋಚಕ ಕಥೆ ಇದೆ. ಲೆಕ್ ವಿರಿಯಾಫನ್ ಎಂಬ ಚೀನಾದ ವ್ಯಾಪಾರಿ ಬಹು ಹಿಂದೆಯೇ ಥಾಯ್ಲೆಂಡ್‌ಗೆ ಬಂದು ಉದ್ಯಮ ಆರಂಭಿಸಿ ದೊಡ್ಡ ಶ್ರೀಮಂತನಾದ. ಥಾಯ್ಲೆಂಡ್ ಸಮುದ್ರತೀರದುದ್ದಕ್ಕೂ ಅವನದೇ ಅಂಗಡಿ, ಮುಂಗಟ್ಟು, ಹೋಟೆಲ್‌ಗಳ ಸರಣಿ ಸ್ಥಾಪನೆಯಾದವು. ಸಮುದ್ರತೀರದಲ್ಲಿ ಸರ್ವಧರ್ಮಗಳ ಸಿದ್ಧಾಂತಗಳನ್ನು ಮರದ ಕೆತ್ತನೆಯ ಮೂಲಕ ಅನಾವರಣಗೊಳಿಸಬೇಕು ಎಂದು ಕನಸು ಕಂಡ. ಅದಕ್ಕಾಗಿ ಸುಮಾರು ಹದಿಮೂರು ಹೆಕ್ಟೇರ್ ಜಾಗವನ್ನು ಖರೀದಿಸಿ ಮೀಸಲಿರಿಸಿದ. 1981ರಲ್ಲಿ ಕೆತ್ತನೆ ಕೆಲಸ ಶುರುವಾಯಿತು. ಇದಕ್ಕಾಗಿ ವಿದೇಶಗಳಿಂದ ನೂರಾರು ನುರಿತ ಕುಸುರಿ ಕೆತ್ತನೆಯ ಬಡಗಿಗಳು ಬಂದಿಳಿದರು. ಕೆತ್ತನೆಗಾಗಿ ಸಾಗುವಾನಿ, ಮೊಹೋಗನಿ, ಮೈಡಿಂಗ್, ಮೈಪಂಚೆಟ್‌ನಂಥ ಮರದ ದಿಮ್ಮಿಗಳು ಸಂಗ್ರಹವಾದವು. ತುಂಬಾ ಹಳೆಯದಾದ ಮೈಟಾಕಿನ್ ಮರವನ್ನು ವಿಶೇಷ ಕೆತ್ತನೆಗೆ ತರಿಸಲಾಯಿತು.

ಮರದ ಮ್ಯೂಸಿಯಂ ಕೆಲಸ ಆರಂಭವಾಗಿ 44 ವರ್ಷಗಳು ಉರುಳಿವೆ. ಆದರೂ ಪೂರ್ಣವಾಗಿಲ್ಲ. 2025ರ ಅಂತ್ಯಕ್ಕೆ ಮ್ಯೂಸಿಯಂ ಪೂರ್ಣಗೊಳ್ಳಬಹುದು ಎನ್ನಲಾಗುತ್ತಿದೆ. ಮ್ಯೂಸಿಯಂನ ಹೃದಯ ಭಾಗದಿಂದ ಮೇಲಕ್ಕೆ ಒಂದು ಕಂಬದಂಥ ಗೋಪುರ ಚಾಚಿಕೊಂಡಿದೆ. ಅದರ ತುದಿಯಲ್ಲಿ ಬ್ರಹ್ಮನ ಚತುರ್ಮುಖ ಪ್ರತಿಮೆ ಕಾಣಿಸುತ್ತದೆ. ಈ ಚತುರ್ಮುಖ ತಂದೆ, ತಾಯಿ, ಗುರು ಹಾಗೂ ಆಳುವ ದೊರೆಯ ಸಂಕೇತ ರೂಪಗಳಾಗಿವೆ. ದಯೆ, ಸಮಚಿತ್ತ, ಪರೋಪಕಾರ, ಸಂತೃಪ್ತಿ ಇವು ಚತುರ್ಮುಖದ ಇತರ ಭಾವಗಳು. ಬ್ರಹ್ಮನ ಮೂರ್ತಿಯ ಸುತ್ತಲಿನ ಮೇಲ್ಛಾವಣಿಯ ನಾಲ್ಕೂ ದಿಕ್ಕುಗಳಲ್ಲಿ ನಾಲ್ಕು ವಿಶೇಷತೆಗಳಿವೆ. ಭವಿಷ್ಯದ ಬದುಕು ಆರೋಗ್ಯಪೂರ್ಣವಾಗಿರಲು ಭೂತಕಾಲದ ನೀತಿ, ನಿಯಮ, ಸಿದ್ಧಾಂತಗಳ ಪಾಲನೆ ಆಗಬೇಕು ಎನ್ನುವುದನ್ನು ಪೂರ್ವ ದಿಕ್ಕಿನ ಚಿತ್ರಗಳು ತೋರಿಸುತ್ತವೆ. ಪಶ್ಚಿಮದಲ್ಲಿ ಬಾಲಕಿಯೊಬ್ಬಳು ಪಾರಿವಾಳಗಳಿಗೆ ಕಾಳು ತಿನ್ನಿಸುವ ಚಿತ್ರವಿದೆ. ಜಗತ್ತಿನ ಹಸಿವು ತಣಿಸುವ ಹಾಗೂ ಭೂಮಿಯನ್ನು ಫಲವತ್ತುಗೊಳಿಸುವ ಸಂಕೇತವದು. ಕಮಲದ ಹೂವಿನ ಮೇಲೆ ಧ್ಯಾನಾಸಕ್ತರಾಗಿ ಕುಳಿತು ಆಧ್ಯಾತ್ಮಿಕ ಚಿಂತನೆ ಭೋದಿಸುವ ದೇವತೆಯ ಚಿತ್ರ ಉತ್ತರ ದಿಕ್ಕಿನಲ್ಲಿದ್ದರೆ, ದಕ್ಷಿಣದಲ್ಲಿ ತಂದೆ, ತಾಯಿ, ಮಕ್ಕಳ ಕುಟುಂಬದ ಚಿತ್ರಗಳಿವೆ. ಇವೆಲ್ಲಾ ಅರ್ಥಪೂರ್ಣ ಬದುಕಿಗೆ ಮುಖ್ಯ. ಮೇಲ್ಛಾವಣಿಯ ನಾಲ್ಕೂ ದಿಕ್ಕಿನ ಮಧ್ಯ ಕುದುರೆ ಸವಾರನೊಬ್ಬ ಕಡಿವಾಣ ಹಿಡಿದು ಎಲ್ಲವನ್ನೂ ನಿಯಂತ್ರಣ ಮಾಡುವ ಚಿತ್ರ ವಿಶೇಷ ಪರಿಕಲ್ಪನೆ.

> ಸರ್ವಧರ್ಮಗಳ ಸಂದೇಶಗಳನ್ನು ಸಾರುವ ಜಗತ್ತಿನ ಅತೀ ಎತ್ತರವಾದ ಕಲಾ ದೇಗುಲ ಥಾಯ್ಲೆಂಡ್‌ನಲ್ಲಿ ನಿರ್ಮಾಣವಾಗುತ್ತಿದೆ. ಇದನ್ನು ಸಂಪೂರ್ಣವಾಗಿ ಮರದಿಂದ ನಿರ್ಮಿಸಲಾಗುತ್ತಿದೆ. 44 ವರ್ಷಗಳಿಂದ ಇದರ ಕೆತ್ತನೆಯ ಕೆಲಸ ನಡೆಯುತ್ತಿದ್ದು, ಇದೇ ವರ್ಷ ಪೂರ್ಣಗೊಳ್ಳಲಿದೆ ಎನ್ನಲಾಗುತ್ತಿದೆ. ಇದು ಚೀನಾದ ವ್ಯಾಪಾರಿ ಲೆಕ್ ವಿರಿಯಾಫನ್ ಅವರ ಕನಸು.

ದಿ ಸ್ಯಾಂಕ್ಚುರಿ ಆಫ್ ಟ್ರೂತ್ ಹೊರಭಾಗದಲ್ಲಿರುವ ಕೆತ್ತನೆ

ನೆಲಮಹಡಿಯ ಒಳಾಂಗಣ ವೈವಿಧ್ಯಮಯ ಕೆತ್ತನೆಗಳಿಂದ ಕೂಡಿದೆ. ಮರದ ಕುಸುರಿ ಕೆತ್ತನೆಗಳು ಒಂದನ್ನೊಂದು ಮೀರಿಸುತ್ತವೆ. ಇಲ್ಲಿಯೂ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಹಜಾರಗಳಿದ್ದು, ವೈವಿಧ್ಯಮಯ ಕೆತ್ತನೆಗಳಿಂದ ತುಂಬಿಹೋಗಿವೆ. ಉತ್ತರ ದಿಕ್ಕಿನ ಹಜಾರದಲ್ಲಿ ಬೌದ್ಧ ಧರ್ಮದ ತತ್ವ ಸಿದ್ಧಾಂತಗಳಿಗೆ ಸಂಬಂಧಿಸಿದ ಚಿತ್ರಗಳಿವೆ. ಒಳ್ಳೆಯದನ್ನು ಮಾಡಿದರೆ ಒಳ್ಳೆಯದಾಗುತ್ತದೆ. ಕೆಟ್ಟದನ್ನು ಮಾಡಿದರೆ ಕೆಟ್ಟದ್ದಾಗುತ್ತದೆ ಎನ್ನುವ ಸಿದ್ಧಾಂತವನ್ನು ಇಲ್ಲಿಯ ಕೆತ್ತನೆ ಸಂದೇಶ ನೀಡುತ್ತದೆ. ದಕ್ಷಿಣ ದಿಕ್ಕಿನ ಹಜಾರದಲ್ಲಿ ಸೌರಮಂಡಲದ ಸೂರ್ಯ, ಚಂದ್ರ, ಗ್ರಹ, ಉಪಗ್ರಹ, ನಕ್ಷತ್ರಾದಿಗಳಿದ್ದು ಅವು ಬದುಕಿನ ಹುಟ್ಟು, ಸಾವು, ಯಶಸ್ಸನ್ನು ನಿರ್ಧರಿಸುತ್ತವೆ. ಪಶ್ಚಿಮ ಹಜಾರದಲ್ಲಿ ಪಂಚಭೂತಗಳಾದ ನೀರು, ಗಾಳಿ, ನೆಲ, ಬೆಂಕಿ, ಆಕಾಶಗಳ ಕೆತ್ತನೆಗಳಿದ್ದು, ಅವು ಬದುಕಿನ ಮೂಲಭೂತ ಅವಶ್ಯಕತೆಯನ್ನು ಸಾರುತ್ತವೆ. ಪೂರ್ವ ಹಜಾರದಲ್ಲಿಯ ಚಿತ್ರಗಳು ತಂದೆ, ತಾಯಿ, ಮಕ್ಕಳ ಕೌಟುಂಬಿಕ ಪ್ರೀತಿ, ಬಂಧನಗಳನ್ನು ಪ್ರತಿನಿಧಿಸುತ್ತವೆ. ಜೊತೆಗೆ ಕೈಲಾಸ ಶಿಖರದಲ್ಲಿ ಕುಳಿತ ಶಿವ, ಹಂಸದ ಮೇಲೆ ಕುಳಿತ ಬ್ರಹ್ಮ, ಕಡಲ ಮಧ್ಯ ಏಳು ಹೆಡೆ ಸರ್ಪದ ನೆರಳಿನಲ್ಲಿ ಪವಡಿಸಿದ ವಿಷ್ಣುವಿನ ಕೆತ್ತನೆ ಆಕರ್ಷಣೀಯವಾಗಿವೆ. ಇಲ್ಲಿ ಹಾಲಿವುಡ್ ಸಿನಿಮಾಗಳಲ್ಲಿನ ಫ್ಯಾಂಟಸಿಯಂಥ ನೂರಾರು ದೇವಾನುದೇವತೆಗಳ ದೃಶ್ಯಾವಳಿಗಳು ಮನಸೂರೆಗೊಳ್ಳುತ್ತವೆ.

ಖಾಸಗಿ ಒಡೆತನದ 'ದಿ ಸ್ಯಾಂಕ್ಚುರಿ ಆಫ್ ಟ್ರೂತ್' ಆರಂಭಿಸುವ ಮೊದಲೇ ವಿರಿಯಾಫನ್ 'ದಿ ಏನ್ಷಿಯಂಟ್ ಸಿಟಿ ಆಫ್ ಮ್ಯೂಸಿಯಂ' ಸ್ಥಾಪಿಸಿ ಅನುಭವ ಪಡೆದಿದ್ದರು. ಪಾಶ್ಚಾತ್ಯ ಜಗತ್ತಿನ ವಿಜ್ಞಾನ, ತಂತ್ರಜ್ಞಾನ ಬದುಕಿಗೆ ಐಷಾರಾಮಿ ಸೌಲಭ್ಯ ಒದಗಿಸಿದರೂ ಅವುಗಳಿಗೆ ಯಾವುದೇ ಧಾರ್ಮಿಕ ಕಟ್ಟಳೆಗಳಿಲ್ಲ. ಅವು ಯಾವ ಪ್ರಾಚೀನತೆಯನ್ನೂ ಜಗತ್ತಿಗೆ ಸಾರುವುದಿಲ್ಲ. ಹಾಗಾಗಿ ವಿರಿಯಾಫನ್ ಏಷ್ಯಾ ಖಂಡದ ಧರ್ಮ, ಅಧ್ಯಾತ್ಮ, ಪುರಾಣ, ಸಂಪ್ರದಾಯ, ಸಂಸ್ಕೃತಿಗಳನ್ನು ಮೂಲ ನೆಲೆಯಾಗಿಟ್ಟುಕೊಂಡು 'ದಿ ಸ್ಯಾಂಕ್ಚುರಿ ಆಫ್ ಟ್ರೂತ್' ಅನ್ನು ಸ್ಥಾಪಿಸಿದರು. ಒಳಾಂಗಣದ ಎಡ-ಬಲ, ಮೇಲೆ-ಕೆಳಗೆ ಎಲ್ಲಾ ಕಡೆ ಪ್ರತಿ ಸೆಂಟಿಮೀಟರ್ ಜಾಗವೂ ಕಲಾ ಪ್ರೌಢಿಮೆಯಿಂದ ತುಂಬಿಹೋಗಿದೆ. ಪೌರ್ವಾತ್ಯ ಜಗತ್ತಿನ ಬದುಕಿನ ಮೌಲ್ಯಗಳು, ತತ್ವ ಸಿದ್ಧಾಂತಗಳು ಪೀಳಿಗೆಯಿಂದ ಪೀಳಿಗೆಗೆ ಹಸ್ತಾಂತರವಾಗಬೇಕು. ಈ ನಿಟ್ಟಿನಲ್ಲಿ ಲೆಕ್ ವಿರಿಯಾಫನ್ ಎಲ್ಲಾ ಹಳೆಯ ಧಾರ್ಮಿಕ-ದೈವಿಕ ಶಕ್ತಿಗಳನ್ನು, ಮೌಲ್ಯಗಳನ್ನು ಕಲಾತ್ಮಕವಾಗಿ ಮರದ ಕೆತ್ತನೆಯಲ್ಲಿ ಅರಳಿಸಿದ್ದು ಮೆಚ್ಚುವಂಥ ಕೆಲಸ. ನಾವು ನೋಡಿದ ಅವಿಸ್ಮರಣೀಯ ಮರದ ಪ್ರತಿಮಾ ಸಂಗ್ರಹಾಲಯ ಎಂದೆಂದಿಗೂ ನೆನಪಿಲ್ಲಿ ಉಳಿಯುವಂಥದ್ದು.

ADVERTORIAL

ನಮಸ್ತೆ ಲಂಡನ್!

ಸುನೀಲ ಪಾಟೀಲ್
Founder, CPO & CNO
Veena World
sunila@veenaworld.com

ನೀವು ಬೇರಾವುದೋ ಸ್ಥಳಕ್ಕೆ ಮೊದಲ ಸಲ ಭೇಟಿ ನೀಡಿದ್ದರ ನಡುವೆಯೂ ಅದು ನಿಮ್ಮ ಸ್ಥಳದಂತೆಯೇ ಭಾಸವಾದ ಅನುಭವ ನಿಮಗಾಗಿದೆಯೇ? ಪ್ರತಿಯೊಂದೂ ಹೊಸತು ಎನ್ನಿಸಿದರೂ ಏನೋ ಒಂದು ಬಗೆಯ ಸಮಾಧಾನಕರ ಅನುಭವವಾಗಿದೆಯೆ? ಈ ಬಗೆಯ ಹೊಸತನ ಹಾಗೂ ಅಸ್ಪಷ್ಟ ಪರಿಚಿತತೆಯು ಆ ಸ್ಥಳದ ಅನ್ವೇಷಣೆಯ ಖುಷಿಯನ್ನು ಇನ್ನಷ್ಟು ಅಧಿಕಗೊಳಿಸುತ್ತದೆ. ನೀವು ಅಷ್ಟೂ ವರ್ಷಗಳ ಕನಸು ಕಾಣುತ್ತಿದ್ದುದು ಅದೇ ಸ್ಥಳಕ್ಕೇನೋ ಎಂಬ ಭಾವನೆ ಮೂಡುತ್ತದೆ. ನನಗೆ ಲಂಡನ್ ವಿಷಯದಲ್ಲಿ ಇಂತಹ ಅನುಭವವಾಯಿತು.

ನಾನು ಮೊದಲಿಗೆ ಲಂಡನ್‌ಗೆ 1999ರಲ್ಲಿ ವ್ಯಾಸಂಗಕ್ಕೆಂದು ಹೋದೆ. ಆ ಅನುಭವವು ಈಗ ಸಂಪೂರ್ಣ ವಿಭಿನ್ನ ಬದುಕಿನ ಕಾಲಘಟ್ಟಕ್ಕೆ ಸಂಬಂಧಿಸಿದ್ದೇನೋ ಎನ್ನಿಸುತ್ತದೆ. ಆಗ ಭಾರತದ ಪರಿಸ್ಥಿತಿ ತುಂಬಾ ಬೇರೆಯದೇ ರೀತಿಯಲ್ಲಿತ್ತು. ತಂತ್ರಜ್ಞಾನ ಹಾಗೂ ದೂರಸಂಪರ್ಕ ಸೇವೆಗಳು ಅಷ್ಟೊಂದು ಅಭಿವೃದ್ಧಿ ಆಗಿರಲಿಲ್ಲ. ವಿದೇಶ ಪ್ರಯಾಣವೆಂದರೆ ಜಾಗ್ರತೆಯಿಂದ ಸಾಕಷ್ಟು ಪೂರ್ವತಯಾರಿ ಮಾಡಿಕೊಳ್ಳಬೇಕಾಗುತ್ತಿತ್ತು. ಅದಲ್ಲದೆ, ನಾನು ಒಂದು ವರ್ಷ ಪೂರ್ತಿ ಅವಧಿಗೆ ದೂರ ದೇಶದಲ್ಲಿರಲು ಹೊರಟಿದ್ದೆ. ಇವೆಲ್ಲದರ ಮಧ್ಯೆಯೂ ಲಂಡನ್ ನೆಲದಲ್ಲಿ ಕಾಲೂರುತ್ತಿದ್ದಂತೆಯೇ ನನಗೆ ನನ್ನ ತಾಯ್ನಾಡಿನಲ್ಲೇ ಇರುವೆನೇನೋ ಅನ್ನಿಸಿತು.

ಲಂಡನ್ನಿನ ಸೊಬಗು ತಕ್ಷಣವೇ ನನ್ನನ್ನು ಸಮ್ಮೋಹಕಗೊಳಿಸಿತು. ಆ ನಗರದಲ್ಲಿ ನೋಡಲೇಬೇಕಾದರಥವುಗಳನ್ನು ಕಣ್ತುಂಬಿಕೊಳ್ಳಲು ಒಂದು ವರ್ಷ ಕೂಡ ಸಾಕಾಗದು ಎನ್ನುವುದು ಅಲ್ಲಿಗೆ ಹೋದ ಒಂದೇ ತಿಂಗಳಲ್ಲಿ ನನಗೆ ಮನವರಿಕೆಯಾಯಿತು. ಬಹಳಷ್ಟು ಕಾರಣಗಳಿಗಾಗಿ ಲಂಡನ್ ಈ ಪ್ರಪಂಚದ ಕೇಂದ್ರವೇನೋ ಎಂದು ನಿಜವಾಗಿಯೂ ಅನ್ನಿಸಿತು. ನಾನು ಕೇವಲ ಓದಿ ತಿಳಿದಿದ್ದ ಅಲ್ಲಿನ ವಾಸ್ತುಶಿಲ್ಪ, ಭೂಗತ ಹಾಗೂ ನೆಲದ ಮೇಲಿನ ಸುಗಮ ರೈಲು ಸಂಪರ್ಕ ವ್ಯವಸ್ಥೆ, ಮತ್ತು ಹೆಸರಾಂತ ಸ್ಮಾರಕಗಳು ಹುಬ್ಬೇರಿಸುವಂತೆ ಮಾಡಿ ನನ್ನಲ್ಲಿ ಬೆರಗು ಮೂಡಿಸಿದವು.

ಲಂಡನ್ನಿನ ವಸಹಾತುಶಾಹಿ ವಾಸ್ತುಶಿಲ್ಪಗಳಾದ ಕಮಾನುಗಳು, ಸ್ತಂಭಗಳು ಹಾಗೂ ಭವ್ಯವಾದ ಕಲ್ಲಿನ ಕಟ್ಟಡಗಳು ನನಗೆ ನಮ್ಮ ಮುಂಬೈನ ಫೋರ್ಟ್ ಏರಿಯಾ, ಕೋಲ್ಕತ್ತದ ವಿಕ್ಟೋರಿಯಾ ಸ್ಮಾರಕ ಹಾಗೂ ಶಿಮ್ಲಾದ ಪಾರಂಪರಿಕ ತಾಣಗಳನ್ನು ನೆನಪಿಸಿದವು. ಈ ಹೋಲಿಕೆಗಳೊಂದಿಗೆ ಎಲ್ಲೆಡೆ ಕಿವಿಗೆ ಬೀಳುತ್ತಿದ್ದ ಇಂಗ್ಲಿಷ್ ಭಾಷೆಯು ನನ್ನಂತಹ ಭಾರತೀಯ ವ್ಯಕ್ತಿಗೆ ಪರಿಚಿತತೆಯ ಭಾವನೆಯನ್ನು ಅನಿರೀಕ್ಷಿತವಾಗಿ ಉಂಟುಮಾಡಿತ್ತು.

ಆ ಮೊದಲ ಭೇಟಿಯ ನಂತರ ನಾನು ಹೆಚ್ಚುಕಡಿಮೆ ಪ್ರತಿ ವರ್ಷವೂ ಲಂಡನ್ನಿಗೆ ಭೇಟಿ ನೀಡುತ್ತಿದ್ದೇನೆ. ಇಲ್ಲಿಗೆ ಪ್ರತಿ ಸಲ ಭೇಟಿ ನೀಡಿದಾಗಲೂ ಈ ಹಿಂದೆ ಕಂಡಿರದಿದ್ದ ಅಮೂಲ್ಯ ನೋಟಗಳು ಅನಾವರಣಗೊಳ್ಳುತ್ತಲೇ ಇವೆ. ಹೀಗಾಗಿ, ಲಂಡನ್ ನಗರವು ಅನ್ವೇಷಣೆ ಎಂಬುದು ಕೊನೆಗೊಳ್ಳದ ಸ್ಥಳ ಎಂಬುದು ನನಗೆ ಮತ್ತೆ ಮತ್ತೆ ದೃಢಪಡುತ್ತಿದೆ. ಹೀಗಿರುವಾಗ, ನನ್ನ ಬಾಲ್ಯದ ಗೆಳತಿಯು, ತನಗೆ ಕಳೆದ ಬಾರಿಯ ಲಂಡನ್ ಪ್ರವಾಸವು ಅಷ್ಟೇನೂ ಇಷ್ಟವಾಗಲಿಲ್ಲ ಎಂದಾಗ ನನಗೆಷ್ಟು ಆಘಾತವಾಗಿರಬಹುದು ಎಂದು ಒಮ್ಮೆ ಊಹಿಸಿಕೊಳ್ಳಿ. ಅವಳ ಆ ಅಭಿಪ್ರಾಯ ಅರಗಿಸಿಕೊಳ್ಳಲಾಗದ ನಾನು, ಆ ಕ್ಷಣದಲ್ಲೇ ಅವಳ ಅಭಿಪ್ರಾಯವನ್ನು ಬದಲಾಗುವಂತೆ ಮಾಡಬೇಕೆಂದು ಪಣ ತೊಟ್ಟೆ. ನಾನು ತುಂಬಾ ಇಷ್ಟಪಡುವ ಲಂಡನ್ ಹೇಗಿದೆ ಎಂಬುದನ್ನು ಅವಳಿಗೆ ತೋರಿಸಬೇಕು ಎಂದುಕೊಂಡೆ. ಅವಳ ತಪ್ಪು ಕಲ್ಪನೆಗಳನ್ನು ಚಿಂದಿ ಉಡಾಯಿಸಬೇಕು ಹಾಗೂ ಈ ಅಪೂರ್ವ ನಗರದಲ್ಲಿ ಪ್ರತಿ ಸಲ ಹೊರಗೆ ಹೋದಾಗಲೂ ನಾನು ನೋಡುವ ಮಾಯೆಯನ್ನು ಅವಳೂ ನೋಡುವಂತೆ ಮಾಡಬೇಕೆಂದುಕೊಂಡೆ.

ಅಂದಂತೆ, ಲಂಡನ್ ಎಂಬುದು 32 ಬರ್ಡೊಗಳು ಹಾಗೂ ಸಿಟಿ ಆಫ್ ಲಂಡನ್ ಆಗಿ ವರ್ಗೀಕರಣಗೊಂಡಿರುವ ನಗರವಾಗಿದೆ. ಇದರಲ್ಲಿ, ಸಿಟಿ ಆಫ್ ಲಂಡನ್ ವ್ಯಾಪ್ತಿಯು ಬೇರೆಯದೇ ಆದ ಐತಿಹಾಸಿಕ ಹಿನ್ನೆಲೆ ಹೊಂದಿದೆ. ಈ ಬರ್ಡೊಗಳು, ಇನ್ನರ್ ಲಂಡನ್ (ಕೇಂದ್ರ, ಚಾರಿತ್ರಿಕ ಹಳೆಯ ಪ್ರದೇಶಗಳು) ಮತ್ತು ಔಟರ್ ಲಂಡನ್ (ಉಪನಗರ ಜಿಲ್ಲೆಗಳು)ಗಳನ್ನು ಒಳಗೊಂಡಿವೆ. ಇನ್ನು, ಸಿಟಿ ಆಫ್ ಲಂಡನ್ ಅನ್ನು 'ದಿ ಸ್ಕ್ವೇರ್ ಮೈಲ್' ಎಂದೂ ಕರೆಯಲಾಗುತ್ತದೆ. ಇದು, ಗ್ರೇಟರ್ ಲಂಡನ್‌ನ ಹೃದಯ ಭಾಗದಲ್ಲಿರುವ ಪುಟ್ಟ ಚಾರಿತ್ರಿಕ ಪ್ರದೇಶವಾಗಿದೆ. ಒಟ್ಟಾರೆ ಲಂಡನ್‌ಗಿಂತ ವಿಭಿನ್ನವಾಗಿರುವ ಇದು ಯುನೈಟೆಡ್ ಕಿಂಗ್‌ಡಮ್‌ನ ಆರ್ಥಿಕ ಹಾಗೂ ವಾಣಿಜ್ಯದ ಕೇಂದ್ರ ನೆಲೆಯಾಗಿದೆ. ಸಿಟಿ ಆಫ್ ಲಂಡನ್ ಮೂಲತಃ ರೋಮನ್ನರಿಂದ ಕ್ರಿ.ಶ. 43ರಲ್ಲಿ ಲೊಂಡಿನಿಯಂ ಎಂಬ ವಸತಿ ನೆಲೆಯಾಗಿ ಸ್ಥಾಪನೆಗೊಂಡಿತು. ಇದು, ರೋಮನ್ನರ ಆಳ್ವಿಕೆಯ ಅವಧಿಯಲ್ಲಿ ವಾಣಿಜ್ಯ ವಹಿವಾಟು ಹಾಗೂ ಆಡಳಿತ ಕೇಂದ್ರವಾಗಿ ಬೆಳೆಯಿತು.

ರೋಮನ್ನರು ಕ್ರಿ.ಶ. 43ರಲ್ಲಿ ಸ್ಥಾಪಿಸಿದ ಲೊಂಡಿನಿಯಂದಿಂದ ಮೊದಲ್ಗೊಂಡು 2,000 ವರ್ಷಗಳಿಗೂ ಹೆಚ್ಚಿನ ಐತಿಹಾಸಿಕ ಹಿನ್ನೆಲೆ ಲಂಡನ್‌ಗೆ ಇದೆ. ಥೇಮ್ಸ್ ನದಿಯ ದಂಡೆಯಲ್ಲಿರುವ ಈ ನಗರವು ತರುವಾಯ ಪ್ರಮುಖ ಬಂದರಾಗಿ ಹಾಗೂ ವಾಣಿಜ್ಯ ನೆಲೆಯಾಗಿಯೂ ಬೆಳೆಯಿತು. ರೋಮನ್ನರು ಹಿಂದೆ ಸರಿದ ಮೇಲೆ ನಗರದ ಪ್ರಸಿದ್ಧಿಯೂ ತಗ್ಗಿತು. ಆದರೆ, ಸ್ಯಾಕ್ಸನ್ನರಿಂದ ನಗರವು ಪುನಃ ಮುನ್ನೆಲೆಗೆ ಬಂತು. ನಂತರ, ನಾರ್ಮನ್‌ರಿಂದ ಅದು ಇನ್ನಷ್ಟು ಸದೃಢಗೊಂಡಿತು. ಅಂದಂತೆ, ನಾರ್ಮನ್ನರು 11ನೇ ಶತಮಾನದಲ್ಲಿ ಇಲ್ಲಿ 'ಟವರ್ ಆಫ್ ಲಂಡನ್' ನಿರ್ಮಿಸಿದರು.

ಲಂಡನ್ ಹಾಗೂ ಇಂಗ್ಲೆಂಡಿನ ಉಲ್ಲೇಖವಿರುವ ನರ್ಸರಿ ರೈಮ್‌ಗಳನ್ನು (ಶಿಶುಪ್ರಾಸಗಳನ್ನು) ಹಾಡುತ್ತಾ ಬೆಳೆದವಳು ನಾನು. ರಾಣಿಯನ್ನು ನೋಡಲು ಲಂಡನ್ನಿಗೆ ತೆರಳಿದ್ದರ ಚಿತ್ರಣವಿರುವ ಪುಸ್ಸಿ ಕ್ಯಾಟ್, ಲಂಡನ್ ಬ್ರಿಜ್ ಈಸ್ ಫಾಲಿಂಗ್ ಡೌನ್ ಸೇರಿದಂತೆ ಹಲವು ರೈಮ್‌ಗಳು ಈ ಪಟ್ಟಿಗೆ ಸೇರುತ್ತವೆ. ಈ ಶಿಶುಪ್ರಾಸಗಳ ಹಿಂದೆ ಸಮೃದ್ಧ ಚರಿತ್ರೆಯೇ ಅಡಗಿದೆ. ವೈಕಿಂಗರು ದಾಳಿ ಎಸಗಿ ಸೇತುವೆಗಳನ್ನು ಹಾನಿಗೆಡವಿದ್ದು ಅಥವಾ ಶತಮಾನಗಳ ಕಾಲದಿಂದ ಹಲವಾರು ಬೇರೆ ಬೇರೆ ನಿರ್ಮಿತಿಗಳು "ಲಂಡನ್ ಬ್ರಿಜ್" ಎಂಬ ಹೆಸರು ಹೊಂದಿರುವುದು ಇಂತಹ ಅದೆಷ್ಟೋ ಕತೆಗಳು ಈ ಪ್ರಾಸಗಳ ಹಿಂದಿವೆ . ಅದಿರಲಿ, 'ಲಂಡನ್ ಬ್ರಿಜ್' ಎಂದಾಕ್ಷಣ ನಮಗೆಲ್ಲಾ ಮನಸ್ಸಿಗೆ ಬರುವ ಚಿತ್ರವೆಂದರೆ ಅದು 'ಟವರ್ ಬ್ರಿಜ್'ನದು. ಇದು ವಿಕ್ಟೋರಿಯನ್ ಎಂಜಿನಿಯರಿಂಗ್‌ನ ಅಚ್ಚರಿಯಾಗಿದ್ದು, ಇಂದಿಗೂ ಥೇಮ್ಸ್ ನದಿಯ ಗುಂಟ ಹಾದು ಹೋಗುವ ಹಡಗುಗಳಿಗೆ ತೆರೆದುಕೊಂಡು ಮಾರ್ಗ ಮುಕ್ತವಾಗಿಸುವ ಸೇತುವೆಯಾಗಿದೆ.

ಚಾರಿತ್ರಿಕ 'ಟವರ್ ಆಫ್ ಲಂಡನ್', ಹತ್ತಿರದಲ್ಲೇ ಇರುವ ಮತ್ತೊಂದು ನಿರ್ಮಿತಿಯಾಗಿದೆ. ಇದು ಪ್ರಪಂಚದ ಹೆಸರಾಂತ ರಾಜ ಪರಿವಾರದ ಆಭರಣಗಳಿರುವ ತಾಣವಾಗಿದೆ. ಜಗತ್ತಿನ ಅತ್ಯಂತ ದೊಡ್ಡ ವಜ್ರಗಳಲ್ಲೊಂದಾದ ಭವ್ಯವಾದ ಕೊಹಿನೂರ್ ಕೂಡ ಇಲ್ಲಿದೆ. ಈ ಬೆಲೆಬಾಳುವ ಸಂಪತ್ತನ್ನು ಬೀಫೀಟರ್ಸ್‌ಗಳು ಅಥವಾ ಯೋಮನ್ ವಾರ್ಡರ್‌ಗಳು ರಕ್ಷಿಸುತ್ತಿದ್ದು, ಈ ಸಂರಕ್ಷಿತ ಆಭರಣಗಳ ಬಗ್ಗೆ ಸಾಕಷ್ಟು ಕುತೂಹಲಕರ ಕತೆಗಳೂ ಇವೆ. ಈ ಆಭರಣಗಳು ಇಲ್ಲವಾದ ದಿನ ಸಾಮ್ರಾಜ್ಯ ಕೂಡ ಪತನವಾಗುತ್ತದೆಂಬುದು ಇಲ್ಲಿನ ಪ್ರತೀತಿ. ನದಿ ಹರಿವ ದಿಕ್ಕಿನಲ್ಲಿ ಕೊಂಚ ಕೆಳ ಸಾಗಿದರೆ ಲಂಡನ್ ಐ ಇದೆ. ಗಾಜಿನ ಕೋಶಗಳಿರುವ ಈ ಜೈಂಟ್ ವೀಲ್‌ನಲ್ಲಿ (ಬೃಹತ್ ತೂಗುತೊಟ್ಟಿಲು) ಕುಳಿತು ಗಿರಗಿಟ್ಲೆ ಸುತ್ತುವಾಗ ಲಂಡನ್ ನಗರದ ಹಾಗೂ ಬಾಗಿ ಬಳುಕುತ್ತಾ ನಗರವನ್ನು ಸುತ್ತುವರಿದು ಹರಿಯುವ ಥೇಮ್ಸ್ ನದಿಯ ನಿಬ್ಬೆರಗಾಗಿಸುವ ದೃಶ್ಯಗಳು ಸುರುಳಿಯಂತೆ ಬಿಚ್ಚಿಕೊಳ್ಳುತ್ತವೆ. ಬೆಳಕು ನಿಚ್ಚಳವಾಗಿರುವ ದಿನಗಳಲ್ಲಿ ರಾಣಿಯ ಅಧಿಕೃತ ನಿವಾಸವಾದ ವಿಂಡ್ಸರ್‌ವರೆಗಿನ ನೋಟ ಇಲ್ಲಿಂದ ದಕ್ಕುತ್ತದೆ.

ಸಿಟಿಗೆ ಸನಿಹದಲ್ಲೇ ಬಕಿಂಗ್‌ಹ್ಯಾಮ್ ಅರಮನೆ ಹಾಗೂ ಅದರ ಸುತ್ತ ಇರುವ ಉದ್ಯಾನಗಳ ಗುಂಟ ನೀವು ಹಾದು ಹೋಗುತ್ತೀರಿ. ಇಲ್ಲಿ ಪ್ರತಿದಿನವೂ 'ಚೇಂಜಿಂಗ್ ಆಫ್ ಗಾರ್ಡ್' (ರಕ್ಷಣೆಯ ಹೊಣೆಯ ಹಸ್ತಾಂತರ) ನಡೆಯುತ್ತದೆ. ಸಂಪ್ರದಾಯವಾಗಿ ಬೆಳೆದು ಬಂದಿರುವ ಈ ವಿಧಿಯು ಮನಸೂರೆಗೊಳ್ಳುವ ನೋಟವಾಗಿದೆ. ಇವೆಲ್ಲಕ್ಕಿಂತ ಮಿಗಿಲಾಗಿ, ಇಲ್ಲಿ ಅರಮನೆಯ ಸುತ್ತಲೂ ಇರುವ ಉದ್ಯಾನಗಳೆಂದರೆ ನನಗೆ ಬಲು ಇಷ್ಟ. ಗ್ರೀನ್ ಪಾರ್ಕ್ ಮತ್ತು ಸೇಂಟ್ ಜೇಮ್ಸ್ ಪಾರ್ಕ್‌ಗಳಷ್ಟೇ ಅಲ್ಲದೆ ಅನತಿ ದೂರದಲ್ಲೇ ಹೈಡ್ ಪಾರ್ಕ್ ಇದೆ. ಹೆಸರಾಂತ ಸ್ಪೀಕರ್ಸ್ ಕಾರ್ನರ್ ಇರುವುದು ಈ ಹೈಡ್ ಪಾರ್ಕ್‌ನಲ್ಲೇ. ಎಲ್ಲೆಡೆಯ ಜನರು ಇಲ್ಲಿ ಬಂದು ಪರಸ್ಪರ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವುದಕ್ಕೆ ಹಾಗೂ ಮುಕ್ತ ಸಂವಾದದ ಪರಂಪರೆಗೆ ಶತಮಾನಗಳಿಂದ ಹೆಸರಾದ ತಾಣ ಇದಾಗಿದೆ.

ಲಂಡನ್‌ನಲ್ಲಿ ನಿನಗೆ ಅತ್ಯಂತ ಇಷ್ಟವಾದ ಕೆಲಸವೇನೆಂದು ನನ್ನನ್ನು ಕೇಳಿದವರಿಗೆಲ್ಲಾ, ನನ್ನ ಉತ್ತರ ಮಾತ್ರ ಯಾವಾಗಲೂ ಒಂದೇ ಆಗಿರುತ್ತದೆ: ಅದೇನೆಂದರೆ ಅಲ್ಲಿ ನಡೆದಾಡುವುದು. ಲಂಡನ್ನಿನಲ್ಲಿ ನಡೆದಾಡುವ ಅನುಭವವನ್ನು ಬೇರಾವುದಕ್ಕೂ ಹೋಲಿಸಲು ಸಾಧ್ಯವೇ ಇಲ್ಲ. ಅದರಲ್ಲೂ ಸಿಟಿಯ ಮಧ್ಯ ಭಾಗದಲ್ಲಿ ಹೈಡ್ ಪಾರ್ಕ್ ಇರುವಾಗ ಬೇರಿನ್ನೇನು ಬೇಕು? ಇಲ್ಲಿ ಕಾಲ್ನಡಿಗೆಯಲ್ಲಿ ಅನ್ವೇಷಿಸುತ್ತಾ ಸಾಗುವಾಗ ನಗರದ ಸೊಬಗು ಎಳೆಎಳೆಯಾಗಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಅವಿತುಕೊಂಡಂತಿರುವ ಓಣಿಗಳು, ಆಕರ್ಷಕ ಕೆಫೆಗಳು, ಸಾರ್ವಜನಿಕ ಸ್ಥಳಗಳಲ್ಲಿರುವ ಮನಮೋಹಕ ದೃಶ್ಯ ಕಲೆಗಳು ಹಾಗೂ ಅನ್ವೇಷಣೆಗೊಳ್ಳಲು ಕಾದು ನಿಂತಂತಿರುವ ಚಾರಿತ್ರಿಕ ತಾಣಗಳಿಗೆ ನೀವು ಸಾಕ್ಷಿಯಾಗುತ್ತೀರಿ.

ಲಂಡನ್ ನಗರವನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ಒಂದೊಂದೇ ಹೆಜ್ಜೆ ಇರಿಸುತ್ತಾ ಅದರಲ್ಲಿ ಮುಳುಗಿಬಿಡಬೇಕು. ಅಂದಂತೆ, ನನ್ನ ಈ ಅನುಭವವನ್ನು ಗೆಳತಿಯೊಂದಿಗೆ ಹಂಚಿಕೊಳ್ಳಲು ನಾನು ಕಾತರಳಾಗಿದ್ದೆ.

ಲಂಡನ್ನಿನ ಬಹಳಷ್ಟು ಪ್ರಮುಖ ಸ್ಥಳಗಳನ್ನು ನಾನು ಹಾಗೂ ನನ್ನ ಗೆಳತಿ ಮುಂಚೆಯೇ ನೋಡಿದ್ದೆವು. ಆದ್ದರಿಂದ ನಮ್ಮ ಈ ಭೇಟಿಯಲ್ಲಿ ಅಷ್ಟಾಗಿ ಪರಿಚಿತವಲ್ಲದ ಸ್ಥಳಗಳನ್ನು ನೋಡಲು ನಿರ್ಧರಿಸಿದ್ದೆವು. ನಾವಿಬ್ಬರೂ ಪಿ.ಜಿ.ವೋಡ್ ಹೌಸ್ ಪುಸ್ತಕಗಳನ್ನು ಓದುತ್ತಾ ಬೆಳೆದವರು. ಜೀವ್ಸ್ ಮತ್ತು ಬರ್ಟಿ ವೂಸ್ಟ ಅವರ ವಿನೋದ ಕತೆಗಳನ್ನು ಓದುವ ಖುಷಿಯು ನಮ್ಮ ಬದುಕುಗಳನ್ನು ಉದ್ದೀಪನಗೊಳಿಸುತ್ತದೆ. ಅವುಗಳಲ್ಲಿ ಬರುವ ಬೀದಿಗಳು, ಜೆಂಟಲ್ ಮ್ಯಾನ್ಸ್ ಕ್ಲಬ್‌ಗಳು, ಹ್ಯಾಟ್ ಷಾಪ್‌ಗಳು ಹಾಗೂ ರೈಲು ನಿಲ್ದಾಣಗಳನ್ನೆಲ್ಲಾ ಕಲ್ಪಿಸಿಕೊಂಡಿದ್ದೆವು. ಹೀಗಾಗಿ ಮೇಫೇರ್‌ನಿಂದಲೇ ನಮ್ಮ ಪ್ರವಾಸ ಆರಂಭಿಸುವುದು ಬಹಳ ಸೂಕ್ತವಾಗಿತ್ತು.

ಮೇಫೇರ್ ಲಂಡನ್ನಿನ ಅತ್ಯಂತ ಪ್ರತಿಷ್ಠಿತ ಜಿಲ್ಲೆಗಳಲ್ಲಿ ಒಂದಾಗಿದೆ. ಇದು ಸೊಬಗು ಹಾಗೂ ಐಷಾರಾಮಕ್ಕೆ ಮತ್ತೊಂದು ಹೆಸರೇ ಆಗಿದೆ. ಜಾರ್ಜಿಯನ್ ವಾಸ್ತುಶಿಲ್ಪ, ಪ್ರತಿಷ್ಠಿತ ಬೊಟೀಕ್‌ಗಳು, ಪಂಚತಾರಾ ಹೋಟೆಲ್‌ಗಳು ಹಾಗೂ ವಿಶ್ವದರ್ಜೆಯ ಔತಣಗಳಿಂದ ಇದು ಗಮನ ಸೆಳೆಯುತ್ತದೆ. ನಗರದ ಅತ್ಯಾಧುನಿಕ ಜೀವನಶೈಲಿಯ ಇಣುಕು ನೋಟವನ್ನು ಇದು ಲಭ್ಯವಾಗಿಸುತ್ತದೆ. ಲಂಡನ್ನಿನಲ್ಲಿ ನಡೆದಾಡುವಾಗ ಕಟ್ಟಡಗಳ ಮೇಲಿನ ನೀಲಿ ಬಣ್ಣದ ಫಲಕಗಳನ್ನು ಗಮನಿಸಲು ಮರೆಯಬಾರದು. ಇದು ಪ್ರಸಿದ್ಧ ವ್ಯಕ್ತಿಗಳು ಬಾಳಿ ಬದುಕಿನ ಸ್ಥಳಗಳ ಬಗೆಗಿನ ಮಾಹಿತಿಯನ್ನು ತಿಳಿಸಿ, ನಮಗೆ ಇತಿಹಾಸದ ಕೊಂಡಿಯೊಂದಿಗೆ ಬೆಸೆದುಕೊಂಡ ಅನುಭವವನ್ನು ಕೊಡಮಾಡುತ್ತದೆ. ಹೀಗೆ ನಡೆದಾಡುವಾಗ, ಬ್ರಿಟಿಷ್ ಲೈಬ್ರರಿ ಹತ್ತಿರದ ರಸೆಲ್ ಸ್ಕೇರ್‌ನಲ್ಲಿ ಚಾರ್ಲ್ಸ್ ಡಿಕೆನ್ಸ್ ವಾಸಿಸುತ್ತಿದ್ದ ಕಟ್ಟಡ ನನ್ನ ಕಣ್ಣಿಗೆ ಬಿತ್ತು. ಮೇಫೇರ್‌ನಲ್ಲಿ ಬೀಜೀಸ್ ಒಂದೊಮ್ಮೆ ವಾಸಿಸುತ್ತಿದ್ದುದರ ಕುರಿತ ಮಾಹಿತಿ ಇದ್ದ ಫಲಕವೊಂದು ಕಂಡುಬಂತು. ಕೊನೆಗೆ, ನಮ್ಮ ಸಾಹಿತ್ಯಿಕ ಯಾನಕ್ಕೆ ಒಪ್ಪುವಂತೆ ಸ್ವತಃ ಪಿ.ಜಿ.ವೋಡ್ ಹೌಸ್ ಬಾಳಿ ಬದುಕಿದ ಡನ್ ರೇವನ್ ಸ್ಟ್ರೀಟ್‌ಗೆ ನಾವು ಹೋದೆವು.

ಅಲ್ಲಿಂದ ಮುಂದೆ ನಾವು ನಾಟಿಂಗ್ ಹಿಲ್ ಮತ್ತು ಪೋರ್ಟೊಬೆಲ್ಲೊ ರಸ್ತೆಯ ವಿಂಟೇಜ್ ಮಾರ್ಕೆಟ್‌ಗೆ ಹೋದೆವು. 'ನಾಟಿಂಗ್ ಹಿಲ್' ರೊಮ್ಯಾಂಟಿಕ್ ಕಾಮಿಡಿಯಿಂದ ಮನೆಮಾತಾದ ಈ ಚಲನಶೀಲ ಮಾರ್ಕೆಟ್ ತನ್ನ ಕಂಗೊಳಿಸುವ ನಿವಾಸಗಳು, ವಿಶಿಷ್ಟ ಪ್ರಾಚೀನ ವಸ್ತುಗಳು ಹಾಗೂ ಲವಲವಿಕೆಯ ವಾತಾವರಣದಿಂದ ಎಂದಿನಿಂದಲೂ ಪ್ರವಾಸಿಗರನ್ನು ಸೆಳೆಯುತ್ತಲೇ ಬಂದಿದೆ. ಹೀಗೆ, ಕಾಲಾತೀತ ಸೊಬಗಿಗೆ ಸಾಕ್ಷಿಯಾಗುತ್ತಾ ನಾವು ನಮ್ಮ ಸಂಜೆಯನ್ನು 'ದಿ ರಿಟ್ಜ್'ನಲ್ಲಿ ಕೊನೆಗೊಳಿಸಿದೆವು. ಅಂದಹಾಗೆ, ವಿಶಿಷ್ಟ ಬ್ರಿಟಿಷ್ ಅನುಭವವನ್ನು ಪ್ರತಿನಿಧಿಸುವ ಲಂಡನ್‌ನಲ್ಲಿನ ಮಧ್ಯಾಹ್ನದ ರುಚಿಕರ ಸ್ವಾದದ ಚಹಾಕ್ಕೆ ಹೆಸರಾದ ಹೋಟೆಲ್ ಇದಾಗಿದೆ.

ಮರುದಿನ ನಾವು ಕೋವೆಂಟ್ ಗಾರ್ಡನ್‌ಗೆ ತೆರಳಿದೆವು. ಇದು, ಸಾರ್ವಜನಿಕ ಕಲಾ ಪ್ರದರ್ಶಕರು, ಬೊಟೀಕ್‌ಗಳು ಹಾಗೂ ತಿಂಡಿತಿನಿಸಿನ ಮಳಿಗೆಗಳಿಂದ ಗಿಜಿಗುಡುವ ಜಿಲ್ಲೆಯಾಗಿದೆ. ಅಲ್ಲದೆ, ಮಂತ್ರಮುಗ್ಧಗೊಳಿಸುವ ಮೋಹಕತೆ, ಐತಿಹಾಸಿಕ ವಾಸ್ತುಶಿಲ್ಪ ಹಾಗೂ ಆಧುನಿಕ ನಾಡಿಮಿಡಿತ ಹದವಾಗಿ ಮಿಳಿತಗೊಂಡ ತಾಣವೂ ಹೌದು. ಕ್ಯಾಮ್ಡೆನ್ ಮಾರ್ಕೆಟ್ ಮತ್ತೊಂದು ಖಾದ್ಯ ನೆಲೆಯಾಗಿದ್ದು, ಸ್ಟ್ರೀಟ್ ಫುಡ್‌ಗಳಿಂದಾಗಿ ಪ್ರಪಂಚದ ಎಲ್ಲಾ ಭಾಗಗಳ ಪ್ರವಾಸಿಗರ ಬಾಯಲ್ಲಿ ನೀರೂರಿಸುತ್ತದೆ. ಆಧುನಿಕ ಭಾರತೀಯ ರುಚಿಯ ಖಾದ್ಯಕ್ಕಾಗಿ ನಾವು ಡಿಶೂಮ್‌ನಲ್ಲಿ ಔತಣ ಸವಿದೆವು. ಅಂದಂತೆ, ಇದು ಬಾಂಬೆಯ ಸ್ವಾದಗಳನ್ನು ಲಂಡನ್‌ನ ಕಾಸ್ಮೋಪಾಲಿಟನ್ ರುಚಿಗಳೊಂದಿಗೆ ಮೇಳೈಸುವ ರೆಸ್ಟೋರೆಂಟ್ ಆಗಿದೆ.

ನಾವು ಅಂತಿಮವಾಗಿ 'ದಿ ಶಾರ್ಡ್' ರೆಸ್ಟೋರೆಂಟ್‌ನಲ್ಲಿ ಸಂಭ್ರಮಾಚರಣೆಯ ಔತಣದೊಂದಿಗೆ ನಮ್ಮ ಪ್ರವಾಸಕ್ಕೆ ತೆರೆ ಎಳೆದೆವು. ಕಿಟಕಿ ಬದಿಯಲ್ಲಿ ಕುಳಿತು, ಅಲ್ಲಿನ ಭವ್ಯ ನೋಟಗಳನ್ನು ಕಣ್ತುಂಬಿಕೊಳ್ಳುತ್ತಾ ಮೆಚ್ಚುಗೆ ಸೂಚಿಸಿದೆವು. ಕೆಳಗೆ ಸಂಜೆಯ ದೀಪಗಳಲ್ಲಿ 'ಟವರ್ ಬ್ರಿಜ್' ಮಿನುಗುತ್ತಿತ್ತು. ಇದು, ಲಂಡನ್ನಿನ ಸಮೃದ್ಧ ಇತಿಹಾಸ ಹಾಗೂ ವರ್ತಮಾನದ ಪ್ರಭಾವಳಿಯನ್ನು ಸಮತೋಲನ ಮಾಡಿದಂತೆ ತೋರುತ್ತಿತ್ತು. ನಾವು ನಮ್ಮ ಪಯಣವನ್ನು ಅವಲೋಕಿಸಿದಾಗ, ಲಂಡನ್ ಎಂಬುದು ಕೇವಲ ನಗರವಲ್ಲ, ಅದು ಅನ್ವೇಷಣೆಗಾಗಿ ಕಾದು ಕುಳಿತಿರುವ ಕೊನೆಯಿರದ ಕತೆ ಎನ್ನಿಸಿತು. ಅಂದಂತೆ, ನಿಮ್ಮ ಪಯಣವನ್ನು ಯಾವಾಗ ಆರಂಭಿಸುವಿರಿ?

Email: travel@veenaworld.com | ಪ್ರತಿವಾರವೂ ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾಗುವ ಸುನೀಲಾ ಪಾಟೀಲ್, ವೀಣಾ ಪಾಟೀಲ್ ಮತ್ತು ನೀಲ್ ಪಾಟೀಲ್ ಅವರ ಲೇಖನಗಳನ್ನು ವೀಣಾ ವರ್ಲ್ಡ್ ವೆಬ್ಸೈಟ್ www.veenaworld.com ನಲ್ಲೂ ಓದಬಹುದು.

ವೀಣಾ ವರ್ಲ್ಡ್ ಮಹಿಳಾ ವಿಶೇಷ

ಹೃದಯವನ್ನು ಪುನಶ್ಚೇತನಗೊಳಿಸೋಣ, ಆತ್ಮವಿಶ್ವಾಸ ಉಜ್ವಲಗೊಳಿಸೋಣ, ಬದುಕಿನ ಬಗೆಗೆ ಹೊಸ ದೃಷ್ಟಿಕೋನವನ್ನು ಬರ ಮಾಡಿಕೊಳ್ಳೋಣ. ನಮಗಾಗಿ ಒಂದಿಷ್ಟು ಸಮಯ ನೀಡೋಣ, ನಮ್ಮೊಳಗೆ ಹುದುಗಿರುವ ಆಂತರ್ಯದ ಅನನ್ಯ ಸೌಂದರ್ಯವನ್ನು ಸಂಭ್ರಮಿಸೋಣ ಹಾಗೂ ಅಮೂಲ್ಯ ನೆನಪುಗಳನ್ನು ಸೃಷ್ಟಿಸೋಣ. ಅಡೆತಡೆಗಳನ್ನು ಮೀರೋಣ, ಇತರರನ್ನು ಪ್ರೇರೇಪಿಸೋಣ, ಜೀವನವನ್ನು ಪ್ರೀತಿಸೋಣ ಹಾಗೂ ಮನೆಯನ್ನು ಸಂತಸದ ತಾಣವಾಗಿಸೋಣ!

ಇದಕ್ಕಾಗಿ ..ಪ್ರಯಾಣಿಸಿ! ಅನ್ವೇಷಿಸಿ! ಬದುಕನ್ನು ಸಂಭ್ರಮಿಸಿ! ಸ್ತ್ರೀತನವನ್ನು ಸಡಗರಿಸಿ!

ಚಲೋ, ಬ್ಯಾಗ್ ಭರೋ, ನಿಕಲ್ ಪಡೋ!

veenaworld.com | Toll-Free: 1800 22 7979
Veena World Bengaluru: Jayanagar 887 997 2217 | Indiranagar 887 997 9500



ಹಲೋ ಹೆಂಗಳೆಯರೇ!
ಈ ಮಹಿಳಾ ದಿನವನ್ನು ಎಲ್ಲಿ ಸಂಭ್ರಮಿಸುವಿರಿ?
ವೀಣಾ ವರ್ಲ್ಡ್ ಮಹಿಳಾ ವಿಶೇಷ ಅತಿಥಿಗಳು ಏನು ಹೇಳಿದ್ದಾರೆಂಬುದನ್ನು ಓದಲು ಸ್ಕ್ಯಾನ್ ಮಾಡಿ.
VEENA WORLD
Travel. Explore. Celebrate Life.

ಎರಡನೇ ಏಕದಿನ ಪಂದ್ಯ ಇಂದು: ತಂಡಕ್ಕೆ ಕೊಹ್ಲಿ

ಭಾರತಕ್ಕೆ ಸರಣಿ ಜಯದ ತವಕ

ಅಭ್ಯಾಸದಲ್ಲಿ ತೊಡಗಿರುವ ಕುಲದೀಪ್ ಯಾದವ್, ವರುಣ್ ಚಕ್ರವರ್ತಿ ಮತ್ತು ಅರ್ಷದೀಪ್ ಸಿಂಗ್

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಅಭ್ಯಾಸದಲ್ಲಿ ನಿರತವಾಗಿರುವ ವಿರಾಟ್ ಕೊಹ್ಲಿ –ಪಿಟಿಐ ಚಿತ್ರಗಳು

ಕಟಕ್ (ಪಿಟಿಐ): ನಾಯಕ ರೋಹಿತ್ ಶರ್ಮಾ ಎದುರಿಸುತ್ತಿರುವ ರನ್ ಬರ, ಕೊಹ್ಲಿ ಮರಳಿರುವುದರಿಂದ ತಂಡದಿಂದ ಯಾರನ್ನು ಕೈಬಿಡಬೇಕೆಂಬ ದ್ವಂದ್ವ– ಇವೆರಡು ವಿಷಯ ಸದ್ಯ ಭಾರತ ತಂಡವನ್ನು ಕಾಡುತ್ತಿದೆ. ಇದರ ನಡುವೆಯೇ ಭಾನುವಾರ ಇಂಗ್ಲೆಂಡ್ ವಿರುದ್ಧ ಎರಡನೇ ಏಕದಿನ ಪಂದ್ಯವನ್ನು ಗೆದ್ದು ಸರಣಿ ಸಾಧಿಸಲು ಆತಿಥೇಯರು ತುದಿಗಾಲಲ್ಲಿ ನಿಂತಿದ್ದಾರೆ.

ನಾಗ್ಪುರದಲ್ಲಿ ನಡೆದ ಮೊದಲ ಏಕದಿನ ಪಂದ್ಯವನ್ನು ಗೆದ್ದ ಭಾರತ ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಪಡೆದಿದೆ. ಈ ಪಂದ್ಯ ಗೆದ್ದರೆ ಮಾತ್ರ ಇಂಗ್ಲೆಂಡ್‌ಗೆ ಸರಣಿ ಜೀವಂತವಾಗಿಡುವ ಅವಕಾಶ ಸಿಗಲಿದೆ.

ಬಲಮೊಣಕಾಲಿನಲ್ಲಿ ಊತ ಕಾಣಿಸಿದ್ದ ಕಾರಣ ಕೊಹ್ಲಿ ಆ ಪಂದ್ಯ ಆಡಿರಲಿಲ್ಲ. ಇದು ಚಾಂಪಿಯನ್ಸ್ ಟ್ರೋಫಿ ಸನಿಹವಿರುವಾಗ ತಂಡದಲ್ಲಿ ಆತಂಕವನ್ನೂ ಮೂಡಿಸಿತ್ತು. ಆದರೆ ಉಪನಾಯಕ ಶುಭಮನ್ ಗಿಲ್ ಅವರು ಎರಡನೇ ಪಂದ್ಯಕ್ಕೆ ಕೊಹ್ಲಿ ಆಯ್ಕೆಗೆ ಲಭ್ಯರಿರುತ್ತಾರೆ ಎಂದು ಹೇಳಿ ಆ ಕುರಿತ ಊಹಾಪೋಹಗಳಿಗೆ ವಿರಾಮ ಹಾಕಿದ್ದಾರೆ.

ಇದೇ ಕ್ರೀಡಾಂಗಣದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ 2019ರಲ್ಲಿ ನಡೆದ ಏಕದಿನ ಪಂದ್ಯದಲ್ಲಿ ಚೇಸ್ ವೇಳೆ ಕೊಹ್ಲಿ 85 ರನ್ ಗಳಿಸಿ ಪಂದ್ಯದ ಆಟಗಾರರಾಗಿದ್ದರು. ಕೊಹ್ಲಿ ತಂಡದೊಂದಿಗೆ ಕಟಕ್‌ಗೆ ಪ್ರಯಾಣ ಬೆಳೆಸಿದ್ದು, ಆರಾಮವಾಗಿದ್ದಂತೆ ಕಂಡರು.

ದ್ವಂದ್ವ: ಕೊಹ್ಲಿ ಲಭ್ಯತೆ ಭಾರತ ತಂಡಕ್ಕೆ ನೆಮ್ಮದಿ ಮೂಡಿಸಿದರೂ ಯಾರನ್ನು ಕೈಬಿಡಬೇಕೆಂಬ ಉಭಯಸಂಕಟ ಎದುರಾಗಿದೆ. ಕೊಹ್ಲಿ ಬದಲು ಕೊನೆಯ ಗಳಿಗೆಯಲ್ಲಿ ಆಡುವ ಅವಕಾಶ ಪಡೆದಿದ್ದ ಶ್ರೇಯಸ್ ಅಯ್ಯರ್ 36 ಎಸೆತಗಳಲ್ಲಿ 59 ರನ್ ಬಾಚಿದ್ದರಿಂದ ಅವರನ್ನು ಕೈಬಿಡುವ ಸಾಧ್ಯತೆ ಕಡಿಮೆ. ಎಡಗೈ ಆಟಗಾರ ಯಶಸ್ವಿ ಜೈಸ್ವಾಲ್ ಅವರನ್ನು ಕೈಬಿಡುವ ಸಾಧ್ಯತೆ ಅಧಿಕ. ಇದರಿಂದ ಮೂರನೇ ಕ್ರಮಾಂಕದಲ್ಲಿ ಆಡಿದ್ದ ಗಿಲ್ ಮುಂದಿನ ಪಂದ್ಯದಲ್ಲಿ ರೋಹಿತ್ ಜೊತೆ ಇನಿಂಗ್ಸ್ ಆರಂಭಿಸಬೇಕಾಗುತ್ತದೆ. ಜೈಸ್ವಾಲ್ ಮೊದಲ ಪಂದ್ಯದಲ್ಲಿ ಅಂಥ ಆರಂಭ ಪಡೆದಿರಲಿಲ್ಲ.

ಸ್ವತಃ ಕೊಹ್ಲಿ ಇತ್ತೀಚಿನ ಕೆಲ ತಿಂಗಳಿಂದ ತಿಣುಕಾಡುತ್ತಿದ್ದಾರೆ. ಆಸ್ಟ್ರೇಲಿಯಾದಲ್ಲಂತೂ ಅವರು ಪದೇ ಪದೇ ಆಫ್ ಸ್ಟಂಪ್ ಆಚೆಗಿನ ಎಸೆತಗಳನ್ನು ಆಡುವ ಪ್ರಲೋಭನೆಗೊಳಗಾಗಿ ದಂಡ ತೆತ್ತಿದ್ದಾರೆ. ರಣಜಿ ಟ್ರೋಫಿಯಲ್ಲಿ ಆಡಿದ ಒಂದು ಇನಿಂಗ್ಸ್‌ನಲ್ಲೂ 36 ವರ್ಷ ವಯಸ್ಸಿನ ಬ್ಯಾಟರ್ ನಿರಾಸೆ ಮೂಡಿಸಿದ್ದರು.

ಇಂಗ್ಲೆಂಡ್ ತಂಡದ ನಾಯಕ ಜೋಸ್ ಬಟ್ಲರ್

ಆದರೆ ಏಕದಿನ ಮಾದರಿ ಕೊಹ್ಲಿ ಅವರಿಗೆ ಅಚ್ಚುಮೆಚ್ಚಿನದು. ಅವರು ಈ ಮಾದರಿಯಲ್ಲಿ 14,000 ರನ್ ಮೈಲಿಗಲ್ಲು ತಲುಪಲು 94 ರನ್ ಅಷ್ಟೇ ದೂರದಲ್ಲಿದ್ದಾರೆ. ಸಚಿನ್ ತೆಂಡೂಲ್ಕರ್ (18,426) ಮತ್ತು ಕುಮಾರ ಸಂಗಕ್ಕರ (14,234) ಮಾತ್ರ ಅವರಿಗಿಂತ ಮುಂದೆಯಿದ್ದಾರೆ. ತೆಂಡೂಲ್ಕರ್ (350 ಇನಿಂಗ್ಸ್) ಮತ್ತು ಸಂಗಕ್ಕರ (378 ಇನಿಂಗ್ಸ್) ಅವರು ಕೊಹ್ಲಿಗಿಂತ ಹೆಚ್ಚು ಪಂದ್ಯಗಳನ್ನು ಆಡಿದ್ದಾರೆ.

ರೋಹಿತ್ ರನ್‌ಕ್ಷಾಮ: ರೋಹಿತ್ ಅವರ ವೈಫಲ್ಯ ಈ ಸರಣಿಯ ಮೊದಲ ಪಂದ್ಯದಲ್ಲೂ ಮುಂದುವರಿದಿದೆ. ಮೊದಲ ಪಂದ್ಯದಲ್ಲಿ ಅವರ ಗಳಿಕೆ ಬರೇ 2. ಕಳೆದ ವರ್ಷದ ಆಗಸ್ಟ್ ನಂತರ ಮುಂಬೈನ ಆಟಗಾರ ಯಾವುದೇ ಮಾದರಿಯಲ್ಲಿ ಅರ್ಧಶತಕ ಗಳಿಸಿಲ್ಲ. ಕೊನೆಯ ಅರ್ಧಶತಕ ಕೊಲಂಬೊದಲ್ಲಿ ಲಂಕಾ ವಿರುದ್ಧ ಮೂರನೇ ಏಕದಿನ ಪಂದ್ಯದಲ್ಲಿ (64 ರನ್) ದಾಖಲಾಗಿತ್ತು. ರೋಹಿತ್ ಮತ್ತೆ ವಿಫಲರಾದಲ್ಲಿ ಅವರ ಕ್ರಿಕೆಟ್ ಭವಿಷ್ಯದ ಮೇಲೆ ಪ್ರತಿಕೂಲ ಪರಿಣಾಮವಾಗಬಹುದು.

ಬೌಲಿಂಗ್ ಚಿಂತೆ ಕಡಿಮೆ: ಮೊಹಮ್ಮದ್ ಶಮಿ ಅವರು ತಂಡಕ್ಕೆ ಪುನರಾಗಮನ ಮಾಡಿದ ನಂತರ ಲಯಕ್ಕೆ ಮರಳುತ್ತಿದ್ದಾರೆ. ನಾಗ್ಪುರದಲ್ಲಿ ಎಂಟು ಓವರುಗಳಲ್ಲಿ 38 ರನ್‌ಗಳಷ್ಟೇ ಕೊಟ್ಟು 1 ವಿಕೆಟ್ ಪಡೆದಿದ್ದರು. ಪದಾರ್ಪಣೆ ಮಾಡಿದ ಹರ್ಷಿತ್ ರಾಣಾ ಸ್ವಲ್ಪ ದುಬಾರಿಯಾದರೂ ಮೂರು ಪ್ರಮುಖ ವಿಕೆಟ್‌ಗಳನ್ನು ಪಡೆದು ಭಾರತ ಹಿಡಿತ ಕಳೆದುಕೊಳ್ಳದಂತೆ ನೋಡಿಕೊಂಡಿದ್ದರು. ಬೂಮ್ರಾ ಅವರ ಫಿಟ್ನೆಸ್ ಬಗ್ಗೆ ಸ್ಪಷ್ಟತೆ ಇಲ್ಲದ ಕಾರಣ ರಾಣಾ ಅವರಿಗೆ ಸ್ಥಾನ ಬಲಪಡಿಸಿಕೊಳ್ಳಲು ಈ ಸರಣಿ ಸದವಕಾಶವಾಗಿದೆ.

ಸರಣಿ ಮೂರು ಪಂದ್ಯಗಳದ್ದಾಗಿರುವುದರಿಂದ ಬಟ್ಲರ್ ಬಳಗಕ್ಕೆ ಈ ಪಂದ್ಯ ಮಾಡು–ಮಡಿ ಎಂಬಂತಾಗಿದೆ. ಪ್ರವಾಸಿ ತಂಡ ಆಕ್ರಮಣಕಾರಿ ಆಟದ ತಂತ್ರ ಬದಲಾಯಿಸಿಕೊಳ್ಳಲಿದೆಯೇ ಎಂಬುದನ್ನು ಕಾದುನೋಡಬೇಕಾಗಿದೆ.

ಪ್ರವಾಸಿ ಬ್ಯಾಟರ್‌ಗಳು ಭಾರತದ ಸ್ಪಿನ್ನರ್‌ಗಳನ್ನು ಎಷ್ಟರ ಮಟ್ಟಿಗೆ ನಿಭಾಯಿಸುತ್ತಾರೆ ಎಂಬುದರ ಮೇಲೆ ಇಂಗ್ಲೆಂಡ್ ತಂಡದ ಯಶಸ್ಸು ನಿಂತಿದೆ.

ವೇಗದ ದಾಖಲೆ ಸರಿಗಟ್ಟಿದ ಅನಿಮೇಶ್

ರಾಷ್ಟ್ರೀಯ ಕ್ರೀಡೆ: ದಾಖಲೆವೀರ ಹೋಬಳಿದಾರಗೆ ನಿರಾಸೆ

ಅನಿಮೇಶ್ ಕುಜೂರ್

ಡೆಹ್ರಾಡೂನ್ (ಪಿಟಿಐ): ಒಡಿಶಾದ ಉದಯೋನ್ಮುಖ ಓಟಗಾರ ಅನಿಮೇಶ್ ಕುಜೂರ್, ರಾಷ್ಟ್ರೀಯ ಕ್ರೀಡೆಗಳ ಅಥ್ಲೆಟಿಕ್ಸ್ ಸ್ಪರ್ಧೆಗಳ ಮೊದಲ ದಿನವಾದ ಶನಿವಾರ ತೀವ್ರ ಪೈಪೋಟಿಯಿಂದ ಕೂಡಿದ್ದ 100 ಮೀ. ಓಟವನ್ನು 10.28 ಸೆಕೆಂಡುಗಳಲ್ಲಿ ಕ್ರಮಿಸಿ ಸ್ವರ್ಣ ಗೆದ್ದರಲ್ಲದೇ, ಆ ಹಾದಿಯಲ್ಲಿ ಕೂಟದಾಖಲೆಯನ್ನು ಸರಿಗಟ್ಟಿದರು.

ಅಥ್ಲೆಟಿಕ್ಸ್‌ನಲ್ಲಿ ಮೊದಲ ದಿನ ಪಣಕ್ಕಿದ್ದ 10 ಚಿನ್ನದ ಪದಕಗಳಲ್ಲಿ ಮಹಾರಾಷ್ಟ್ರ ಮತ್ತು ಸರ್ವಿಸಸ್ ತಲಾ ಎರಡು ಗೆದ್ದವು.

21 ವರ್ಷ ವಯಸ್ಸಿನ ಕುಜೂರ್ ಅವರ ವೈಯಕ್ತಿಕ ಶ್ರೇಷ್ಠ ಸಾಧನೆ 10.27 ಸೆ. ಅವರು, 2022ರ ಗುಜರಾತ್ ಕ್ರೀಡೆಗಳಲ್ಲಿ ಅಸ್ಸಾಮಿನ ಆಮ್ಲನ್ ಬೊರ್ಗೊಹೈನ್ ಅವರು ಸ್ಥಾಪಿಸಿದ್ದ 10.28 ಸೆ.ಗಳ ದಾಖಲೆಯನ್ನು ಇಲ್ಲಿ ಸರಿಗಟ್ಟಿದರು. ಫೆಡರೇಷನ್ ಕಪ್ ಮತ್ತು ಅಂತರರಾಜ್ಯ ಚಾಂಪಿಯನ್‌ಷಿಪ್‌ಗಳಲ್ಲಿ ಕುಜೂರ್ ಬೆಳ್ಳಿ ಗೆದ್ದಿದ್ದರು.

ಮಹಾರಾಷ್ಟ್ರದ ಪ್ರಣವ್ ಗುರವ್ (10.32 ಸೆ.) ಅಚ್ಚರಿಯ ರೀತಿ ಬೆಳ್ಳಿ ಗೆದ್ದರೆ, ಅನುಭವಿ ಬೊರ್ಗೊಹೈನ್ (10.43 ಸೆ.) ಮೂರನೇ ಸ್ಥಾನಕ್ಕೆ ಸರಿದರು. ರಾಷ್ಟ್ರೀಯ ದಾಖಲೆವೀರ ಮಣಿಕಂಠ ಹೋಬಳಿದಾರ (ಸರ್ವಿಸಸ್) ಐದನೇ ಸ್ಥಾನವನ್ನಷ್ಟೇ (10.46ಸೆ.) ಗಳಿಸಿದರು. ಮಣಿಕಂಠ 2023ರಲ್ಲಿ 10.23 ಸೆ.ಗಳಲ್ಲಿ ಓಡಿದ್ದು ರಾಷ್ಟ್ರೀಯ ದಾಖಲೆಯಾಗಿದೆ.

ದೇಶದ ಅಗ್ರ ಸ್ಪ್ರಿಂಟರ್‌ಗಳಲ್ಲಿ ಒಬ್ಬರಾದ ಗುರಿಂದರ್‌ವೀರ್ ಸಿಂಗ್ ಎರಡನೇ ಹೀಟ್‌ನಲ್ಲಿ ಮೂರನೇ ಸ್ಥಾನ (10.96ಸೆ.) ಗಳಿಸಿದ್ದರಿಂದ ಫೈನಲ್‌ಗೆ ಅರ್ಹತೆ ಪಡೆಯಲಾಗಲಿಲ್ಲ. ಗುರಿಂದರ್‌ವೀರ್ ಕಳೆದ ವರ್ಷ ಫೆಡರೇಷನ್ ಕಪ್ ಮತ್ತು ಅಂತರರಾಜ್ಯ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದಿದ್ದರು. ಅವರ ಶ್ರೇಷ್ಠ ಸಾಧನೆ 10.27 ಸೆ.ಗಳಾಗಿದೆ.

ಮಹಾರಾಷ್ಟ್ರದ ಸುದೇಷ್ಣಾ ಶಿವಣಕರ್ ಅವರು ಮಹಿಳೆಯರ ವಿಭಾಗದಲ್ಲಿ ವೇಗದ ರಾಣಿ ಎನಿಸಿದರು. ಅವರು 11.76 ಸೆ.ಗಳಲ್ಲಿ ದೂರ ಕ್ರಮಿಸಿದರೆ, ತೀವ್ರ ಪೈಪೋಟಿ ನೀಡಿದ ತೆಲಂಗಾಣದ ನಿತ್ಯಾ ಗಂಧೆ (11.79ಸೆ.) ಬೆಳ್ಳಿ ಮತ್ತು ತಮಿಳುನಾಡಿನ ಗಿರಿಧಾರಿನಿ ರವಿಕುಮಾರ್ (11.88ಸೆ.) ಕಂಚಿನ ಪದಕ ಗೆದ್ದರು. ಮಹಿಳೆಯರ 10,000 ಮೀ. ಓಟದಲ್ಲಿ, ಪ್ಯಾರಿಸ್ ಒಲಿಂಪಿಯನ್ ಅಂಕಿತಾ ಧ್ಯಾನಿ ಎರಡನೇ ಸ್ಥಾನ ಪಡೆಯಬೇಕಾಯಿತು. ಅನುಭವಿ ಸಂಜೀವನಿ ಜಾಧವ್ (ಮಹಾರಾಷ್ಟ್ರ) 33ನಿ.33.47 ಸೆ.ಗಳಲ್ಲಿ ಓಡಿ ಚಿನ್ನ ಗೆದ್ದರು.

ಮಹಿಳೆಯರ 1,500 ಮೀ. ಓಟದಲ್ಲಿ 2022ರ ಆವೃತ್ತಿಯ ಚಾಂಪಿಯನ್ ಕೆ.ಎಂ.ಚಂದಾ 4ನಿ.17.74 ಸೆ.ಗಳಲ್ಲಿ ದೂರ ಕ್ರಮಿಸಿ, ರಾಷ್ಟ್ರೀಯ ದಾಖಲೆ ಹೊಂದಿರುವ ಮಧ್ಯಪ್ರದೇಶದ ಕೆ.ಎಂ.ದೀಕ್ಷಾ ಅವರನ್ನು ಹಿಂದೆ ಹಾಕಿದರು. ದೀಕ್ಷಾ 4ನಿ.21.92 ಸೆ. ತೆಗೆದುಕೊಂಡು ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

ಫಲಿತಾಂಶಗಳು: ಪುರುಷರು: 100 ಮೀ. ಓಟ: ಅನಿಮೇಶ್ ಕುಜೂರ್ (ಒಡಿಶಾ)–1, ಪ್ರಣವ್ ಗುರವ್ (ಮಹಾರಾಷ್ಟ್ರ)–2, ಆಮ್ಲನ್ ಬೊರ್ಗೊಹೈನ್ (ಅಸ್ಸಾಮ್)–3, ಕಾಲ: 10.28 ಸೆ.; 1,500 ಮೀ ಓಟ: ಯೂನುಸ್ ಶಾ (ಸರ್ವಿಸಸ್)–1, ರಿತೇಶ್ ಒಹ್ರೆ (ಮಧ್ಯಪ್ರದೇಶ)–2, ರಾಮ್ ಸಿಂಗ್ (ಉತ್ತರಾಖಂಡ)–3, ಕಾಲ: 3ನಿ.46.48 ಸೆ. ಮಹಿಳೆಯರು: 100 ಮೀ. ಓಟ: ಸುದೇಷ್ಣಾ ಶಿವಣಕರ್ (ಮಹಾರಾಷ್ಟ್ರ, 11.76 ಸೆ)–1, ನಿತ್ಯಾ ಗಂಧೆ (ತೆಲಂಗಾಣ, 11.79ಸೆ.)–2, ಗಿರಿಧಾರಿಣಿ ರವಿಕುಮಾರ್ (ತಮಿಳುನಾಡು, 11.88ಸೆ.)–3; 1,500 ಮೀ. ಓಟ: ಚಂದಾ ಕೆ.ಎಂ. (ದೆಹಲಿ)–1, ದೀಕ್ಷಾ (ಮಧ್ಯಪ್ರದೇಶ)–2, ಅಮನದೀಪ್ ಕೌರ್ (ಪಂಜಾಬ್)–3, ಕಾಲ: 4ನಿ.17.74 ಸೆ.

ಟೆನಿಸ್: ಸೆಮಿಗೆ ಪ್ರಜ್ವಲ್– ನಿಕಿ ಜೋಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಎಸ್.ಡಿ. ಪ್ರಜ್ವಲ್ ದೇವ್ ಮತ್ತು ನಿಕಿ ಪೂಣಚ್ಚ ಅವರು ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ನಡೆಯುತ್ತಿರುವ 38ನೇ ರಾಷ್ಟ್ರೀಯ ಕ್ರೀಡಾಕೂಟದ ಪುರುಷರ ಡಬಲ್ಸ್ ಟೆನಿಸ್ ಸ್ಪರ್ಧೆಯಲ್ಲಿ ಸೆಮಿಫೈನಲ್ ಪ್ರವೇಶಿಸಿದರು.

ಕಳೆದ ವರ್ಷ ಆದಿಲ್ ಕಲ್ಯಾಣ್‌ಪುರ ಅವರೊಂದಿಗೆ ಬೆಳ್ಳಿ ಪದಕ ಗೆದ್ದಿದ್ದ ಪ್ರಜ್ವಲ್, ಈ ಬಾರಿ ನಿಕಿ ಅವರೊಂದಿಗೆ ಕಣಕ್ಕೆ ಇಳಿದಿದ್ದಾರೆ. ಅವರು ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ 6-1, 6-2ರಿಂದ ಮಹಾರಾಷ್ಟ್ರದ ಅನೂಪ್ ಮಹಾದೇವ್ ಮತ್ತು ಸಂದೇಶ್ ಡಿ. ಕುರಲೆಮ್ ಅವರನ್ನು ಹಿಮ್ಮೆಟ್ಟಿಸಿದರು. ಕರ್ನಾಟಕದ ಜೋಡಿಯು ಸೆಮಿಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ದೆಹಲಿಯ ಶಿವಂಕ್ ಭಟ್‌ನಗರ ಮತ್ತು ಸಾರ್ಥಕ್ ಸುಡೆನ್ ಅವರನ್ನು ಎದುರಿಸಲಿದೆ.

ಮೈಸೂರಿನ ಪ್ರಜ್ವಲ್ ಸಿಂಗಲ್ಸ್ ಸ್ಪರ್ಧೆಯಲ್ಲೂ ಶುಭಾರಂಭ ಮಾಡಿದರು. ಅವರು 7-6 (7-4), 7-5ರಿಂದ ಉತ್ತರ ಪ್ರದೇಶದ ಮಾನ್ ಕೇಸರ್ವಾನಿ ಅವರನ್ನು ಸೋಲಿಸಿ ಎರಡನೇ ಸುತ್ತು ಪ್ರವೇಶಿಸಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಕರ್ನಾಟಕದ ಅಮೋದಿನಿ ವಿ. ನಾಯ್ಕ್ ಎರಡನೇ ಸುತ್ತಿಗೆ ಮುನ್ನಡೆದರು. ಅವರು ಮೊದಲ ಸುತ್ತಿನಲ್ಲಿ 6-2, 3-6, 6-3ರಿಂದ ಗುಜರಾತ್‌ನ ಸೌಮ್ಯಾ ವಿಗ್ ಅವರನ್ನು ಸೋಲಿಸಿದರು. ಆದರೆ, ಕರ್ನಾಟಕದ ಮತ್ತೊಬ್ಬ ಆಟಗಾರ್ತಿ ಸೋಹಾ ಸಾದಿಕ್ ಆರಂಭಿಕ ಸುತ್ತಿನಲ್ಲಿ ಪರಾಭವಗೊಂಡರು. ಹರಿಯಾಣದ ಅಂಜಲಿ ರಾಥಿ 6-1, 7-5ರಿಂದ ಸೋಹಾ ಅವರನ್ನು ಮಣಿಸಿದರು.

ಮಹಿಳೆಯರ ಡಬಲ್ಸ್‌ನ ಕ್ವಾರ್ಟರ್ ಫೈನಲ್‌ನಲ್ಲಿ ಕರ್ನಾಟಕದ ಹರ್ಷಿಣಿ ನಾಗರಾಜ್ ಮತ್ತು ಶ್ರೀನಿಧಿ ಬಾಲಾಜಿ ಜೋಡಿಯು 2–6, 6–2, 9–11ರಿಂದ ಉತ್ತರಾಖಂಡದ ಜಯ ಕಪೂರ್ ಮತ್ತು ದಿಯಾ ಚೌಧರಿ ಅವರಿಗೆ ಶರಣಾಯಿತು.

ಹಾಕಿ–ಕರ್ನಾಟಕಕ್ಕೆ ಮೂರನೇ ಜಯ: ಹರಿದ್ವಾರ: ಕರ್ನಾಟಕ ತಂಡ ಲೀಗ್ ಪಂದ್ಯದಲ್ಲಿ ಮಣಿಪುರ ತಂಡವನ್ನು ಸೋಲಿಸಿ ರಾಷ್ಟ್ರೀಯ ಕ್ರೀಡೆಗಳ ಪುರುಷರ ವಿಭಾಗದ ಹಾಕಿ ಸ್ಪರ್ಧೆಗಳ ‘ಎ’ ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು.

ಶನಿವಾರ ನಡೆದ ಪಂದ್ಯದಲ್ಲಿ ಕರ್ನಾಟಕ 4–1 ರಿಂದ ಮಣಿಪುರವನ್ನು ಸೋಲಿಸಿತು. ಗಣೇಶ್ ಮಜ್ಜಿ (18ನೇ ನಿ), ಸೂರ್ಯ ಎನ್.ಎಂ. (31ನೇ ನಿ), ಭರತ್ ಮಹಾಲಿಂಗಪ್ಪ ಕುರ್ತಕೋಟಿ (54ನೇ ನಿ) ಮತ್ತು ಸಿ.ಶಮಂತ್ (55ನೇ ನಿ) ಗೋಲು ಹೊಡೆದರು. ಮಣಿಪುರದ ಏಕೈಕ ಗೋಲನ್ನು ರೋಹಿತ್ ಸಿಂಗ್ 47ನೇ ನಿಮಿಷ ಗಳಿಸಿದರು.

ಪದಕ ಪಟ್ಟಿ

ತಂಡ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಸರ್ವೀಸಸ್	42	16	13	71
ಕರ್ನಾಟಕ	30	12	16	58
ಮಹಾರಾಷ್ಟ್ರ	25	42	46	113
ಮಧ್ಯಪ್ರದೇಶ	19	13	18	50
ಹರಿಯಾಣ	18	26	28	72
ಉತ್ತರಾಖಂಡ	14	22	26	62
ತಮಿಳುನಾಡು	14	19	21	54

ರಣಜಿ ಟ್ರೋಫಿ: ವಿದರ್ಭ ತಂಡಕ್ಕೆ ಆಸರೆಯಾದ ಕನ್ನಡಿಗ

ಕರುಣ್ ನಾಯರ್ ಸೂಪರ್ ಶತಕ

ಕರುಣ್ ನಾಯರ್ ಶತಕ ಸಂಭ್ರಮ –ಪಿಟಿಐ ಚಿತ್ರ

ನಾಗಪುರ (ಪಿಟಿಐ): ವಿದರ್ಭ ತಂಡದಲ್ಲಿ ಆಡುತ್ತಿರುವ ಕರ್ನಾಟಕದ ಕರುಣ್ ನಾಯರ್ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಸುಂದರ ಶತಕ ದಾಖಲಿಸಿದರು.

ವಿದರ್ಭ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಶನಿವಾರ ತಮಿಳುನಾಡು ತಂಡದ ವಿರುದ್ಧ ಆರಂಭವಾದ ಎಂಟರ ಘಟ್ಟದ ಪಂದ್ಯ ಮೊದಲ ದಿನದಾಟದಲ್ಲಿ ವಿದರ್ಭ ತಂಡವು 89 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 264 ರನ್ ಗಳಿಸಿತು.

44 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ವಿದರ್ಭ ತಂಡಕ್ಕೆ ಕರುಣ್ ನಾಯರ್ (ಬ್ಯಾಟಿಂಗ್ 100; 180ಎ, 4X14, 6X1) ಮತ್ತು ದಾನೀಶ್ ಮಳೆವಾರ್ (75; 119ಎ, 4X13) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 98 ರನ್ ಸೇರಿಸಿದರು. ಇದರಿಂದಾಗಿ ತಂಡವು ಉತ್ತಮ ಮೊತ್ತದತ್ತ ಕಾಲಿಟ್ಟಿತು.

ಈ ಬಾರಿಯ ದೇಶಿ ಋತುವಿನಲ್ಲಿ ಅಮೋಘ ಲಯದಲ್ಲಿರುವ 33 ವರ್ಷದ ಕರುಣ್ ಅವರಿಗೆ ಇದು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 22ನೇ ಶತಕ. ಗುಂಪು ಹಂತದಲ್ಲಿ ಹೈದರಾಬಾದ್ ವಿರುದ್ಧವೂ ಅವರು ಶತಕ ಗಳಿಸಿದ್ದರು. ಈಚೆಗೆ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಅವರು ನಾಲ್ಕು ಶತಕಗಳನ್ನು ಹೊಡೆದಿದ್ದರು.

ತಮಿಳುನಾಡು ತಂಡದ ಬೌಲರ್ ವಿಜಯ್ ಶಂಕರ್ (50ಕ್ಕೆ2) ಅವರು ದಾನೀಶ್ ವಿಕೆಟ್ ಗಳಿಸಿ ಜೊತೆಯಾಟ ಮುರಿದರು. ಕರುಣ್ ಕ್ರೀಸ್‌ನಲ್ಲಿದ್ದಾರೆ.

ಚಿಂತನ್, ಪಟೇಲ್ ಮಿಂಚು: ನಾಯಕ ಚಿಂತನ್ ಗಜ (48ಕ್ಕೆ4) ಮತ್ತು ಜಯಮೀತ್ ಪಟೇಲ್ (37ಕ್ಕೆ2) ಅವರ ಅಮೋಘ ಬೌಲಿಂಗ್ ಬಲದಿಂದ ಗುಜರಾತ್ ತಂಡವು ಇಲ್ಲಿ ನಡೆಯುತ್ತಿರುವ ಕ್ವಾರ್ಟರ್‌ಫೈನಲ್‌ನಲ್ಲಿ ಸೌರಾಷ್ಟ್ರ ತಂಡವನ್ನು 216 ರನ್‌ಗಳಿಗೆ ಕಟ್ಟಿಹಾಕಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ವಿದರ್ಭ: 89 ಓವರ್‌ಗಳಲ್ಲಿ 6ಕ್ಕೆ264 (ಧ್ರುವ ಶೋರೆ 26, ದಾನಿಶ್ ಮಳೆವಾರ್ 75, ಕರುಣ್ ನಾಯರ್ ಬ್ಯಾಟಿಂಗ್ 100, ಅಕ್ಷಯ್ ವಾಡಕರ್ 24, ವಿಜಯ ಶಂಕರ್ 50ಕ್ಕೆ2) ವಿರುದ್ಧ ತಮಿಳುನಾಡು.

ರಾಜ್‌ಕೋಟ್: ಸೌರಾಷ್ಟ್ರ : 72.1 ಓವರ್‌ಗಳಲ್ಲಿ 216 (ಹರ್ವಿಕ್ ದೇಸಾಯಿ 22, ಚಿರಾಗ್ ಜಾನಿ 69, ಚೇತೇಶ್ವರ್ ಪೂಜಾರ 26, ಅರ್ಪಿತ್ ವಸವಡಾ ಔಟಾಗದೆ 39, ಧರ್ಮೇಂದ್ರಸಿಂಹ ಜಡೇಜ 22, ಚಿಂತನ್ ಗಜ 48ಕ್ಕೆ4, ಜೈಮೀತ್ ಪಟೇಲ್ 37ಕ್ಕೆ2, ಸಿದ್ಧಾರ್ಥ್ ದೇಸಾಯಿ 35ಕ್ಕೆ2) . ಗುಜರಾತ್: 5 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 21 (ಪ್ರಿಯಾಂಕ್ ಪಾಂಚಾಲ್ ಬ್ಯಾಟಿಂಗ್ 11, ಆರ್ಯ ದೇಸಾಯಿ ಬ್ಯಾಟಿಂಗ್ 10)

ಪುಣೆ: ಜಮ್ಮು–ಕಾಶ್ಮೀರ: 86 ಓವರ್‌ಗಳಲ್ಲಿ 8ಕ್ಕೆ228 (ಯಾವೆರ್ ಹಸನ್ 24, ಕನಯ್ಯಾ ವಾಧ್ವಾನ್ 48, ಸಾಹಿಲ್ ಲೋತ್ರಾ 35, ಲೋನ್ ನಾಸಿರ್ ಮುಜಾಫಿರ್ 44, ಅಬಿದ್ ಮುಷ್ತಾಕ್ 19, ಮೊಹಮ್ಮದ್ ನಿಧೀಶ್ 56ಕ್ಕೆ5) ವಿರುದ್ಧ ಕೇರಳ.

ಮುಂಬೈ ತಂಡಕ್ಕೆ ಶಮ್ಸ್–ತನುಷ್ ಆಸರೆ

ಕೋಲ್ಕತ್ತ (ಪಿಟಿಐ): ಮುಂಬೈ ತಂಡಕ್ಕೆ ಬಾಲಂಗೋಚಿ ಬ್ಯಾಟರ್ ಶಮ್ಸ್ ಮುಲಾನಿ ಹಾಗೂ ತನುಷ್ ಕೋಟ್ಯಾನ್ ಮತ್ತೊಮ್ಮೆ ಆಸರೆಯಾದರು.

ಹರಿಯಾಣ ವಿರುದ್ಧ ಆರಂಭವಾದ ಕ್ವಾರ್ಟರ್ ಫೈನಲ್‌ನಲ್ಲಿ ತನುಷ್ ಮತ್ತು ಶಮ್ಸ್ ಅವರು ಎಂಟನೇ ವಿಕೆಟ್ ಜೊತೆಯಾಟದಲ್ಲಿ 165 ರನ್ ಸೇರಿಸಿದರು. ಇದರಿಂದಾಗಿ ದಿನದಾಟದ ಅಂತ್ಯಕ್ಕೆ ಮುಂಬೈ ತಂಡವು 81 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 278 ರನ್ ಗಳಿಸಿತು. ತನುಷ್ (ಬ್ಯಾಟಿಂಗ್ 85; 154ಎ) ಕ್ರೀಸ್‌ನಲ್ಲಿದ್ದಾರೆ. ಶಮ್ಸ್ (91; 178ಎ) ಶತಕದಂಚಿನಲ್ಲಿ ಎಡವಿದರು. ಆದರೆ ತಂಡವನ್ನು ಸುಸ್ಥಿತಿಗೆ ತರುವಲ್ಲಿ ಯಶಸ್ವಿಯಾದರು. ಟಾಸ್ ಗೆದ್ದ ಮುಂಬೈ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಹರಿಯಾಣ ವೇಗಿ ಅನ್ಷುಲ್ ಕಾಂಭೋಜ್ (58ಕ್ಕೆ3) ಮತ್ತು ಸುಮಿತ್ ಕುಮಾರ್ (57ಕ್ಕೆ2) ಅವರಿಬ್ಬರ ಉತ್ತಮ ದಾಳಿಯಿಂದಾಗಿ ಮುಂಬೈ ತಂಡವು 113 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿತು. ಈ ಸಂದರ್ಭದಲ್ಲಿ ಶಮ್ಸ್ ದಿಟ್ಟ ಆಟವಾಡಿದರು. ಅವರಿಗೆ ತನುಷ್ ಬೆಂಬಲ ನೀಡಿದರು.

ಸಂಕ್ಷಿಪ್ತ ಸ್ಕೋರು: ಮುಂಬೈ: 81 ಓವರ್‌ಗಳಲ್ಲಿ 8ಕ್ಕೆ278 (ಅಜಿಂಕ್ಯ ರಹಾನೆ 31, ಶಿವಂ ದುಬೆ 28, ಶಮ್ಸ್ ಮುಲಾನಿ 91, ತನುಷ್ ಕೋಟ್ಯಾನ್ ಬ್ಯಾಟಿಂಗ್ 85, ಅನ್ಷುಲ್ ಕಾಂಭೋಜ್ 58ಕ್ಕೆ3, ಸುಮಿತ್ ಕುಮಾರ್ 57ಕ್ಕೆ2) ವಿರುದ್ಧ ಹರಿಯಾಣ.

ಇಂದು ಬಿಎಫ್‌ಸಿಗೆ ಜೆಎಫ್‌ಸಿ ಸವಾಲು

ಬೆಂಗಳೂರು: ಹ್ಯಾಟ್ರಿಕ್ ಸೋಲಿನಿಂದ ಕಂಗೆಟ್ಟಿರುವ ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ ಭಾನುವಾರ ಜೆಮ್‌ಶೆಡ್‌ಪುರ ಎಫ್‌ಸಿ ತಂಡವನ್ನು ಎದುರಿಸಲಿದೆ.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುವ ಹಣಾಹಣಿಯಲ್ಲಿ ಬಿಎಫ್‌ಸಿ ಗೆಲುವಿನ ಹಳಿಗೆ ಮರಳುವ ಛಲದಲ್ಲಿದೆ.

ಸತ್ಯಸಾಯಿ ಗ್ರಾಮದಲ್ಲಿ ಕ್ರಿಕೆಟ್ ಕಲರವ: ಭಾರತ ವನ್ ವರ್ಲ್ಡ್ ತಂಡಕ್ಕೆ ಪ್ರಶಸ್ತಿ

‘ಹಳೆ ಹುಲಿ’ಗಳ ಆರ್ಭಟಕ್ಕೆ ಮನಸೋತ ಮುದ್ದೇನಹಳ್ಳಿ

• ಗಿರೀಶ ದೊಡ್ಡಮನಿ

ಚಿಕ್ಕಾಬಳ್ಳಾಪುರ ಸಮೀಪದ ಮುದ್ದೇನಹಳ್ಳಿಯಲ್ಲಿ ಶನಿವಾರ ನಡೆದ ಟಿ20 ಕ್ರಿಕೆಟ್ ಪಂದ್ಯದಲ್ಲಿ ಗೆದ್ದ ಇಂಡಿಯಾ ವನ್ ವರ್ಲ್ಡ್ ತಂಡದ ನಾಯಕ ವೆಂಕಟೇಶ್ ಪ್ರಸಾದ್ ಅವರಿಗೆ ದೆಹಲಿಯಲ್ಲಿ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ ಅವರು ಟ್ರೋಫಿ ನೀಡಿದರು. ಸದ್ಗುರು ಮಧುಸೂದನ್ ಸಾಯಿ, ಮಾಜಿ ಕ್ರಿಕೆಟಿಗ ಸುನಿಲ್ ಗಾವಸ್ಕರ್ ಹಾಜರಿದ್ದರು

ಬೆಂಗಳೂರು: ಚುರುಕು ಬಿಸಿಲಿಗೆ ಮೈಯೊಡ್ಡಿ ನಿಂತಿದ್ದ ಬೆಟ್ಟದ ಮಡಿಲಲ್ಲಿರುವ ಮುದ್ದೇನಹಳ್ಳಿಯ ಸಾಯಿ ಕೃಷ್ಣನ್ ಕ್ರೀಡಾಂಗಣದಲ್ಲಿ ಶನಿವಾರ ಕ್ರಿಕೆಟ್ ಕಲರವ ಜೋರಾಗಿತ್ತು. ನೆತ್ತಿ ಸುಡುವ ಬಿಸಿಲನ್ನೂ ಲೆಕ್ಕಿಸದೇ ಸೇರಿದ್ದ ಕ್ರಿಕೆಟ್ ಪ್ರೇಮಿಗಳ ಕೇಕೆ, ಸಂಭ್ರಮದ ಕೂಗುಗಳು ಬೆಟ್ಟಕ್ಕಪ್ಪಳಿಸಿ ಪ್ರತಿಧ್ವನಿಸುತ್ತಿದ್ದವು.

ಸತ್ಯಸಾಯಿ ಗ್ರಾಮದಲ್ಲಿ ಶನಿವಾರ ಈ ಹಬ್ಬದ ವಾತಾವರಣಕ್ಕೆ ಕಾರಣವಾದವರು ಮಾಜಿ ಕ್ರಿಕೆಟಿಗರು. ದಶಕಗಳ ಹಿಂದೆ ಭಾರತ ಮತ್ತು ಶ್ರೀಲಂಕಾ ತಂಡಗಳಲ್ಲಿ ಬೆಳಗಿದ್ದ ಆಟಗಾರರು ತಾವಿನ್ನೂ ಕ್ರಿಕೆಟ್ ಮರೆತಿಲ್ಲ ಎಂಬುದನ್ನು ಇಲ್ಲಿ ಮತ್ತೆ ತೋರಿಸಿಕೊಟ್ಟರು. ಆ ಕ್ರಿಕೆಟಿಗರ ಗತವೈಭವ ನೆನೆಯುತ್ತ ಪ್ರಸ್ತುತ ಪಂದ್ಯದಲ್ಲಿ ಅವರ ಆಟ ನೋಡುವ ಅಪರೂಪದ ಅನುಭವ ಇಲ್ಲಿ ಸೇರಿದ್ದವರಿಗೆ ಆಯಿತು.

ಸಾಯಿ ಕೃಷ್ಣನ್ ಕ್ರೀಡಾಂಗಣದಲ್ಲಿ ನಡೆದ ಟಿ20 ಪಂದ್ಯದಲ್ಲಿ ವೆಂಕಟೇಶ್ ಪ್ರಸಾದ್ ನಾಯಕತ್ವದ ಇಂಡಿಯಾ ವನ್‌ವರ್ಲ್ಡ್ ತಂಡವು 6 ರನ್‌ಗಳಿಂದ ಅರವಿಂದ್ ಡಿಸಿಲ್ವಾ ಮುಂದಾಳತ್ವದ ಶ್ರೀಲಂಕಾ ಒನ್ ಫ್ಯಾಮಿಲಿ ತಂಡದ ವಿರುದ್ಧ ಜಯಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡದ ಆರಂಭಿಕ ಬ್ಯಾಟರ್ ನಮನ್ ಓಜಾ (53; 27ಎಸೆತ) ತಮ್ಮ ಬೀಸು ಹೊಡೆತಗಳಿಂದ ಜನರ ಮನರಂಜಿಸಿದರು. ಕರ್ನಾಟಕದವರೇ ಆದ ಸುಜಿತ್ ಸೋಮಸುಂದರ್ (3 ರನ್) ನಮನ್ ಜೊತೆಗೆ ಇನಿಂಗ್ಸ್ ಆರಂಭಿಸಿದರು. ಲಂಕಾದ ಎಡಗೈ ವೇಗಿ ಚಮಿಂದಾ ವಾಸ್ ಮೊದಲ ವಿಕೆಟ್ ಗಳಿಸಿದರು. 800 ಸಂಖ್ಯೆಯ ಜೆರ್ಸಿ ತೊಟ್ಟಿದ್ದ ಆಫ್‌ಸ್ಪಿನ್ ದಿಗ್ಗಜ ಮುತ್ತಯ್ಯ ಮುರಳೀಧರನ್ ಅವರ ಎಸೆತದಲ್ಲಿ ನಮನ್ ಇನಿಂಗ್ಸ್‌ಗೆ ತೆರೆಬಿತ್ತು. ಟೆಸ್ಟ್ ಕ್ರಿಕೆಟ್‌ನಲ್ಲಿ ತಾವು ಪಡೆದ ವಿಕೆಟ್‌ಗಳ ಸಂಖ್ಯೆಯನ್ನೇ ಅವರ ಜೆರ್ಸಿಗೆ ನೀಡಲಾಗಿತ್ತು.

ಯೂಸುಫ್ ಪಠಾಣ್ 32 ಎಸೆತಗಳಲ್ಲಿ 61 ರನ್ ಸಿಡಿಸಿದರು. ಅವರ ಸಹೋದರ ಇರ್ಫಾನ್ 3 ರನ್ ಗಳಿಸಿ ಔಟಾದರು. ಇವರಿಬ್ಬರೂ ಕ್ರೀಸ್‌ನಲ್ಲಿದ್ದಾಗ ಪ್ರೇಕ್ಷಕರ ಉತ್ಸಾಹ ಮೇರೆ ಮೀರಿತ್ತು. ಮನೋಜ್ ತಿವಾರಿ (44; 29ಎ) ತಂಡವು 6 ವಿಕೆಟ್‌ಗೆ 195 ರನ್ ಗಳಿಸಲು ನೆರವಾದರು.

ಇದಕ್ಕುತ್ತರವಾಗಿ ಲಂಕಾ ಬಳಗವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 189 ರನ್ ಗಳಿಸಿತು. ಲಂಕಾ ತಂಡ ಭರ್ಜರಿ ಆರಂಭ ಮಾಡಿತು. ಆರಂಭಿಕ ಜೋಡಿ ಉಪುಲ್ ತರಂಗ (51; 28ಎ) ಮತ್ತು ರೊಮೇಶ್ ಕಲುವಿತರಣ (45; 36ಎ) ಬೌಲರ್‌ಗಳನ್ನು ಕಾಡಿದರು.

ಸ್ಪಿನ್ನರ್ ಪಿಯೂಷ್ ಚಾವ್ಲಾ ಅವರು ತರಂಗ ವಿಕೆಟ್ ಗಳಿಸಿದರು. ರೊಮೇಶ್ ಮತ್ತು ಮಿಲಿಂದಾ (40; 17ಎ) ಜೊತೆಗೂಡಿ ಅಬ್ಬರಿಸಿದರು. ಚೆಂಡನ್ನು ಬೌಂಡರಿಗೆರೆ ದಾಟಿಸುವಲ್ಲಿ ನಿರತರಾದರು. 1996ರ ವಿಶ್ವಕಪ್ ಟೂರ್ನಿಯಲ್ಲಿ ಜಯಸೂರ್ಯ ಅವರೊಂದಿಗೆ ಇನಿಂಗ್ಸ್ ಆರಂಭಿಸುತ್ತಿದ್ದ ಅಬ್ಬರದ ಆಟವಾಡುತ್ತಿದ್ದ ನೆನಪುಗಳನ್ನು ಕಲುವಿತರಣ ಅವರು ಇಲ್ಲಿ ಮತ್ತೆ ನೆನಪಿಸಿದರು. ‘ಗದುಗಿನ ಸ್ಪಿನ್ನರ್’ ಸುನೀಲ್ ಜೋಶಿ ಎಸೆತದಲ್ಲಿ ಮಿಲಿಂದಾ ಮತ್ತು ವೆಂಕಿ ಎಸೆತದಲ್ಲಿ ಕಲುವಿತರಣ ಅವರು ಔಟಾದರು. ನಂತರ ಬಂದ ಬ್ಯಾಟರ್‌ಗಳಲ್ಲಿ ಅರವಿಂದ್ ಡಿಸಿಲ್ವಾ (16;14ಎ) ಹೋರಾಟ ಮಾಡಿದರು. ಕೊನೆಯ ಓವರ್‌ನಲ್ಲಿ 14 ರನ್‌ಗಳ ಅಗತ್ಯವಿತ್ತು. ಈ ಓವರ್‌ನಲ್ಲಿ ‘ಪೀಣ್ಯ ಎಕ್ಸ್‌ಪ್ರೆಸ್’ ಅಭಿಮನ್ಯು ಮಿಥುನ್ ತಂಡವನ್ನು ಗೆಲುವಿನ ದಡ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಇಂಡಿಯಾ ವನ್ ವರ್ಲ್ಡ್: 20 ಓವರ್‌ಗಳಲ್ಲಿ 6ಕ್ಕೆ195 (ನಮನ್ ಓಜಾ 53, ಸುಜಿತ್ ಸೋಮಸುಂದರ್ 3, ಬದರಿನಾಥ್ 15, ಮನೋಜ್ ತಿವಾರಿ 44, ಯೂಸುಫ್ ಪಠಾಣ್ 61, ತಿಲಾನಾ 47ಕ್ಕೆ2, ಅಸೆಲಾ 23ಕ್ಕೆ2) ಶ್ರೀಲಂಕಾ ಒನ್ ಫ್ಯಾಮಿಲಿ: 20 ಓವರ್‌ಗಳಲ್ಲಿ 9ಕ್ಕೆ189 (ಉಪುಲ್ ತರಂಗಾ 51, ರೊಮೇಶ್ ಕಲುವಿತರಣ 45, ಮಿಲಿಂದಾ 40, ಅರವಿಂದ್ ಡಿಸಿಲ್ವಾ 16, ಮನೋಜ್ ತಿವಾರಿ 20ಕ್ಕೆ3, ವೆಂಕಟೇಶ್ ಪ್ರಸಾದ್ 25ಕ್ಕೆ3) **ಫಲಿತಾಂಶ:** ಭಾರತ ಒನ್ ವರ್ಲ್ಡ್ ತಂಡಕ್ಕೆ 6 ರನ್‌ಗಳ ಜಯ.